ಅಲ್ಲಾಹನೆಡೆಗೆ

# ದಅ್‌ವಾ ಮಾಡುವವನ ಪೂರ್ವಸಿದ್ಧತೆ

بسم الله الرحمن الرحيم

**ಪರಮ ದಯಾಮಯನೂ ಕರುಣಾಮಯಿಯೂ**
**ಆದ ಅಲ್ಲಾಹುವಿನ ನಾಮದಿಂದ**

ಅಶ್ಶೈಖ್ ಮುಹಮ್ಮದ್ ಇಬ್ನ್ ಸಾಲಿಹ್ ಅಲ್‌ಉಸೈಮೀನ್(رحمه الله)

# ಅಲ್ಲಾಹನೆಡೆಗೆ ದಅ್‌ವಾ ಮಾಡುವವನ ಪೂರ್ವಸಿದ್ಧತೆ

ಅನುವಾದ ಮತ್ತು ಟಿಪ್ಪಣಿಗಳು:
ಮುಹಮ್ಮದ್ ಹಂಝಾ ಪುತ್ತೂರು

ಪ್ರಕಾಶಕರು:
ಮನ್‌ಹಜ್ ಅಲ್‌ಅಂಬಿಯಾ ಕಾಲ್ & ಗೈಡೆನ್ಸ್ ಸೆಂಟರ್
ಮಂಗಳೂರು

ALL RIGHTS RESERVED © جميع الحقوق محفوظة

no part of this book may be reproduced or transmitted in any form or by any means, electronic, mechanical, including photocopy, recording, or any information storage and retrieval system, without permission in writing from the publisher

First Edition: Jan 2013

Title : Allahanedege Da'wa Maduvavana Poorvasiddhate
Author : As Shaykh Muhammad Ibn Saalih Al Uthaymeen
Translation & Footnotes: Muhammad Hamza Puttur
Printers : Pixel Printers & Designers, Mangalore
Copies : 2000
Price : 25.00

Typesetting & DTP :

IMAGE PUBLICATIONS
PUTTUR - 574 201
*imageputtur@hotmail.com*

---

PUBLISHERS:

Manhaj-Al-Ambiya
Call & Guidance Centre
Mangalore - 575 001
*email: al.ambiya@gmail.com*
*dawathu-salafiyya@hotmail.com*

# ಒಳಪುಟಗಳಲ್ಲಿ....

ಪೀಠಿಕೆ 7

ಮೊದಲನೆ ಪೂರ್ವಸಿದ್ಧತೆ:
ದಅ್‌ವಾ ಮಾಡುವವನು ಅವನು ಯಾವುದರೆಡೆಗೆ ದಅ್‌ವಾ ಮಾಡುತ್ತಿರುವನೋ ಅದರಲ್ಲಿ ಇಲ್ಮನ್ನು ಹೊಂದಿರಬೇಕಾಗಿದೆ 12

ಎರಡನೆ ಪೂರ್ವಸಿದ್ಧತೆ:
ದಅ್‌ವಾ ಮಾಡುವವನು ತನ್ನ ದಅ್‌ವಾದಲ್ಲಿ ತಾಳ್ಮೆಯುಳ್ಳವನಾಗಿರಬೇಕಾಗಿದೆ 21

ಮೂರನೆ ಪೂರ್ವಸಿದ್ಧತೆ:
ಹಿಕ್ಮತ್, ಹಿಕ್ಮತ್‌ನೊಂದಿಗೆ ಅಲ್ಲಾಹನೆಡೆಗೆ ದಅ್‌ವಾ ಮಾಡಬೇಕಾಗಿದೆ 35

ನಾಲ್ಕನೆ ಪೂರ್ವಸಿದ್ಧತೆ:
ದಅ್‌ವಾ ಮಾಡುವವನು ಅತ್ಯುತ್ಕೃಷ್ಟವಾದ ಸ್ವಭಾವವನ್ನು ಹೊಂದಿರಬೇಕಾಗಿದೆ 46

ಐದನೆ ಪೂರ್ವಸಿದ್ಧತೆ:
ದಅ್‌ವಾ ಮಾಡುವವನು ಎಲ್ಲ ಅಡೆತಡೆಗಳನ್ನು ಧ್ವಂಸ ಮಾಡಬೇಕಾಗಿದೆ 48

ಆರನೆ ಪೂರ್ವಸಿದ್ಧತೆ:
ದಅ್‌ವಾ ಮಾಡುವವನ ಹೃದಯವು ವಿರುದ್ಧಾಭಿಪ್ರಾಯ ಹೊಂದಿದವನಿಗೆ ತೆರೆದುಕೊಳ್ಳಬೇಕಾಗಿದೆ 50

# المقدمة

# ಪೀಠಿಕೆ

بسم الله الرحمن الرحيم

ಸರ್ವಸ್ತುತಿ ಅಲ್ಲಾಹನಿಗೆ. ನಾವು ಅವನನ್ನು ಸ್ತುತಿಸುತ್ತೇವೆ, ಅವನೊಂದಿಗೆ ಸಹಾಯವನ್ನು ಬೇಡುತ್ತೇವೆ ಮತ್ತು ಅವನಲ್ಲಿ ಕ್ಷಮೆಯನ್ನು ಬೇಡುತ್ತೇವೆ. ನಾವು ಅವನೆಡೆಗೆ ಪಶ್ಚಾತ್ತಾಪದೊಂದಿಗೆ ಮರಳುತ್ತೇವೆ. ನಮ್ಮ ಶರೀರಗಳ ಕೆಡುಕಿನಿಂದ ಮತ್ತು ನಮ್ಮ ಕರ್ಮಗಳ ಕೆಡುಕಿನಿಂದ ನಾವು ಅಲ್ಲಾಹನೊಂದಿಗೆ ರಕ್ಷಣೆಯನ್ನು ಬೇಡುತ್ತೇವೆ. ಅಲ್ಲಾಹು ಯಾರಿಗೆ ಮಾರ್ಗದರ್ಶನ ಮಾಡುತ್ತಾನೋ ಅವನನ್ನು ದಾರಿಗೆಡಿಸುವವರಾರೂ ಇಲ್ಲ. ಅವನು ಯಾರನ್ನು ದಾರಿಗೆಡಿಸುತ್ತಾನೋ ಅವನಿಗೆ ಮಾರ್ಗದರ್ಶನ ಮಾಡುವವರಾರೂ ಇಲ್ಲ.

ಅಲ್ಲಾಹನ ಹೊರತು ಆರಾಧನೆಗೆ ನೈಜ ಹಕ್ಕುದಾರರಾಗಿ ಅನ್ಯರಿಲ್ಲ ಮತ್ತು ಅವನು ಏಕೈಕನೂ ಸಹಭಾಗಿರಹಿತನೂ ಆಗಿದ್ದಾನೆಂದು ನಾನು ಸಾಕ್ಷಿವಹಿಸುತ್ತೇನೆ. ಮುಹಮ್ಮದ್(ﷺ)ರವರು ಅವನ ದಾಸರೂ ಸಂದೇಶವಾಹಕರೂ ಆಗಿದ್ದಾರೆಂದು ನಾನು ಸಾಕ್ಷಿವಹಿಸುತ್ತೇನೆ. ಅಲ್ಲಾಹು ಅವರನ್ನು ಮಾರ್ಗದರ್ಶನದೊಂದಿಗೆ ಮತ್ತು ಸತ್ಯಧರ್ಮದೊಂದಿಗೆ ಕಳುಹಿಸಿದ್ದಾನೆ. ಅದನ್ನು ಎಲ್ಲ ಧರ್ಮಗಳ ಮೇಲೂ ಪ್ರಕಟಪಡಿಸುವುದಕ್ಕಾಗಿ. ಅವರು ಸಂದೇಶವನ್ನು ತಲುಪಿಸಿದ್ದಾರೆ, ಅಮಾನತ್ತನ್ನು ನೆರವೇರಿಸಿದ್ದಾರೆ, ಸಮುದಾಯಕ್ಕೆ ಪ್ರಾಮಾಣಿಕವಾಗಿ ಉಪದೇಶ ಮಾಡಿದ್ದಾರೆ ಮತ್ತು ಅಲ್ಲಾಹನ ಮಾರ್ಗದಲ್ಲಿ ಜಿಹಾದ್ ಮಾಡಬೇಕಾದ ರೀತಿಯಲ್ಲೇ ಜಿಹಾದ್ ಮಾಡಿದ್ದಾರೆ. ಅವರು ತಮ್ಮ ಸಮುದಾಯವನ್ನು ಬೆಳ್ಳಗಿನ ಪಥದ ಮೇಲೆ ಬಿಟ್ಟು ಹೋಗಿದ್ದಾರೆ. ಅದರ ರಾತ್ರಿ ಹಗಲಿನಂತಿದೆ. ಸ್ವಯಂ ನಾಶವಾದವನ ಹೊರತು ಇತರ ಯಾರೂ ಅದರಿಂದ ಬೇರೆ ಕಡೆಗೆ ತಿರುಗಲಾರರು. [1]

---

**1** ಅಲ್‌ಇರ್ಬಾದ್ ಇಬ್ನ್ ಸಾರಿಯಾ(رضي الله عنه)ರಿಂದ ವರದಿ: ಅವರು ಹೇಳಿದರು: ಅಲ್ಲಾಹನ ಸಂದೇಶವಾಹಕರು(ﷺ) ನಮಗೊಂದು ಉಪದೇಶ ಮಾಡಿದರು. ಅದರಿಂದಾಗಿ ನಮ್ಮ ಕಣ್ಣುಗಳಿಂದ ಕಣ್ಣೀರು ಹರಿದವು. ನಮ್ಮ ಹೃದಯಗಳು ಭಯದಿಂದ ನಡುಗಿದವು. ಆಗ ನಾವು ಕೇಳಿದೆವು: 'ಓ ಅಲ್ಲಾಹನ ಸಂದೇಶವಾಹಕರೇ, ಇದೊಂದು ಅಗಲುವಿಕೆಯ ಉಪದೇಶದಂತಿದೆ. ಆದ್ದರಿಂದ ತಾವು

ಆದ್ದರಿಂದ ಅವರ ಮೇಲೂ, ಅವರ ಕುಟುಂಬ ಮತ್ತು ಸಹಾಬಾಗಳ ಮೇಲೂ, ಪ್ರತಿಫಲ ದಿನದ ತನಕ ಇಹ್ಸಾನ್‌ನೊಂದಿಗೆ ಅವರನ್ನು ಅನುಸರಿಸಿದವರ ಮೇಲೂ ಅಲ್ಲಾಹನ ಸಲಾತ್ ಮತ್ತು ಸಲಾಮ್‌ಗಳು ಇರಲಿ. ಅಲ್ಲಾಹು ನನ್ನನ್ನೂ ನಿಮ್ಮನ್ನೂ ಆಂತರಿಕವಾಗಿಯೂ ಬಹಿರಂಗವಾಗಿಯೂ ಅವರ ಅನುಯಾಯಿಗಳಲ್ಲಿ ಸೇರಿಸಲಿ, ನಮ್ಮನ್ನು ಅವರ ಧರ್ಮದಲ್ಲೇ ಮೃತಪಡಿಸಲಿ, ನಮ್ಮನ್ನು ಅವರ ಗುಂಪಿನೊಂದಿಗೇ ಮಹ್‌ಶರಾದಲ್ಲಿ ಒಟ್ಟುಗೂಡಿಸಲಿ, ನಮ್ಮನ್ನು ಅವರ ಶಫಾಅತ್ತಿನಲ್ಲಿ ಸೇರಿಸಲಿ ಮತ್ತು ಅಲ್ಲಾಹು ಅನುಗ್ರಹಿಸಿದ ಪ್ರವಾದಿಗಳು, ಸಿದ್ದೀಕ್‌ಗಳು, ಶುಹದಾಗಳು ಮತ್ತು ಸಾಲಿಹ್‌ಗಳೊಂದಿಗೆ ಅವನ ಅನುಗ್ರಹಪೂರ್ಣ ಸ್ವರ್ಗದಲ್ಲಿ ನಮ್ಮನ್ನು ಒಟ್ಟುಗೂಡಿಸಲಿ ಎಂದು ನಾನು ಅಲ್ಲಾಹನೊಂದಿಗೆ ಪ್ರಾರ್ಥಿಸುತ್ತೇನೆ.

ಮುಂದುವರಿದು ಹೇಳುವುದೇನೆಂದರೆ:

ಓ ಸಹೋದರರೇ, ನನಗೆ ಇಲ್ಲಿ [2] ಮತ್ತು ಒಳಿತನ್ನು ಹಾಗೂ ಧರ್ಮ ಪ್ರಚಾರವನ್ನು ನಿರೀಕ್ಷಿಸಲಾಗುವ ಸ್ಥಳಗಳಲ್ಲೆಲ್ಲ ನನ್ನ ಮುಸ್ಲಿಮ್ ಸಹೋದರರನ್ನು ಭೇಟಿಯಾಗಲು ತುಂಬಾ ಸಂತೋಷವಾಗುತ್ತಿದೆ. ಯಾಕೆಂದರೆ ಅಲ್ಲಾಹು ಯಾರಿಗೆಲ್ಲ ಇಲ್ಮ್ ನೀಡಿರುವನೋ ಅವರಿಂದೆಲ್ಲ ಅವನು ಇಲ್ಮ್ ನೀಡಿರುವುದಕ್ಕೆ ಬದಲಿಯಾಗಿ ಅವರು ಅದನ್ನು ಜನರಿಗೆ ವಿವರಿಸಿಕೊಡಬೇಕೆಂಬ ಮತ್ತು ಏನನ್ನೂ ಬಚ್ಚಿಡಬಾರದೆಂಬ ಕರಾರನ್ನು ಪಡೆದಿದ್ದಾನೆ. ಅಲ್ಲಾಹು [ತಆಲಾ] ಹೇಳಿರುವಂತೆ:

﴿وَإِذْ أَخَذَ ٱللَّهُ مِيثَٰقَ ٱلَّذِينَ أُوتُوا۟ ٱلْكِتَٰبَ لَتُبَيِّنُنَّهُۥ لِلنَّاسِ وَلَا تَكْتُمُونَهُۥ

---

ನಮಗೇನು ಆಜ್ಞಾಪಿಸುವಿರಿ?' ಅವರು ಹೇಳಿದರು: **'ನಾನು ನಿಮ್ಮನ್ನು ಬೆಳ್ಳಗಿನ ಪಥದ ಮೇಲೆ ಬಿಟ್ಟು ಹೋಗುತ್ತಿದ್ದೇನೆ. ಅದರ ರಾತ್ರಿಯು ಹಗಲಿನಂತಿದೆ. ಸ್ವಯಂ ನಾಶವಾದವನ ಹೊರತು ಇತರ ಯಾರೂ ನನ್ನ ಬಳಿಕ ಅದರಿಂದ ಬೇರೆ ಕಡೆಗೆ ತಿರುಗಲಾರರು. ನಿಮ್ಮಲ್ಲಿ ಬದುಕಿರುವವರು ಮುಂದೆ ಅನೇಕ ಭಿನ್ನಾಭಿಪ್ರಾಯಗಳನ್ನು ಕಾಣುವರು. ಆಗ ನನ್ನ ಸುನ್ನತ್ತಿನಿಂದ ಮತ್ತು ಸನ್ಮಾರ್ಗಿಗಳಾದ ಅಲ್‌ಖುಲಫಾಉ ರ್‍ರಾಶಿದೂನ್‌ಗಳ ಸುನ್ನತ್ತಿನಿಂದ ನೀವು ಏನನ್ನು ಅರಿತಿರುವಿರೋ ಅದನ್ನು ಬಿಗಿಯಾಗಿ ಹಿಡಿದುಕೊಳ್ಳಿರಿ. ಅದನ್ನು ದವಡೆ ಹಲ್ಲುಗಳಿಂದ ಕಚ್ಚಿ ಹಿಡಿಯಿರಿ. ನೀವು ಆಜ್ಞಾಪಾಲನೆ ಮಾಡಿರಿ. (ನಿಮ್ಮ ಆಡಳಿತಗಾರನು) ಇಥಿಯೋಪಿಯಾದ ಒಬ್ಬ ಗುಲಾಮನಾಗಿದ್ದರೂ ಸರಿ. ಯಾಕೆಂದರೆ ವಿಶ್ವಾಸಿಯ ಸ್ಥಿತಿಯು ಮೂಗುದಾರ ಹಾಕಿದ ಒಂದು ಒಂಟೆಯಂತಾಗಿದೆ. ಅದನ್ನು ಎತ್ತ ಸಾಗಿಸಲಾಗುವುದೋ ಅದು ಅತ್ತ ಸಾಗುತ್ತದೆ.'** [ಸುನನ್ ಇಬ್ನ್ ಮಾಜ ಪುಟ 21; ಹದೀಸ್ ನಂ. 43] [ಅಶ್ಶೈಖ್ ಅಲ್‌ಅಲ್ಬಾನೀ ಇದನ್ನು ಸಹೀಹ್ ಎಂದಿದ್ದಾರೆ. (ನೋಡಿ: 'ಸಹೀಹ್ ಸುನನ್ ಇಬ್ನ್ ಮಾಜ' 1/32)]

**2** ಈ ಕೃತಿಯನ್ನು ರಚಿಸಲಾಗಿರುವುದು ಅಶ್ಶೈಖ್ ಅಲ್‌ಉಸೈಮೀನ್‌ರವರು ಮಾಡಿದ ಒಂದು ಭಾಷಣದಿಂದಾಗಿದೆ. ಈ ಭಾಷಣವನ್ನು ಮೂಲ ಅರಬಿಯಲ್ಲಿ ಓದಲಿಚ್ಛಿಸುವವರು ಈ ವೆಬ್‌ಸೈಟ್ ವಿಳಾಸವನ್ನು ಸಂಪರ್ಕಿಸಬಹುದಾಗಿದೆ.

http://www.ibnothaimeen.com/all/books/cat_index_308.shtml

﴿ فَنَبَذُوهُ وَرَآءَ ظُهُورِهِمْ وَاشْتَرَوْا بِهِۦ ثَمَنًا قَلِيلًا ۖ فَبِئْسَ مَا يَشْتَرُونَ ﴿١٨٧﴾ ﴾

**“ಗ್ರಂಥ ನೀಡಲಾದವರೊಂದಿಗೆ (ಯಹೂದ ಮತ್ತು ಕ್ರೈಸ್ತರೊಂದಿಗೆ), ಖಂಡಿತವಾಗಿಯೂ ನೀವು ಅದನ್ನು (ಇಲ್ಮ್) ಜನರಿಗೆ ವಿವರಿಸಿಕೊಡಬೇಕು ಮತ್ತು ಅದನ್ನು ಬಚ್ಚಿಡಬಾರದೆಂದು ಅಲ್ಲಾಹು ಕರಾರು ಪಡೆದ ಸಂದರ್ಭ(ವನ್ನು ಸ್ಮರಿಸಿರಿ). ಆದರೆ ಅವರು ಅದನ್ನು ತಮ್ಮ ಬೆನ್ನ ಹಿಂದಕ್ಕೆ ಎಸೆದರು ಮತ್ತು ಅದರಿಂದ ತುಚ್ಛವಾದ ಲಾಭವನ್ನು ಖರೀದಿಸಿದರು. ಅವರು ಖರೀದಿಸಿದ್ದು ಅತ್ಯಂತ ನಿಕೃಷ್ಟವಾದುದೇ ಆಗಿದೆ!”** (3)

ಅಲ್ಲಾಹು ಪಡೆದಿರುವ ಈ ಕರಾರು ಬರೆದಿಡಲಾಗುವ ಮತ್ತು ಜನರು ಕಾಣುವಂತಹ ಕರಾರಲ್ಲ. ಆದರೆ ಈ ಕರಾರನ್ನು ಯಾರು ಹೊಂದಿರುವನೋ ಅವನಿಗೆ ಅಲ್ಲಾಹು ಇಲ್ಮ್ ನೀಡಿದ್ದಾನೆ ಎಂಬುದನ್ನು ಅದು ತಿಳಿಸುತ್ತದೆ. ಆದ್ದರಿಂದ ಅಲ್ಲಾಹು ಒಬ್ಬ ವ್ಯಕ್ತಿಗೆ ಇಲ್ಮ್ ನೀಡಿದರೆ ಅಲ್ಲಾಹು ಆ ವ್ಯಕ್ತಿಯೊಂದಿಗೆ ಈ ಕರಾರನ್ನು ಮಾಡುತ್ತಾನೆ. ಅಥವಾ ಅಲ್ಲಾಹು ಒಬ್ಬ ಮಹಿಳೆಗೆ ಇಲ್ಮ್ ನೀಡಿದರೆ ಆಕೆಯೊಂದಿಗೆ ಈ ಕರಾರನ್ನು ಮಾಡುತ್ತಾನೆ. ಆದ್ದರಿಂದ ಯಾರೆಲ್ಲರ ಬಳಿ ಇಲ್ಮ್ ಇದೆಯೋ ಅವರು ಅಲ್ಲಾಹನ [ಸುಬ್‌ಹಾನಹು ವತಆಲಾ] ಶರೀಅತ್ತಿನಿಂದ ಏನೆಲ್ಲ ಅರಿತಿರುವನೋ ಅದನ್ನು (ಜನರಿಗೆ) ತಲುಪಿಸಿಕೊಡಬೇಕಾಗಿದೆ. ಅದು ಯಾವುದೇ ಸ್ಥಳದಲ್ಲಾದರೂ ಅಥವಾ ಯಾವುದೇ ಸಂದರ್ಭದಲ್ಲಾದರೂ ಸರಿ.

ಓ ಸಹೋದರರೇ, ನಮ್ಮ ಈ ಭಾಷಣದ ವಿಷಯವು ‘ಝಾದು ದ್ದಾಇಯತಿ ಇಲಲ್ಲಾಹಿ ಅಝ್ಝ ವಜಲ್ಲ್’ [ಅಲ್ಲಾಹು (ಅಝ್ಝ ವಜಲ್ಲ್) ನೆಡೆಗೆ ದಅ್‌ವಾ ಮಾಡುವವನ ಪೂರ್ವಸಿದ್ಧತೆ] ಎಂದಾಗಿದೆ. ಪ್ರತಿಯೊಬ್ಬ ಮುಸ್ಲಿಮನ ಪೂರ್ವಸಿದ್ಧತೆಯು ಯಾವುದೆಂದರೆ ಅದು ಅಲ್ಲಾಹು ಈ ವಚನದಲ್ಲಿ ವಿವರಿಸಿದ್ದಾಗಿದೆ.

﴿ وَتَزَوَّدُوا فَإِنَّ خَيْرَ الزَّادِ التَّقْوَىٰ ﴾

**“ನೀವು ಪೂರ್ವಸಿದ್ಧತೆಗಳನ್ನು ಮಾಡಿಕೊಳ್ಳಿರಿ. ಖಂಡಿತವಾಗಿಯೂ ಪೂರ್ವಸಿದ್ಧತೆಯಲ್ಲಿ ಅತ್ಯುತ್ತಮವಾಗಿರುವುದು ತಕ್ವಾ ಆಗಿದೆ.”** (4)

ಆದ್ದರಿಂದ ಪ್ರತಿಯೊಬ್ಬ ಮುಸ್ಲಿಮನ ಪೂರ್ವಸಿದ್ಧತೆಯು ಅಲ್ಲಾಹನ [ಅಝ್ಝವಜಲ್ಲ್] ತಕ್ವಾ ಆಗಿದೆ. ಅಂದರೆ ಅಲ್ಲಾಹು ಆಜ್ಞೆಯ ಮೂಲಕ, ಅದನ್ನು ನಿರ್ವಹಿಸಿದವರನ್ನು

---

**3** **ಕುರ್‌ಆನ್** 3:187

**4** **ಕುರ್‌ಆನ್** 2:197

ಪ್ರಶಂಸಿಸುವ ಮೂಲಕ, ಅದರ ಪುಣ್ಯವನ್ನು ವಿವರಿಸುವ ಮೂಲಕ ಮತ್ತು ಇನ್ನಿತರ ವಾಕ್‌ಶೈಲಿಗಳ ಮೂಲಕ ಕುರ್‌ಆನ್‌ನಲ್ಲಿ ಪದೇ ಪದೇ ಪ್ರಸ್ತಾಪಿಸಿದ ತಕ್ವಾ ಆಗಿದೆ.

﴿ ۞ وَسَارِعُوٓاْ إِلَىٰ مَغۡفِرَةٖ مِّن رَّبِّكُمۡ وَجَنَّةٍ عَرۡضُهَا ٱلسَّمَٰوَٰتُ
وَٱلۡأَرۡضُ أُعِدَّتۡ لِلۡمُتَّقِينَ ١٣٣ ٱلَّذِينَ يُنفِقُونَ فِي ٱلسَّرَّآءِ وَٱلضَّرَّآءِ
وَٱلۡكَٰظِمِينَ ٱلۡغَيۡظَ وَٱلۡعَافِينَ عَنِ ٱلنَّاسِۗ وَٱللَّهُ يُحِبُّ ٱلۡمُحۡسِنِينَ
١٣٤ وَٱلَّذِينَ إِذَا فَعَلُواْ فَٰحِشَةً أَوۡ ظَلَمُوٓاْ أَنفُسَهُمۡ ذَكَرُواْ ٱللَّهَ فَٱسۡتَغۡفَرُواْ
لِذُنُوبِهِمۡ وَمَن يَغۡفِرُ ٱلذُّنُوبَ إِلَّا ٱللَّهُ وَلَمۡ يُصِرُّواْ عَلَىٰ مَا فَعَلُواْ وَهُمۡ
يَعۡلَمُونَ ١٣٥ أُوْلَٰٓئِكَ جَزَآؤُهُم مَّغۡفِرَةٞ مِّن رَّبِّهِمۡ وَجَنَّٰتٞ تَجۡرِي مِن
تَحۡتِهَا ٱلۡأَنۡهَٰرُ خَٰلِدِينَ فِيهَاۚ وَنِعۡمَ أَجۡرُ ٱلۡعَٰمِلِينَ ١٣٦ ﴾

**“ನಿಮ್ಮ ರಬ್ಬ್‌ನ ವತಿಯ ಪಾಪಮುಕ್ತಿಗಾಗಿ ಮತ್ತು ಆಕಾಶಗಳು ಹಾಗೂ ಭೂಮಿಯಷ್ಟು ವಿಸ್ತಾರವಾಗಿರುವ ಸ್ವರ್ಗಕ್ಕಾಗಿ ಧಾವಂತದಿಂದ ಮುಂದೆ ಬನ್ನಿರಿ. ಅದನ್ನು ಮುತ್ತಕೀ (ತಕ್ವಾ ಇರುವವರಿಗಾಗಿ) ಸಿದ್ಧಗೊಳಿಸಲಾಗಿದೆ. (ಅಂದರೆ) ಅನುಕೂಲ ಸ್ಥಿತಿಯಲ್ಲೂ ಪ್ರತಿಕೂಲ ಸ್ಥಿತಿಯಲ್ಲೂ (ಅಲ್ಲಾಹನ ಮಾರ್ಗದಲ್ಲಿ) ಖರ್ಚು ಮಾಡುವವರು, ಕೋಪವನ್ನು ಅದುಮಿಡುವವರು ಮತ್ತು ಜನರಿಗೆ ಕ್ಷಮೆ ನೀಡುವವರು. ಅಲ್ಲಾಹು ಸತ್ಕರ್ಮಿಗಳನ್ನು ಪ್ರೀತಿಸುವನು. ಅವರು ಏನಾದರೂ ನೀಚಕೃತ್ಯವನ್ನು ಮಾಡಿದರೆ ಅಥವಾ ಸ್ವತಃ ತಮ್ಮೊಂದಿಗೇ ಅನ್ಯಾಯವೆಸಗಿದರೆ ಅಲ್ಲಾಹುವನ್ನು ಸ್ಮರಿಸಿ ತಮ್ಮ ಪಾಪಗಳಿಗೆ ಕ್ಷಮೆ ಬೇಡುವವರು. ಅಲ್ಲಾಹುವಿನ ಹೊರತು ಪಾಪಗಳನ್ನು ಕ್ಷಮಿಸುವವನು ಇನ್ನಾರಿರುವನು? ಅರಿವುಳ್ಳವರಾಗಿದ್ದೂ ಸಹ ತಾವು ಮಾಡಿದ ಕೃತ್ಯಗಳಲ್ಲಿ ಅವರು ಅಚಲರಾಗಿ ನಿಲ್ಲಲಾರರು. ಅಂತಹವರಿಗಿರುವ ಪ್ರತಿಫಲವು ಅವರ ರಬ್ಬ್‌ನ ವತಿಯ ಪಾಪಮುಕ್ತಿ ಮತ್ತು ತಳಭಾಗದಿಂದ ನದಿಗಳು ಹರಿಯುತ್ತಿರುವ ಸ್ವರ್ಗೋದ್ಯಾನಗಳಾಗಿವೆ. ಅವರು ಅದರಲ್ಲಿ ಶಾಶ್ವತರಾಗಿರುವರು. ಕರ್ಮವೆಸಗುವವರಿಗೆ ಸಿಗುವ ಪ್ರತಿಫಲ ಎಷ್ಟು ಉತ್ಕೃಷ್ಟವಾದುದು!”** (5)

ಮಾನ್ಯ ಸಹೋದರರೇ, ಕೆಲವೊಮ್ಮೆ ನೀವು ಕೇಳುವಿರಿ: ತಕ್ವಾ ಎಂದರೇನು?

5 **ಕುರ್‌ಆನ್** 3:133–136

ಅದಕ್ಕಿರುವ ಉತ್ತರವು ತಲ್ಕ್ ಇಬ್ನ್ ಹಬೀಬ್(ﷺ) [6] ಹೇಳಿದಂತೆಯೇ ಆಗಿದೆ:

التَّقْوَى أَنْ تَعْمَلَ بِطَاعَةِ اللَّهِ، عَلَى نُورٍ مِنَ اللَّهِ، تَرْجُو ثَوَابَ اللَّهِ، وَأَنْ تَتْرُكَ مَعْصِيَةَ اللَّهِ، عَلَى نُورٍ مِنَ اللَّهِ، تَخْشَى عِقَابَ اللَّهِ.

**"ತಕ್ವಾ ಎಂದರೆ ನೀನು ಅಲ್ಲಾಹನಿಂದ ಪುಣ್ಯವನ್ನು ನಿರೀಕ್ಷಿಸುತ್ತಾ, ಅಲ್ಲಾಹನಿಂದಿರುವ ಬೆಳಕಿನ (ಇಲ್ಮ್‌ನ) ಆಧಾರದಲ್ಲಿ, ಅಲ್ಲಾಹನ ಆಜ್ಞಾಪಾಲನೆಯೊಂದಿಗೆ ಅಮಲ್ ಮಾಡುವುದಾಗಿದೆ ಮತ್ತು ಅಲ್ಲಾಹನ ಶಿಕ್ಷೆಯನ್ನು ಭಯಪಟ್ಟು, ಅಲ್ಲಾಹನಿಂದಿರುವ ಬೆಳಕಿನ (ಇಲ್ಮ್‌ನ) ಆಧಾರದಲ್ಲಿ, ಅಲ್ಲಾಹನೊಂದಿಗಿರುವ ಅವಿಧೇಯತೆಯನ್ನು ತೊರೆಯುವುದಾಗಿದೆ."** [7]

ಈ ವಿವರಣೆಯಲ್ಲಿ ಇಲ್ಮ್, ಅಮಲ್ (ಕರ್ಮ), ಪುಣ್ಯದ ನಿರೀಕ್ಷೆ ಮತ್ತು ಶಿಕ್ಷೆಯ ಭಯ –ಎಂಬುವುಗಳನ್ನು ಜೊತೆಗೂಡಿಸಲಾಗಿವೆ. ತಕ್ವಾ ಎಂಬುದು ಇದೇ ಆಗಿದೆ.

ನಮಗೆಲ್ಲರಿಗೂ ತಿಳಿದಿರುವಂತೆ ಈ ಸ್ವಭಾವದೊಂದಿಗೆ, ಅಂದರೆ ಆಂತರಿಕವಾಗಿಯೂ ಬಾಹ್ಯವಾಗಿಯೂ ಅಲ್ಲಾಹನ ತಕ್ವಾದೊಂದಿಗೆ ಶೋಭಿಸಲು ಜನರಲ್ಲೇ ಹೆಚ್ಚು ಅರ್ಹತೆಯಿರುವುದು ಅಲ್ಲಾಹು [ಅಝ್ಝ ವಜಲ್ಲ್] ನೆಡೆಗೆ ದಅ್ವಾ ಮಾಡುವವನಿಗಾಗಿದೆ. ನಾನು ಈ ಸ್ಥಳದಲ್ಲಿ ಅಲ್ಲಾಹನ ಸಹಾಯದೊಂದಿಗೆ ದಅ್ವಾ ಮಾಡುವವನಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಮತ್ತು ಅವನು ಅದಕ್ಕಾಗಿ ಮಾಡಿಕೊಳ್ಳಬೇಕಾದ ಪೂರ್ವಸಿದ್ಧತೆಯ ಬಗ್ಗೆ ಕೆಲವನ್ನು ಪ್ರಸ್ತಾಪಿಸುತ್ತೇನೆ.

---

6 **ತಲ್ಕ್ ಇಬ್ನ್ ಹಬೀಬ್ ಅಲ್‌ಅನಝೀ ಅಲ್‌ಬಸರೀ** [ಮರಣ ಹಿ. 90ರಿಂದ 100ರ ಮಧ್ಯೆ]. ತಾಬಿಊಗಳಲ್ಲಿ ಸೇರಿದವರು. ವಿಶ್ವಾಸಯೋಗ್ಯರು. ಹದೀಸಿನ ಆರು ಗ್ರಂಥಗಳ ಪೈಕಿ ಅಲ್‌ಬುಖಾರಿಯ ಹೊರತು ಉಳಿದವರೆಲ್ಲರೂ ಇವರಿಂದ ಹದೀಸನ್ನು ಉದ್ಧರಿಸಿದ್ದಾರೆ. ಅಲ್‌ಬುಖಾರಿಯವರು ತಮ್ಮ 'ಅಲ್‌ಅದಬುಲ್ ಮುಫ್ರದ್'ನಲ್ಲಿ ಇವರಿಂದ ವರದಿ ಮಾಡಿದ್ದಾರೆ.

7 ಇಬ್ನುಲ್ ಅಶ್‌ಅಸ್‌ರ ಫಿತ್ನವುಂಟಾದಾಗ ತಲ್ಕ್ ಇಬ್ನ್ ಹಬೀಬ್ ಹೇಳಿದರು: 'ನೀವು ಫಿತ್ನವನ್ನು ತಕ್ವಾದೊಂದಿಗೆ ಎದುರಿಸಿರಿ.' ಆಗ ಜನರು ಕೇಳಿದರು: 'ತಕ್ವಾ ಎಂದರೇನು? ಅದನ್ನು ನಮಗೆ ವಿವರಿಸಿಕೊಡಿ.' ಆಗ ತಲ್ಕ್ ಇಬ್ನ್ ಹಬೀಬ್ ಇದನ್ನು ಹೇಳಿದರು. (ನೋಡಿ: ತಹ್ಝೀಬುಲ್ ಕಮಾಲ್ 13/453)

## الزاد الأول: أن يكون الداعية على علم فيما يدعو إليه

## ಮೊದಲನೆ ಪೂರ್ವಸಿದ್ಧತೆ: ದಅ್‌ವಾ ಮಾಡುವವನು ಅವನು ಯಾವುದರೆಡೆಗೆ ದಅ್‌ವಾ ಮಾಡುತ್ತಿರುವನೋ ಅದರಲ್ಲಿ ಇಲ್ಮ್‌ನ್ನು ಹೊಂದಿರಬೇಕಾಗಿದೆ

ಮೊದಲನೆ ಪೂರ್ವಸಿದ್ಧತೆಯು ದಅ್‌ವಾ ಮಾಡುವವನು ಅವನು ಯಾವುದರೆಡೆಗೆ ದಅ್‌ವಾ ಮಾಡುತ್ತಿರುವನೋ ಅದರಲ್ಲಿ ಇಲ್ಮ್‌ನ್ನು ಹೊಂದಿರಬೇಕು ಎಂಬುದಾಗಿದೆ. ಅಂದರೆ ಅದು ಸಹೀಹಾದ ಮತ್ತು ಅಲ್ಲಾಹನ ಗ್ರಂಥ ಹಾಗೂ ಅವನ ರಸೂಲ್(ﷺ) ರವರ ಸುನ್ನತ್ತಿನ ಮೇಲೆ ಕೇಂದ್ರೀಕೃತವಾಗಿರುವ ಇಲ್ಮ್ ಆಗಿರಬೇಕಾಗಿದೆ. ಯಾಕೆಂದರೆ ಅವೆರಡರ ಹೊರತಾದ ಮೂಲಗಳಿಂದ ಲಭ್ಯವಾಗುವ ಎಲ್ಲ ಇಲ್ಮ್‌ಗಳನ್ನೂ ಅವೆರಡರ (ಕುರ್‌ಆನ್ ಮತ್ತು ಸುನ್ನತ್ತಿನ) ಮೇಲೆ ಪ್ರದರ್ಶಿಸಬೇಕಾದುದು ಕಡ್ಡಾಯವಾಗಿದೆ. ಹೀಗೆ ಪ್ರದರ್ಶಿಸಿದ ಬಳಿಕ ಅವು ಒಂದೋ (ಕುರ್‌ಆನ್ ಮತ್ತು ಸುನ್ನತ್ತಿಗೆ) ಪೂರಕವಾಗಿರುತ್ತದೆ ಅಥವಾ ವಿರುದ್ಧವಾಗಿರುತ್ತದೆ. ಅದು ಪೂರಕವಾಗಿದ್ದರೆ ಅದನ್ನು ಸ್ವೀಕರಿಸಲಾಗುತ್ತದೆ ಮತ್ತು ವಿರುದ್ಧವಾಗಿದ್ದರೆ ಅದನ್ನು ಯಾರು ಹೇಳಿದನೋ ಅವನು ಯಾರೇ ಆದರೂ ಸರಿ ಅವನಿಗೇ ಅದನ್ನು ಮರಳಿಸಬೇಕಾದುದು ಕಡ್ಡಾಯವಾಗಿದೆ.

ಇಬ್ನ್ ಅಬ್ಬಾಸ್(رضي الله عنه)ರವರು ಹೇಳಿದ್ದಾಗಿ ಸಹೀಹಾಗಿ ವರದಿಯಾಗಿದೆ:

يُوشِكُ أَنْ تَنْزِلَ عَلَيْكُمْ حِجَارَةٌ مِنَ السَّمَاءِ أَقُولُ قَالَ رَسُولُ اللَّهِ صَلَّى اللَّهُ عَلَيْهِ وَسَلَّمَ وَتَقُولُونَ قَالَ أَبُو بَكْرٍ وَعُمَرُ.

**“ನಿಮ್ಮ ಮೇಲೆ ಆಕಾಶದಿಂದ ಕಲ್ಲಿನ ಮಳೆ ಸುರಿಯಲೂಬಹುದು. ಅಲ್ಲಾಹನ ಸಂದೇಶವಾಹಕರು(ﷺ) ಹೇಳಿದರು ಎಂದು ನಾನು ಹೇಳುವಾಗ ನೀವು ಅಬೂಬಕ್ರ್(رضي الله عنه) ಮತ್ತು ಉಮರ್(رضي الله عنه) ಹೇಳಿದರು ಎನ್ನುತ್ತೀರಿ.”** (8)

**8** ಶೈಖುಲ್ ಇಸ್ಲಾಮ್ ಇಬ್ನ್ ತೈಮಿಯ್ಯಃ ತಮ್ಮ ‘ಅಲ್‌ಫತಾವಾ’ದಲ್ಲಿ (20/215, 26/50), ಅವರ ಶಿಷ್ಯರಾದ ಇಬ್ನುಲ್ ಕಯ್ಯಿಮ್ ತಮ್ಮ ‘ಇಅ್‌ಲಾಮುಲ್ ಮುವಕ್ಕಿಈನ್’ನಲ್ಲಿ (2/23), ‘ಝಾದುಲ್ ಮಆದ್’ನಲ್ಲಿ (2/195) ಮತ್ತು ‘ಅಸ್ಸವಾಇಕುಲ್ ಮುರ್ಸಿಲಃ’ದಲ್ಲಿ (3/1063), ಅಶ್ಶೈಖ್ ಮುಹಮ್ಮದ್ ಇಬ್ನ್ ಅಬ್ದಿಲ್ ವಹ್ಹಾಬ್ ತಮ್ಮ ‘ಕಿತಾಬು ತೌಹೀದ್’ನಲ್ಲಿ ಈ ಹದೀಸನ್ನು ಇದೇ ಪದಗಳೊಂದಿಗೆ ವರದಿ ಮಾಡಿದ್ದಾರೆ. ಆದರೆ ಸುನ್ನತ್ತಿನ ಯಾವುದೇ ಗ್ರಂಥಗಳಲ್ಲಿ ಈ ಹದೀಸ್ ಈ ಪದಗಳೊಂದಿಗೆ

ಅಬೂಬಕ್ರ್(ﷺ) ಮತ್ತು ಉಮರ್(ﷺ)ರವರ ಅಭಿಪ್ರಾಯಗಳು ಕೂಡ ರಸೂಲುಲ್ಲಾಹಿ(ﷺ)ರವರ ವಚನಕ್ಕೆ ವಿರುದ್ಧವಾಗಿ ಬರುತ್ತದೆಯೆಂದಾದರೆ ಇಲ್ಮ್, ತಕ್ವಾ, ಸಹಾಬಿತ್ವ ಮತ್ತು ಖಿಲಾಫತ್‌ನಲ್ಲಿ ಅವರಿಗಿಂತಲೂ ಕೆಳಗಿನ ದರ್ಜೆಯಲ್ಲಿರುವವರ ಅಭಿಪ್ರಾಯಗಳ ಬಗ್ಗೆ ನೀವೇನು ಹೇಳುತ್ತೀರಿ? ಅವರ ಅಭಿಪ್ರಾಯಗಳು ಅಲ್ಲಾಹನ ಗ್ರಂಥ ಮತ್ತು ಅವನ ರಸೂಲ್(ﷺ)ರವರ ಸುನ್ನತ್ತಿಗೆ ವಿರುದ್ಧವಾಗಿದ್ದರೆ ಅದು ತಿರಸ್ಕೃತವಾಗಲು ಅತ್ಯಂತ ಯೋಗ್ಯವಾಗಿದೆ.

ಅಲ್ಲಾಹು [ಅಝ್ಝ ವಜಲ್ಲ್] ಹೇಳುತ್ತಾನೆ:

﴿ فَلْيَحْذَرِ ٱلَّذِينَ يُخَالِفُونَ عَنْ أَمْرِهِۦٓ أَن تُصِيبَهُمْ فِتْنَةٌ أَوْ يُصِيبَهُمْ عَذَابٌ أَلِيمٌ ﴾ (٦٣)

**“ಆದ್ದರಿಂದ ಅವರ (ಪ್ರವಾದಿಯವರ) ಆಜ್ಞೆಗೆ ವಿರೋಧವಾಗಿ ಸಾಗುವವರು ತಮಗೇನಾದರೂ ಫಿತ್ನ ಬಾಧಿಸುವುದರ ಬಗ್ಗೆ ಅಥವಾ ಯಾತನಾಮಯ ಶಿಕ್ಷೆ**

---

ವರದಿಯಾಗಿಲ್ಲ.

ಅಶ್ಶೈಖ್ ಮುಹಮ್ಮದ್ ಇಬ್ನ್ ಅಬ್ದಿಲ್ ವಹ್ಹಾಬ್‌ರವರ 'ಕಿತಾಬು ತೌಹೀದ್'ನ ತಖ್ರೀಜ್‌ನಲ್ಲಿ ಅಶ್ಶೈಖ್ ಅಬೂ ಅಮ್ರ್ ಸಾಲಿಹ್ ಇಬ್ನ್ ಅಬ್ದಿಲ್ಲಾಹ್ ಅಲ್‌ಅಸೀಮೀ ಹೇಳುತ್ತಾರೆ: 'ಇದು ಸಹೀಹ್ ಆಗಿದೆ. ಇದನ್ನು ಅಹ್ಮದ್ (1/337), ಇಸ್‌ಹಾಕ್ ಇಬ್ನ್ ರಾಹವೈಹ್ [ಅಲ್‌ಮತಾಲಿಬುಲ್ ಆಲಿಯಃ 1/360ರಲ್ಲಿರುವಂತೆ], ಅಲ್‌ಖತೀಬ್ ತಮ್ಮ 'ಅಲ್‌ಫಕೀಹ್ ವಲ್‌ಮುತಫಕ್ಕಿಹ್'ನಲ್ಲಿ (1/145), ಇಬ್ನ್ ಅಬ್ದಿಲ್ ಬರ್ರ್ ತಮ್ಮ 'ಜಾಮಿಉ ಬಯಾನಿಲ್ ಇಲ್ಮ್'ನಲ್ಲಿ (2/239–240) ಅನೇಕ ಸನದ್‌ಗಳಲ್ಲಿ ವರದಿ ಮಾಡಿದ್ದಾರೆ. ಇದು ಸಹೀಹ್ ಆಗಿದೆಯೆಂಬುದರಲ್ಲಿ ಯಾವುದೇ ಸಂದೇಹವಿಲ್ಲ. ಆದರೆ ಈ ಹದೀಸನ್ನು ಇಲ್ಲಿ ಉದ್ಧರಿಸಲಾದ ಪದಗಳೊಂದಿಗೆ ವರದಿಯಾಗಿದ್ದಾಗಿ ನಾನು ಕಂಡಿಲ್ಲ. ಆದರೆ ಇದಕ್ಕೆ ಸಮಾನವಾಗಿರುವ ಪದಗಳೊಂದಿಗೆ ಇದು ವರದಿಯಾಗಿದೆ. ಅವುಗಳಲ್ಲಿ ಕೆಲವು ಹೀಗಿವೆ:

أُرَاهُمْ سَيَهْلِكُونَ، أَقُولُ قَالَ النَّبِيُّ صَلَّى اللَّهُ عَلَيْهِ وَسَلَّمَ، وَيَقُولُ نَهَى أَبُو بَكْرٍ وَعُمَرُ .

**“ಅವರು ನಾಶವಾಗುವವರು ಎಂದು ನಾನು ಭಾವಿಸುತ್ತೇನೆ. ಪ್ರವಾದಿ(ﷺ)ರವರು ಹೇಳಿದರೆಂದು ನಾನು ಹೇಳುವಾಗ ಅಬೂಬಕ್ರ್(ﷺ) ಮತ್ತು ಉಮರ್(ﷺ)ರವರು ವಿರೋಧಿಸಿದ್ದಾರೆಂದು ಅವರು ಹೇಳುತ್ತಿದ್ದಾರೆ.”**

وَاللَّهِ، مَا أَرَاكُمْ مُنْتَهِينَ حَتَّى يُعَذِّبَكُمُ اللَّهُ، أُحَدِّثُكُمْ عَنْ رَسُولِ اللَّهِ صَلَّى اللَّهُ عَلَيْهِ وَسَلَّمَ، وَتُحَدِّثُونَا عَنْ أَبِي بَكْرٍ وَعُمَرَ.

**“ಅಲ್ಲಾಹನ ಮೇಲಾಣೆ, ಅಲ್ಲಾಹು ನಿಮ್ಮನ್ನು ಶಿಕ್ಷಿಸುವ ತನಕ ನೀವು ಇದನ್ನು ನಿಲ್ಲಿಸಲಾರಿರಿ ಎಂದು ನಾನು ಭಾವಿಸುತ್ತೇನೆ. ನಾನು ಪ್ರವಾದಿ(ﷺ)ರವರಿಂದ ಹದೀಸನ್ನು ಉದ್ಧರಿಸುವಾಗ ನೀವು ಅಬೂಬಕ್ರ್(ﷺ) ಮತ್ತು ಉಮರ್(ﷺ)ರವರ ಮಾತನ್ನು ಉದ್ಧರಿಸುತ್ತಿರುವಿರಿ.”**

ಇದನ್ನು ಇಬ್ನ್ ಹಝ್ಮ್ ಕೂಡ ತಮ್ಮ 'ಹಜ್ಜತುಲ್ ವದಾಅ್'ನಲ್ಲಿ (ಪುಟ 268–269) ಉದ್ಧರಿಸಿದ್ದಾರೆ.' [ಅದ್ದುರ್ರು ನ್ನದೀದ್ ಫೀ ತಖ್ರೀಜಿ ಕಿತಾಬಿ ತೌಹೀದ್ ಪುಟ 129]

**ಬಾಧಿಸುವುದರ ಬಗ್ಗೆ ಎಚ್ಚರವಹಿಸಲಿ.”** [9]

ಇಮಾಮ್ ಅಹ್ಮದ್(ﷺ)ರವರು ಹೇಳಿದರು:

أَتَدْرِي مَا الْفِتْنَةُ؟ الْفِتْنَةُ الشِّرْكُ، لَعَلَّهُ إِذَا رَدَّ بَعْضَ قَوْلِهِ أَنْ يَقَعَ فِي قَلْبِهِ شَيْءٌ مِنَ الزَّيْغِ فَيَهْلِكَ.

**“ಫಿತ್ನ** [10] **ಎಂದರೇನೆಂದು ನಿನಗೆ ಗೊತ್ತೇ? ಫಿತ್ನ ಎಂದರೆ ಶಿರ್ಕ್. ಪ್ರವಾದಿ (ﷺ)ರವರ ವಚನಗಳಲ್ಲಿ ಕೆಲವನ್ನು ತಿರಸ್ಕರಿಸಿದರೆ ಬಹುಶಃ ಅವನ ಹೃದಯದಲ್ಲಿ ಪಥಭ್ರಷ್ಟತೆಯುಂಟಾಗಿ ಅವನು ನಾಶವಾಗಲೂಬಹುದು.”** [11]

ಅಲ್ಲಾಹನೆಡೆಗೆ ದಅ್‌ವಾ ಮಾಡುವವನ ಮೊಟ್ಟಮೊದಲನೆಯ ಪೂರ್ವಸಿದ್ಧತೆಯು ಯಾವುದೆಂದರೆ ಅವನು ಅಲ್ಲಾಹನ ಗ್ರಂಥ ಮತ್ತು ಅವನ ರಸೂಲ್(ﷺ)ರವರ ಸಹೀಹಾದ ಮತ್ತು ಸ್ವೀಕಾರಯೋಗ್ಯವಾದ ಸುನ್ನತ್ತಿನಿಂದ ಪಡೆದಿರುವ ಇಲ್ಮನ್ನು ಹೊಂದಿರಬೇಕು ಎಂಬುದಾಗಿದೆ. ಇಲ್ಮ್ ರಹಿತವಾಗಿರುವ ದಅ್‌ವಾ ಅಜ್ಞಾನದಿಂದ ಕೂಡಿದ ದಅ್‌ವಾ ಆಗಿದೆ. ಅಜ್ಞಾನದಿಂದ ಕೂಡಿದ ದಅ್‌ವಾದಿಂದ ಪ್ರಯೋಜನಕ್ಕಿಂತಲೂ ಹೆಚ್ಚು ಹಾನಿಯೇ ಉಂಟಾಗುತ್ತದೆ. ಯಾಕೆಂದರೆ ದಅ್‌ವಾ ಮಾಡುವವನು ನಿರ್ದೇಶನ ಮತ್ತು ಮಾರ್ಗದರ್ಶನ ನೀಡುವುಕ್ಕಾಗಿ ತನ್ನ ದೇಹವನ್ನು ನೆಲೆಗೊಳಿಸುತ್ತಾನೆ. ಅವನು ಅಜ್ಞಾನಿಯಾಗಿದ್ದರೆ ಅವನು ನೀಡುವ ನಿರ್ದೇಶನ ಮತ್ತು ಮಾರ್ಗದರ್ಶನಗಳಿಂದಾಗಿ ಅವನು ಪಥಭ್ರಷ್ಟನೂ ಪಥಭ್ರಷ್ಟಗೊಳಿಸುವವನೂ ಆಗುತ್ತಾನೆ. ಅಲ್ಲಾಹು ನಮ್ಮನ್ನು ರಕ್ಷಿಸಲಿ.

---

9 **ಕುರ್‌ಆನ್** 24:63

10 ಅಂದರೆ ಕುರ್‌ಆನ್ 24:63ನೇ ಆಯತ್ತಿನಲ್ಲಿ ಹೇಳಲಾದ ಫಿತ್ನ.

11 ಅಬುಲ್ ಅಬ್ಬಾಸ್ ಅಲ್‌ಫದ್ಲ್ ಇಬ್ನ್ ಝಿಯಾದ್‌ರಿಂದ ವರದಿ: ಅವರು ಹೇಳಿದರು: ಅಬೂ ಅಬ್ದಿಲ್ಲಾಹ್ ಅಹ್ಮದ್ ಇಬ್ನ್ ಮುಹಮ್ಮದ್ ಇಬ್ನ್ ಹಂಬಲ್‌ರವರು ಹೀಗೆ ಹೇಳುವುದನ್ನು ನಾನು ಕೇಳಿದ್ದೇನೆ: ‘ನಾನು ಮುಸ್‌ಹಫ್‌ನೆಡೆಗೆ ನೋಡಿದೆ. ಆಗ ಅದರಲ್ಲಿ ಮೂವತ್ತ ಮೂರು ಸ್ಥಳಗಳಲ್ಲಿ ಪ್ರವಾದಿ (ﷺ)ರವರ ಆಜ್ಞಾಪಾಲನೆ ಮಾಡಬೇಕೆಂಬುದನ್ನು ಕಂಡೆ.’ ತರುವಾಯ ಅವರು (ಇಮಾಮ್ ಅಹ್ಮದ್) ಓದಿದರು: **‘ಆದ್ದರಿಂದ ಅವರ (ಪ್ರವಾದಿಯವರ) ಆಜ್ಞೆಗೆ ವಿರೋಧವಾಗಿ ಸಾಗುವವರು ತಮಗೇನಾದರೂ ಫಿತ್ನ ಬಾಧಿಸುವುದರ ಬಗ್ಗೆ ಅಥವಾ ಯಾತನಾಮಯ ಶಿಕ್ಷೆ ಬಾಧಿಸುವುದರ ಬಗ್ಗೆ ಎಚ್ಚರವಹಿಸಲಿ.’** [ಕುರ್‌ಆನ್ 24:63] ಅವರು ಇದನ್ನು ಪುನರಾವರ್ತಿಸಿ ಓದುತ್ತಲೇ ಇದ್ದರು. ತರುವಾಯ ಅವರು ಹೇಳಿದರು: ‘ಫಿತ್ನ ಎಂದರೇನೆಂದು ನಿನಗೆ ಗೊತ್ತೇ? ಫಿತ್ನ ಎಂದರೆ ಶಿರ್ಕ್. ಪ್ರವಾದಿ(ﷺ)ರವರ ವಚನಗಳಲ್ಲಿ ಕೆಲವನ್ನು ತಿರಸ್ಕರಿಸಿದರೆ ಬಹುಶಃ ಅವನ ಹೃದಯದಲ್ಲಿ ಪಥಭ್ರಷ್ಟತೆಯುಂಟಾಗಿ ಅವನು ನಾಶವಾಗಲೂಬಹುದು...’ [ಇಬ್ನ್ ಬತ್ತಃರವರ ‘ಅಲ್‌ಇಬಾನತುಲ್ ಕುಬ್ರಾ’ 1/260]

ಅವನ ಈ ಜಹ್ಲ್ (ಅಜ್ಞಾನ) [12] ಜಹ್ಲುನ್ ಮುರಕ್ಕಬುನ್ ಆಗಿರಬಹುದು. ಜಹ್ಲುನ್ ಮುರಕ್ಕಬುನ್ ಎಂಬುದು ಜಹ್ಲುನ್ ಬಸೀತುನ್‌ಗಿಂತಲೂ ಗುರುತರವಾಗಿದೆ. ಯಾಕೆಂದರೆ ಜಹ್ಲುನ್ ಬಸೀತುನ್ ಎಂಬುದು ಅದನ್ನು ಹೊಂದಿದವನನ್ನು ಮಾತನಾಡದಂತೆ ತಡೆಹಿಡಿಯುತ್ತದೆ ಮತ್ತು ಇಲ್ಮ್ ಕಲಿಯುವ ಮೂಲಕ ಅದನ್ನು ನಿವಾರಿಸಲು ಸಾಧ್ಯವಿದೆ. ಆದರೆ ಪ್ರಯಾಸಗಳಲ್ಲಿ ಸೇರಿದ ಪ್ರಯಾಸಗಳೆಲ್ಲವೂ ಇರುವುದು ಜಹ್ಲುನ್ ಮುರಕ್ಕಬುನ್ ಹೊಂದಿರುವ ವ್ಯಕ್ತಿಯಲ್ಲಾಗಿದೆ. ಯಾಕೆಂದರೆ ಜಹ್ಲುನ್ ಮುರಕ್ಕಬುನ್ ಹೊಂದಿರುವ ವ್ಯಕ್ತಿಯು ಎಂದಿಗೂ ಮೌನವಾಗಿರುವುದಿಲ್ಲ. ಬದಲಾಗಿ ಅಜ್ಞಾನದಿಂದಲಾದರೂ ಅವನು ಮಾತನಾಡಿಕೊಂಡೇ ಇರುತ್ತಾನೆ. ಆ ಸಂದರ್ಭಗಳಲ್ಲೆಲ್ಲಾ ಅವನು ಬೆಳಗಿಸುವುದಕ್ಕಿಂತಲೂ ಹೆಚ್ಚಾಗಿ ಧ್ವಂಸ ಮಾಡುತ್ತಿರುತ್ತಾನೆ.

ಓ ಸಹೋದರರೇ, ಇಲ್ಮ್ ಇಲ್ಲದೆ ಅಲ್ಲಾಹನೆಡೆಗೆ ದಅ್ವಾ ಮಾಡುವುದು, ಪ್ರವಾದಿ (ﷺ)ರವರು ಮತ್ತು ಅವರನ್ನು ಅನುಸರಿಸಿದವರು ಯಾವ ಮಾರ್ಗದಲ್ಲಿದ್ದರೋ ಅದಕ್ಕೆ ವಿರುದ್ಧವಾಗಿದೆ. ಅಲ್ಲಾಹು [ತಆಲಾ] ಅವನ ಪ್ರವಾದಿ(ﷺ)ರಿಗೆ ಆಜ್ಞಾಪಿಸುವ ಅವನ ವಚನವನ್ನು ಕಿವಿಗೊಟ್ಟು ಕೇಳಿರಿ. ಅಲ್ಲಾಹು ಹೇಳುತ್ತಾನೆ:

---

**12** ಭಾಷಿಕ ಅರ್ಥದಲ್ಲಿ ಜಹ್ಲ್ ಎಂಬುದು ಇಲ್ಮ್ ಎಂಬುದರ ವಿರುದ್ಧ ಪದವಾಗಿದೆ. ಶರೀಅತ್ತಿನ ಪಾರಿಭಾಷಿಕ ಅರ್ಥದಲ್ಲಿ ಜಹ್ಲ್ ಎಂಬುದರ ವಿವರಣೆ ಹೀಗಿದೆ:

اعْتِقَادُ الشَّيْءِ عَلَى خِلاَفِ مَا هُوَ عَلَيْهِ

"ಒಂದು ವಸ್ತುವನ್ನು ಅದು ಹೇಗಿದೆಯೋ ಅದಕ್ಕೆ ವಿರುದ್ಧವಾಗಿ ನಂಬುವುದು." [ನೋಡಿ: ಅಲ್‌ಜುರ್ಜಾನಿಯವರ 'ಅತ್ತಅ್‌ರೀಫಾತ್' ಪುಟ 84]

ಜಹ್ಲ್ (ಅಜ್ಞಾನ) ಎರಡು ರೀತಿಯಲ್ಲಿದೆ. ಒಂದು ಜಹ್ಲುನ್ ಬಸೀತುನ್. ಇನ್ನೊಂದು ಜಹ್ಲುನ್ ಮುರಕ್ಕಬುನ್. ಆಲಿಮ್ (ವಿದ್ವಾಂಸ)ನ ಸ್ಥಾನದಲ್ಲಿರುವ ಒಬ್ಬ ವ್ಯಕ್ತಿಯಲ್ಲಿ (ಯಾವುದಾದರೂ ಒಂದು ವಿಷಯದಲ್ಲಿ) ಇಲ್ಮ್ ಇಲ್ಲದಿರುವುದನ್ನು ಜಹ್ಲುನ್ ಬಸೀತುನ್ (ಸರಳ ಅಜ್ಞಾನ) ಎನ್ನಲಾಗುತ್ತದೆ. ವಾಸ್ತವತೆಗೆ ಹೊಂದಾಣಿಕೆಯಾಗದ ಖಚಿತವಾದ ನಂಬಿಕೆಯನ್ನು ಜಹ್ಲುನ್ ಮುರಕ್ಕಬುನ್ (ಸಂಯುಕ್ತ ಅಜ್ಞಾನ) ಎನ್ನಲಾಗುತ್ತದೆ. [ನೋಡಿ: ಅಲ್‌ಜುರ್ಜಾನಿಯವರ 'ಅತ್ತಅ್‌ರೀಫಾತ್' ಪುಟ 84]

ವಾಸ್ತವವಾಗಿ ಅಶ್ಶೈಖ್ ಅಲ್‌ಉಸೈಮೀನ್‌ರವರು ಮತ್ತು ಇತರೆಲ್ಲ ಉಲಮಾಗಳು ಹೇಳುವಂತೆ ಜಹ್ಲುನ್ ಬಸೀತುನ್ ಎಂಬುದು ದೊಡ್ಡ ಸಮಸ್ಯೆಯೇನಲ್ಲ. ಯಾಕೆಂದರೆ ಅಗಾಧ ಪಾಂಡಿತ್ಯವನ್ನು ಹೊಂದಿದ್ದ ಮಹಾನ್ ಉಲಮಾಗಳಿಗೂ ಕೂಡ ಜಹ್ಲುನ್ ಬಸೀತುನ್ ಇತ್ತು. ಇಮಾಮ್ ಮಾಲಿಕ್‌ರವರು ಅನೇಕ ವಿಷಯಗಳ ಬಗ್ಗೆ ನನಗೆ ಗೊತ್ತಿಲ್ಲ ಎನ್ನುತ್ತಿದ್ದರು. ಜಹ್ಲುನ್ ಬಸೀತುನ್ ಇರುವವರು ತಮ್ಮ ಅಜ್ಞಾನವನ್ನು ಒಪ್ಪಿಕೊಳ್ಳುತ್ತಾರೆ ಮತ್ತು ಅವರಿಗೆ ವಾಸ್ತವ ಸಂಗತಿಯನ್ನು ಹೇಳಿಕೊಡಲಾದರೆ ಅವರು ಅದನ್ನು ಸ್ವೀಕರಿಸುತ್ತಾರೆ. ಆದರೆ ಜಹ್ಲುನ್ ಮುರಕ್ಕಬುನ್ ಹಾಗಲ್ಲ. ಅದು ಜಹ್ಲುನ್ ಬಸೀತುನ್‌ಗೆ ತದ್ವಿರುದ್ಧವಾಗಿದೆ. ಉದಾ: ಒಬ್ಬ ವ್ಯಕ್ತಿಗೆ ಒಂದು ವಿಷಯದಲ್ಲಿ ಇಲ್ಮ್ ಇಲ್ಲದಿದ್ದರೂ ಅವನು ತನಗೆ ಅದರಲ್ಲಿ ಇಲ್ಮ್ ಇದೆಯೆಂದು ವಾದಿಸುತ್ತಾ ವಾಸ್ತವತೆಗೆ ವಿರುದ್ಧವಾಗಿರುವುದನ್ನು ಖಚಿತವಾಗಿ ನಂಬುತ್ತಾನೆ ಮತ್ತು ಅದನ್ನೇ ಜನರಿಗೆ ಬೋಧಿಸುತ್ತಾನೆ. ಅವನಿಗೆ ಅದರಲ್ಲಿ ಪ್ರಮಾದ ಸಂಭವಿಸಿದೆಯೆಂದು ಯಾರಾದರೂ ಅವನೊಂದಿಗೆ ಹೇಳಿದರೂ ಅವನು ಅದನ್ನು ಒಪ್ಪಿಕೊಳ್ಳದೇ ತನ್ನದೇ ಸರಿ ಎನ್ನುತ್ತಾನೆ. ಇದನ್ನು ಜಹ್ಲುನ್ ಮುರಕ್ಕಬುನ್ ಎನ್ನಲಾಗುತ್ತದೆ.

﴿ قُلْ هَٰذِهِۦ سَبِيلِىٓ أَدْعُوٓا۟ إِلَى ٱللَّهِ ۚ عَلَىٰ بَصِيرَةٍ أَنَا۠ وَمَنِ ٱتَّبَعَنِى ۖ وَسُبْحَٰنَ ٱللَّهِ وَمَآ أَنَا۠ مِنَ ٱلْمُشْرِكِينَ ﴿١٠٨﴾ ﴾

**“(ಓ ಪ್ರವಾದಿಯವರೇ) ಹೇಳಿರಿ: ಇದು ನನ್ನ ಮಾರ್ಗವಾಗಿದೆ. ನಾನು ದೃಢಜ್ಞಾನದ ಆಧಾರದಲ್ಲಿ ಅಲ್ಲಾಹನೆಡೆಗೆ ದಅ್‌ವಾ ಮಾಡುತ್ತಿದ್ದೇನೆ. ನಾನು ಮತ್ತು ನನ್ನನ್ನು ಅನುಸರಿಸಿದವರು. ಅಲ್ಲಾಹು ಪರಮಪಾವನನು. ನಾನು ಮುಶ್ರಿಕ್‌ಗಳಲ್ಲಿ ಸೇರಿದವನಲ್ಲ.”** [13]

ಅಲ್ಲಾಹು ಹೇಳಿರುವುದು: **‘ನಾನು ದೃಢಜ್ಞಾನದ ಆಧಾರದಲ್ಲಿ ಅಲ್ಲಾಹನೆಡೆಗೆ ದಅ್‌ವಾ ಮಾಡುತ್ತಿದ್ದೇನೆ. ನಾನು ಮತ್ತು ನನ್ನನ್ನು ಅನುಸರಿಸಿದವರು’.** ಅಂದರೆ ಪ್ರವಾದಿ(ﷺ)ರವರು ಮತ್ತು ಅವರನ್ನು ಅನುಸರಿಸಿದವರು ಎಂದಾಗಿದೆ. ಆದ್ದರಿಂದ ದೃಢಜ್ಞಾನದ ಆಧಾರದಲ್ಲಿ ಅಲ್ಲಾಹನೆಡೆಗೆ ದಅ್‌ವಾ ಮಾಡಬೇಕಾದುದು ಅನಿವಾರ್ಯವಾಗಿದೆ. ಅಜ್ಞಾನದ ಆಧಾರದಲ್ಲಲ್ಲ.

ಓ ಅಲ್ಲಾಹನಿಗಾಗಿ ದಅ್‌ವಾ ಮಾಡುವವರೇ, **‘ದೃಢಜ್ಞಾನದ ಆಧಾರದಲ್ಲಿ’** ಎಂಬ ಅಲ್ಲಾಹನ ವಚನದ ಬಗ್ಗೆ ಆಲೋಚಿಸಿರಿ. ದೃಢಜ್ಞಾನವು ಮೂರು ವಿಷಯಗಳನ್ನು ಒಳಗೊಂಡಿದೆ.

ಮೊದಲನೆಯದಾಗಿ, ಒಬ್ಬನು ಯಾವುದರೆಡೆಗೆ ದಅ್‌ವಾ ಮಾಡುತ್ತಿರುವನೋ ಅದರ ಬಗ್ಗೆ ಅವನು ದೃಢಜ್ಞಾನದ ಆಧಾರದಲ್ಲಿರಬೇಕಾಗಿದೆ. ಅಂದರೆ ಅವನು ಯಾವುದರೆಡೆಗೆ ದಅ್‌ವಾ ಮಾಡುತ್ತಿರುವನೋ ಅದರ ಬಗ್ಗೆಯಿರುವ ಶರಈ ನಿಯಮವನ್ನು ಅವನು ಅರಿತಿರಬೇಕಾಗಿದೆ. ಯಾಕೆಂದರೆ ಅವನು ಕಡ್ಡಾಯ ಎಂದು ಭಾವಿಸುವ ಒಂದು ವಿಷಯದೆಡೆಗೆ ಅವನು ದಅ್‌ವಾ ಮಾಡುತ್ತಾನೆ. ಆದರೆ ಅಲ್ಲಾಹನ ಶರೀಅತ್ತಿನಲ್ಲಿ ಅದು ಕಡ್ಡಾಯವಾಗಿರುವುದಿಲ್ಲ. ಆಗ ಅಲ್ಲಾಹು ಅವನ ದಾಸರ ಮೇಲೆ ಕಡ್ಡಾಯಗೊಳಿಸದಿರುವುದನ್ನು ಅವನು ಕಡ್ಡಾಯಗೊಳಿಸುವವನಾಗುತ್ತಾನೆ. ಅಥವಾ ಅವನು ನಿಷಿದ್ಧ ಎಂದು ಭಾವಿಸುವ ಒಂದು ವಿಷಯವನ್ನು ತೊರೆಯಬೇಕೆಂದು ಅವನು ದಅ್‌ವಾ ಮಾಡುತ್ತಾನೆ. ಆದರೆ ಅಲ್ಲಾಹನ ಧರ್ಮದಲ್ಲಿ ಅದು ನಿಷಿದ್ಧವಾಗಿರುವುದಿಲ್ಲ. ಆಗ ಅಲ್ಲಾಹು ಅವನ ದಾಸರ ಮೇಲೆ ಹಲಾಲ್ ಮಾಡಿರುವುದನ್ನು ಅವನು ಹರಾಂ ಮಾಡುವವನಾಗುತ್ತಾನೆ.

ಎರಡನೆಯದಾಗಿ, ದಅ್‌ವಾ ಮಾಡುವ ಪರಿಸ್ಥಿತಿಯ ಬಗ್ಗೆ ಅವನು ದೃಢಜ್ಞಾನದ ಆಧಾರದಲ್ಲಿರಬೇಕಾಗಿದೆ. ಆದ್ದರಿಂದಲೇ ಮುಆದ್(رضي الله عنه)ರವರನ್ನು ಯಮನ್‌ಗೆ ಕಳುಹಿಸುವಾಗ ಪ್ರವಾದಿ(ﷺ)ರವರು ಅವರೊಂದಿಗೆ ಹೇಳಿದರು:

---

**13** **ಕುರ್‌ಆನ್** 12:108

«إِنَّكَ سَتَأْتِي قَوْمًا أَهْلَ كِتَابٍ»

**"ತಾವು ಹೋಗುತ್ತಿರುವುದು ಅಹ್ಲುಲ್ ಕಿತಾಬ್‌ನ ಜನರೆಡೆಗಾಗಿದೆ."** [14]

ಅಂದರೆ ಅಲ್ಲಿನ ಜನರ ಪರಿಸ್ಥಿತಿಯನ್ನು ಅರಿತು ಅದಕ್ಕಾಗಿ ತಯಾರಿ ಮಾಡಿಕೊಳ್ಳುವುದಕ್ಕಾಗಿ ಪ್ರವಾದಿ(ﷺ)ರವರು ಈ ಮಾತನ್ನು ಹೇಳಿದ್ದರು. ಆದ್ದರಿಂದ ದಅ್‌ವಾ ಮಾಡಲಾಗುವವನ ಪರಿಸ್ಥಿತಿಯ ಬಗ್ಗೆ ಅರಿತುಕೊಳ್ಳುವುದು ಅನಿವಾರ್ಯವಾಗಿದೆ. ಅವರ ಜ್ಞಾನದ ಮಟ್ಟವೇನು? ಅವರ ತರ್ಕದ ಮಟ್ಟವೇನು? ಎಂಬುದನ್ನು ಅರಿತು ಅದಕ್ಕಾಗಿ ತಯಾರಿ ಮಾಡಿ ತರುವಾಯ ಅವನೊಂದಿಗೆ ತರ್ಕಿಸುವುದು ಮತ್ತು ಸಂವಾದ ಮಾಡುವುದನ್ನು ಮಾಡಬೇಕಾಗಿದೆ. ಯಾಕೆಂದರೆ ನೀವು ಇಂತಹ ಒಬ್ಬ ವ್ಯಕ್ತಿಯೊಂದಿಗೆ ಸಂವಾದ ಮಾಡತೊಡಗಿ ಅವನು ಅವನ ತರ್ಕಶಕ್ತಿಯಲ್ಲಿ ನಿಮಗಿಂತಲೂ ಮೇಲಿದ್ದರೆ ಅದು ಸತ್ಯದ ಮೇಲೆ ಮಹಾ ಪ್ರಹಾರವಾಗಿ ಮಾರ್ಪಡುತ್ತದೆ ಮತ್ತು ಅದಕ್ಕೆ ಕಾರಣಕರ್ತರು ನೀವಾಗುವಿರಿ. ಅಸತ್ಯದ ವಕ್ತಾರರು ಎಲ್ಲ ಸಮಯಗಳಲ್ಲೂ ವಿಫಲರಾಗುತ್ತಾರೆಂದು ಭಾವಿಸದಿರಿ. ಯಾಕೆಂದರೆ ಪ್ರವಾದಿ (ﷺ)ರವರು ಹೇಳಿದರು:

«إِنَّكُمْ تَخْتَصِمُونَ إِلَيَّ وَلَعَلَّ بَعْضَكُمْ أَنْ يَكُونَ أَلْحَنَ بِحُجَّتِهِ مِنْ بَعْضٍ فَأَقْضِي لَهُ بِنَحْوِ مَا أَسْمَعُ»

**"ನೀವು ನಿಮ್ಮ ವ್ಯಾಜ್ಯಗಳನ್ನು ನನ್ನ ಬಳಿಗೆ ತರುತ್ತೀರಿ. ನಿಮ್ಮಲ್ಲಿ ಕೆಲವರು ಪುರಾವೆ ಮಂಡಿಸುವುದರಲ್ಲಿ ಇತರ ಕೆಲವರಿಗಿಂತಲೂ ಹೆಚ್ಚು ವಾಕ್ಚಾತುರ್ಯವುಳ್ಳವರಾಗಿರಲೂ ಬಹುದು. ಆಗ ನಾನು ಏನನ್ನು ಆಲಿಸುತ್ತೇನೋ ಅದರ ಆಧಾರದಲ್ಲೇ ನಾನು**

---

**14** ಇಬ್ನ್ ಅಬ್ಬಾಸ್(رضي الله عنه)ರಿಂದ ವರದಿ: ಅವರು ಹೇಳಿದರು: ಪ್ರವಾದಿ(ﷺ)ರವರು ಮುಆದ್ ಇಬ್ನ್ ಜಬಲ್(رضي الله عنه)ರನ್ನು ಯಮನ್‌ಗೆ ಕಳುಹಿಸುವಾಗ ಅವರೊಂದಿಗೆ ಹೇಳಿದರು: **'ತಾವು ಹೋಗುತ್ತಿರುವುದು ಅಹ್ಲುಲ್ ಕಿತಾಬ್‌ನ ಜನರೆಡೆಗಾಗಿದೆ. ತಾವು ಅವರ ಬಳಿಗೆ ಹೋದರೆ, ಅಲ್ಲಾಹನ ಹೊರತು ಆರಾಧನೆಗೆ ನೈಜ ಹಕ್ಕುದಾರರಾಗಿ ಅನ್ಯರಿಲ್ಲ ಮತ್ತು ಮುಹಮ್ಮದ್(ﷺ)ರವರು ಅವನ ಸಂದೇಶವಾಹಕರಾಗಿದ್ದಾರೆಂದು ಸಾಕ್ಷಿ ವಹಿಸುವುದರ ಕಡೆಗೆ ಅವರಿಗೆ ದಅ್‌ವಾ ಮಾಡಿರಿ. ಅವರು ಆ ವಿಷಯದಲ್ಲಿ ತಮ್ಮ ಆಜ್ಞೆಯನ್ನು ಪಾಲಿಸಿದರೆ ಅಲ್ಲಾಹು ಅವರ ಮೇಲೆ ಪ್ರತಿ ದಿನರಾತ್ರಿ ಐದು ಹೊತ್ತಿನ ನಮಾಝನ್ನು ಕಡ್ಡಾಯಗೊಳಿಸಿದ್ದಾನೆ ಎಂಬುದನ್ನು ತಿಳಿಸಿರಿ. ಅವರು ಆ ವಿಷಯದಲ್ಲೂ ತಮ್ಮ ಆಜ್ಞೆಯನ್ನು ಪಾಲಿಸಿದರೆ ಅಲ್ಲಾಹು ಅವರ ಮೇಲೆ ಝಕಾತನ್ನು ಕಡ್ಡಾಯಗೊಳಿಸಿದ್ದಾನೆ ಮತ್ತು ಅದನ್ನು ಅವರ ಪೈಕಿ ಶ್ರೀಮಂತರಿಂದ ಪಡೆದು ಅವರ ಪೈಕಿ ಬಡವರಿಗೆ ನೀಡಬೇಕಾಗಿದೆ ಎಂಬುದನ್ನು ತಿಳಿಸಿರಿ. ಅವರು ಆ ವಿಷಯದಲ್ಲೂ ತಮ್ಮ ಆಜ್ಞೆಯನ್ನು ಪಾಲಿಸಿದರೆ ಅವರ ಆದರಣೀಯ ಸಂಪತ್ತಿನ ಬಗ್ಗೆ ತಾವು ಜಾಗೃತೆ ವಹಿಸಿರಿ. ಪೀಡನೆಗೊಳಗಾದವನ ಪ್ರಾರ್ಥನೆಯ ಬಗ್ಗೆ ಎಚ್ಚರ ವಹಿಸಿರಿ. ಯಾಕೆಂದರೆ ಅವನ ಮತ್ತು ಅಲ್ಲಾಹನ ಮಧ್ಯೆ ಯಾವುದೇ ಪರದೆಯೂ ಇರಲಾರದು.'** [ಸಹೀಹುಲ್ ಬುಖಾರಿ 1/464; ಹದೀಸ್ ನಂ. 1496, ಸಹೀಹ್ ಮುಸ್ಲಿಮ್ 1/50; ಹದೀಸ್ ನಂ. 19]

**ತೀರ್ಪು ನೀಡುತ್ತೇನೆ.”** [15]

ಇದರಿಂದ ತಿಳಿದುಬರುವ ಪ್ರಕಾರ ತರ್ಕಿಸುವವನು ಅಸತ್ಯದ ವಕ್ತಾರನಾಗಿದ್ದರೆ ಅವನು ಕೆಲವೊಮ್ಮೆ ಪುರಾವೆ ಮಂಡಿಸುವುದರಲ್ಲಿ ಇತರರಿಗಿಂತಲೂ ಹೆಚ್ಚು ವಾಕ್ಚಾತುರ್ಯ ವುಳ್ಳವನಾಗಿರಬಹುದು. ಆಗ ಅವನ ಮಾತಿಗೆ ಅನುಗುಣವಾಗಿ ತೀರ್ಪು ನೀಡಲಾಗುತ್ತದೆ. ಆದ್ದರಿಂದ ದಅ್‌ವಾ ಮಾಡಲಾಗುವವನ ಪರಿಸ್ಥಿತಿಯ ಬಗ್ಗೆ ನೀವು ಅರಿತಿರಬೇಕಾದುದು ಅನಿವಾರ್ಯವಾಗಿದೆ.

ಮೂರನೆಯದಾಗಿ, ದಅ್‌ವಾ ಮಾಡುವ ವಿಧಾನದಲ್ಲಿ ದೃಢಜ್ಞಾನದ ಆಧಾರದಲ್ಲಿರಬೇಕಾಗಿದೆ. ಅಲ್ಲಾಹು ಹೇಳುತ್ತಾನೆ:

﴿ ٱدْعُ إِلَىٰ سَبِيلِ رَبِّكَ بِٱلْحِكْمَةِ وَٱلْمَوْعِظَةِ ٱلْحَسَنَةِ ۖ وَجَـٰدِلْهُم بِٱلَّتِى هِىَ أَحْسَنُ ﴾

**“ತಾವು ತಮ್ಮ ರಬ್ಬ್‌ನ ಮಾರ್ಗದೆಡೆಗೆ ಹಿಕ್ಮತ್‌ನೊಂದಿಗೆ ಮತ್ತು**

---

**15** ಉಮ್ಮು ಸಲಮಾ(ﵚ)ರಿಂದ ವರದಿ: ಪ್ರವಾದಿ(ﷺ)ರವರು ಹೇಳಿದರು: **‘ನೀವು ನಿಮ್ಮ ವ್ಯಾಜ್ಯಗಳನ್ನು ನನ್ನ ಬಳಿಗೆ ತರುತ್ತೀರಿ. ನಿಮ್ಮಲ್ಲಿ ಕೆಲವರು ಪುರಾವೆ ಮಂಡಿಸುವುದರಲ್ಲಿ ಇತರ ಕೆಲವರಿಗಿಂತಲೂ ಹೆಚ್ಚು ವಾಕ್ಚಾತುರ್ಯವುಳ್ಳವರಾಗಿರಲೂ ಬಹುದು. ಆದ್ದರಿಂದ ಯಾವೊಬ್ಬನ ಮಾತನ್ನು ಆಲಿಸಿ ನಾನು ಅವನಿಗೆ ಅವನ ಸಹೋದರನ ಹಕ್ಕಿನಿಂದ (ಏನನ್ನಾದರೂ) ತೀರ್ಪು ನೀಡಿದರೆ ನಾನು ಅವನಿಗೆ ಕತ್ತರಿಸಿ ಕೊಡುತ್ತಿರುವುದು ನರಕಾಗ್ನಿಯ ಒಂದು ತುಂಡನ್ನಾಗಿದೆ. ಆದ್ದರಿಂದ ಅವನು ಅದನ್ನು ಪಡೆಯದಿರಲಿ.’** [ಸಹೀಹುಲ್ ಬುಖಾರಿ 2/261; ಹದೀಸ್ ನಂ. 2680]

ಉಮ್ಮು ಸಲಮಾ(ﵚ)ರಿಂದ ವರದಿ: ಪ್ರವಾದಿ(ﷺ)ರವರು ಹೇಳಿದರು: **‘ನಾನೊಬ್ಬ ಮನುಷ್ಯನು ಮಾತ್ರವಾಗಿರುವೆನು. ನೀವು ನಿಮ್ಮ ವ್ಯಾಜ್ಯಗಳನ್ನು ನನ್ನ ಬಳಿಗೆ ತರುತ್ತೀರಿ. ನಿಮ್ಮಲ್ಲಿ ಕೆಲವರು ಪುರಾವೆ ಮಂಡಿಸುವುದರಲ್ಲಿ ಇತರ ಕೆಲವರಿಗಿಂತಲೂ ಹೆಚ್ಚು ವಾಕ್ಚಾತುರ್ಯವುಳ್ಳವರಾಗಿರಲೂ ಬಹುದು. ಆಗ ನಾನು ಏನನ್ನು ಆಲಿಸುತ್ತೇನೋ ಅದರ ಆಧಾರದಲ್ಲೇ ನಾನು ತೀರ್ಪು ನೀಡುತ್ತೇನೆ. ಆದ್ದರಿಂದ ಯಾರಿಗಾದರೂ ಅವನ ಸಹೋದರ ಹಕ್ಕಿನಿಂದ ನಾನು ಏನನ್ನಾದರೂ ತೀರ್ಪು ನೀಡಿದರೆ ಅವನು ಅದನ್ನು ಪಡೆಯದಿರಲಿ. ಯಾಕೆಂದರೆ ನಾನು ಅವನಿಗೆ ಕತ್ತರಿಸಿ ಕೊಡುತ್ತಿರುವುದು ನರಕಾಗ್ನಿಯ ಒಂದು ತುಂಡನ್ನಾಗಿದೆ.’** [ಸಹೀಹುಲ್ ಬುಖಾರಿ 4/290; ಹದೀಸ್ ನಂ. 6967]

ಉಮ್ಮು ಸಲಮಾ(ﵚ)ರಿಂದ ವರದಿ: ಪ್ರವಾದಿ(ﷺ)ರವರ ಕೋಣೆಯ ಬಾಗಿಲ ಬಳಿ ಕೆಲವರು ತರ್ಕಿಸುವುದನ್ನು ಅವರು ಆಲಿಸಿದರು. ಆಗ ಅವರು ಹೊರಗೆ ಬಂದು ಹೇಳಿದರು: **‘ನಾನೊಬ್ಬ ಮನುಷ್ಯನು ಮಾತ್ರವಾಗಿರುವೆನು. ನನ್ನ ಬಳಿಗೆ ವ್ಯಾಜ್ಯಗಳನ್ನು ತರಲಾಗುತ್ತದೆ. ಅವರ ಪೈಕಿ ಕೆಲವರು ಇತರ ಕೆಲವರಿಗಿಂತಲೂ ಹೆಚ್ಚು ವಾಕ್ಚಾತುರ್ಯವುಳ್ಳವರಾಗಿರಲೂ ಬಹುದು. ಆಗ ನಾನು ಅವನು ಹೇಳುವುದನ್ನು ಸತ್ಯವೆಂದು ಭಾವಿಸುತ್ತೇನೆ. ತರುವಾಯ ಅವನ ಪರವಾಗಿ ತೀರ್ಪು ನೀಡುತ್ತೇನೆ. ಆದ್ದರಿಂದ ಯಾರಿಗಾದರೂ ಮುಸ್ಲಿಮನೊಬ್ಬನ ಹಕ್ಕಿನಿಂದ ನಾನು ಏನನ್ನಾದರೂ ತೀರ್ಪು ನೀಡಿದರೆ ಅದು ನರಕಾಗ್ನಿಯಿಂದಿರುವ ಒಂದು ತುಂಡಾಗಿದೆ. ಅವನು ಒಂದೋ ಅದನ್ನು ಹೊತ್ತುಕೊಳ್ಳಲಿ ಅಥವಾ ಬಿಟ್ಟುಬಿಡಲಿ.’** [ಸಹೀಹ್ ಮುಸ್ಲಿಮ್ 3/1338; ಹದೀಸ್ ನಂ. 1713]

**ಸುಂದರವಾದ ಉಪದೇಶದೊಂದಿಗೆ ದಅ್‌ವಾ ಮಾಡಿರಿ. ಮತ್ತು ಯಾವುದು ಅತ್ಯುತ್ತಮವಾಗಿದೆಯೋ ಅದರ ಮೂಲಕ ಅವರೊಂದಿಗೆ ತರ್ಕಿಸಿರಿ.”** [16]

ಕೆಲವು ದಾಈಗಳು (ದಅ್‌ವಾ ಮಾಡುವವರು) ದುರಾಚಾರವನ್ನು ಕಂಡೊಡನೆ ಅದರ ಮೇಲೆ ಹಾರಿ ಬೀಳುತ್ತಾರೆ. ತಮ್ಮ ಈ ಕೃತ್ಯದ ಅಂತಿಮ ಫಲಿತಾಂಶದ ಬಗ್ಗೆ ಅವರು ಚಿಂತಿಸುವುದೇ ಇಲ್ಲ. ಅದು ತಮ್ಮ ಮೇಲೆ ಮಾತ್ರವಲ್ಲದೆ, ತಮ್ಮಂತೆ ಅಲ್ಲಾಹನೆಡೆಗೆ ದಅ್‌ವಾ ಮಾಡುವ ಇತರರ ಮೇಲೂ ದುಷ್ಪರಿಣಾಮ ಬೀರುತ್ತದೆಯೆಂಬುದರ ಬಗ್ಗೆ ಅವರು ಆಲೋಚಿಸುವುದಿಲ್ಲ. ಆದ್ದರಿಂದ ದಅ್‌ವಾ ಮಾಡುವವನು ತಾನು ಒಂದು ಕೃತ್ಯವನ್ನು ಮಾಡುವುದಕ್ಕೆ ಮುಂಚೆಯೇ ಅದರ ಪರಿಣಾಮದೆಡೆಗೆ ವೀಕ್ಷಿಸಿ ಅದನ್ನು ತೂಗಿ ನೋಡಬೇಕಾದುದು ಅವನ ಮೇಲೆ ಕಡ್ಡಾಯವಾಗಿದೆ. ಆ ಸಮಯದಲ್ಲಿ ಅವನು ಮಾಡಿದ ಕೃತ್ಯವು ಅವನ ಆವೇಶದ ಬೆಂಕಿಯನ್ನು ತಣಿಸಬಹುದು. ಆದರೆ ಭವಿಷ್ಯದಲ್ಲಿ ಅದು ಅವನ ಮತ್ತು ಇತರರ ಆವೇಶವನ್ನೇ ನಂದಿಸಿಬಿಡುವ ಸಾಧ್ಯತೆಯಿದೆ. ಭವಿಷ್ಯದಲ್ಲಿ ಎಂದರೆ ಅದು ಶೀಘ್ರವೇ ಆಗಿರಬಹುದು. ಆದ್ದರಿಂದ ಹಿಕ್ಮತ್ ಮತ್ತು ಸಾವಧಾನವನ್ನು ಬಳಸಬೇಕೆಂದು ದಅ್‌ವಾ ಮಾಡುವ ನನ್ನ ಸಹೋದರರಿಗೆ ನಾನು ಸಲಹೆ ನೀಡುತ್ತಿದ್ದೇನೆ. ಇದರಿಂದಾಗಿ ಆ ಕಾರ್ಯವು ಸ್ವಲ್ಪ ನಿಧಾನವಾದರೂ ಅದರ ಅಂತಿಮ ಫಲಿತಾಂಶವು ಅಲ್ಲಾಹನ ಇಚ್ಛೆಯ ಪ್ರಕಾರ ಸ್ತುತ್ಯರ್ಹವಾಗಿರುವುದು.

ಈ ವಿಷಯವು, ಅಂದರೆ ಅಲ್ಲಾಹನೆಡೆಗೆ ದಅ್‌ವಾ ಮಾಡುವವರು ಅಲ್ಲಾಹನ ಗ್ರಂಥ ಮತ್ತು ರಸೂಲ್(ﷺ)ರವರ ಸುನ್ನತ್ತಿನ ಮೇಲೆ ಆಧಾರಿತವಾದ ಸಹೀಹಾದ ಇಲ್ಮ್‌ನ ಪೂರ್ವಸಿದ್ಧತೆಯನ್ನು ಹೊಂದಿರಬೇಕೆಂದು ನಾನು ಹೇಳಿರುವುದು ಶರೀಅತ್ತಿನ ಸ್ಪಷ್ಟ ವಚನಗಳ (ನಸ್ಸ್) ಆಧಾರದಲ್ಲಾಗಿದೆ. ಅದೇ ರೀತಿ ಇದು ಸಂದೇಹವಾಗಲಿ, ಸ್ವೇಚ್ಛೆಯಾಗಲಿ ಹೊಂದಿರದ ಸ್ಪಷ್ಟವಾದ ಬುದ್ಧಿಯ ಆಧಾರದಲ್ಲೂ ಆಗಿದೆ. ಯಾಕೆಂದರೆ ಅಲ್ಲಾಹನೆಡೆಗೆ ನಿನ್ನನ್ನು ತಲುಪಿಸುವ ಮಾರ್ಗಗಳ ಬಗ್ಗೆ ನಿನಗೆ ಇಲ್ಮ್ ಇಲ್ಲದಿದ್ದರೆ ಮತ್ತು ಅಲ್ಲಾಹನ ಶರೀಅತ್ತಿನ ಬಗ್ಗೆ ನಿನಗೆ ಇಲ್ಮ್ ಇಲ್ಲದಿದ್ದರೆ ನೀನು ಅಲ್ಲಾಹನೆಡೆಗೆ ದಅ್‌ವಾ ಮಾಡುವುದಾದರೂ ಹೇಗೆ? ನೀನೊಬ್ಬ ದಾಈ ಆಗುವುದಾದರೂ ಹೇಗೆ?

ಆದ್ದರಿಂದ ಒಬ್ಬ ವ್ಯಕ್ತಿಗೆ ಇಲ್ಮ್ ಇಲ್ಲದಿದ್ದರೆ ಅವನಿಗೆ ಹೆಚ್ಚು ಯೋಗ್ಯವಾಗಿರುವುದು ಅವನು ಇಲ್ಮನ್ನು ಕಲಿಯುವುದಾಗಿದೆ. ಅದರ ಬಳಿಕವೇ ಅವನು ದಅ್‌ವಾ ಮಾಡಬೇಕಾಗಿದೆ.

ಕೆಲವರು ಹೀಗೆ ಕೇಳುವರು: ಆದರೆ ನಿಮ್ಮ ಈ ಮಾತು ಪ್ರವಾದಿ(ﷺ)ರವರ ಈ ವಚನಕ್ಕೆ ವಿರುದ್ಧವಾಗಲಾರದೇ?

---

**16 ಕುರ್‌ಆನ್** 16:125

«بَلِّغُوا عَنِّي وَلَوْ آيَةً»

**"ನನ್ನಿಂದ ಒಂದೇ ಒಂದು ಆಯತ್ತನ್ನಾದರೂ ತಲುಪಿಸಿರಿ."** (17)

ಇದಕ್ಕಿರುವ ಉತ್ತರವು: ವಿರುದ್ಧವಾಗಲಾರದು ಎಂಬುದಾಗಿದೆ. ಯಾಕೆಂದರೆ ಪ್ರವಾದಿ(ﷺ)ರವರು ಹೇಳುವುದು ನನ್ನಿಂದ ತಲುಪಿಸಿರಿ ಎಂದಾಗಿದೆ. ಆದ್ದರಿಂದ ನಾವು ಏನನ್ನು ತಲುಪಿಸುತ್ತೇವೋ ಅದು ಪ್ರವಾದಿ(ﷺ)ರವರಿಂದ ಹೊರಹೊಮ್ಮಿರುವಂತದ್ದೇ ಆಗಿರಬೇಕಾಗಿದೆ. ಇದಾಗಿದೆ ನಾವು ಇದರಿಂದ ಉದ್ದೇಶಿಸುವ ಅರ್ಥ. ದಅ್‌ವಾ ಮಾಡುವವನಿಗೆ ಇಲ್ಮ್ ಇರಬೇಕಾದುದು ಅತ್ಯಾವಶ್ಯಕವಾಗಿದೆ ಎಂಬ ನಮ್ಮ ಮಾತಿನ ಅರ್ಥವು ಅವನು ಇಲ್ಮ್‌ನಲ್ಲಿ ಆಳವಾದ ಹಂತವನ್ನು ತಲುಪಿರಬೇಕಾದುದು ಅನಿವಾರ್ಯವಾಗಿದೆ ಎಂದಲ್ಲ. ಆದರೆ ನಾವು ಹೇಳುವುದು ಅವನಿಗೆ ಯಾವುದರ ಬಗ್ಗೆ ಇಲ್ಮ್ ಇದೆಯೋ ಅದರಲ್ಲಿ ಮಾತ್ರ ಅವನು ದಅ್‌ವಾ ಮಾಡಬೇಕು ಮತ್ತು ಅವನಿಗೆ ಯಾವುದರಲ್ಲಿ ಇಲ್ಮ್ ಇಲ್ಲವೋ ಅದರ ಬಗ್ಗೆ ಅವನು ಮಾತನಾಡಬಾರದು ಎಂದು ಮಾತ್ರವಾಗಿದೆ.

---

17 ಅಬ್ದುಲ್ಲಾಹ್ ಇಬ್ನ್ ಅಮ್ರ್(ರ)ರಿಂದ ವರದಿ: ಪ್ರವಾದಿ(ﷺ)ರವರು ಹೇಳಿದರು: **'ನನ್ನಿಂದ ಒಂದೇ ಒಂದು ಆಯತ್ತನ್ನಾದರೂ ತಲುಪಿಸಿರಿ. ಬನೂ ಇಸ್ರಾಈಲರಿಂದ ಉದ್ಧರಿಸಿರಿ. ಅದರಲ್ಲಿ ತೊಂದರೆಯಿಲ್ಲ. ನನ್ನ ಹೆಸರಲ್ಲಿ ಯಾರಾದರೂ ಮನಃಪೂರ್ವಕ ಸುಳ್ಳು ಹೇಳಿದರೆ ಅವನು ನರಕಾಗ್ನಿಯಿಂದಿರುವ ಅವನ ಆಸನವನ್ನು ಕಾಯ್ದಿರಿಸಲಿ.'** [ಸಹೀಹುಲ್ ಬುಖಾರಿ 2/493; ಹದೀಸ್ ನಂ. 3461]

## الزاد الثاني: أن يكون الداعية صابرًا على دعوته

## ಎರಡನೆ ಪೂರ್ವಸಿದ್ಧತೆ: ದಅ್‌ವಾ ಮಾಡುವವನು ತನ್ನ ದಅ್‌ವಾದಲ್ಲಿ ತಾಳ್ಮೆಯುಳ್ಳವನಾಗಿರಬೇಕು

ಎರಡನೆ ಪೂರ್ವಸಿದ್ಧತೆಯು ದಅ್‌ವಾ ಮಾಡುವವನು ತನ್ನ ದಅ್‌ವಾದಲ್ಲಿ ತಾಳ್ಮೆಯುಳ್ಳವನಾಗಿರಬೇಕು ಎಂಬುದಾಗಿದೆ. ಅವನು ಯಾವುದರೆಡೆಗೆ ದಅ್‌ವಾ ಮಾಡುತ್ತಿರುವನೋ ಅದರಲ್ಲಿ ಅವನು ತಾಳ್ಮೆಯುಳ್ಳವನಾಗಿರಬೇಕಾಗಿದೆ. ಅವನ ದಅ್‌ವಾಗೆ ಎದುರಾಗಿ ಬರುವ ವಿಷಯಗಳಲ್ಲಿ ತಾಳ್ಮೆ ವಹಿಸುವವನಾಗಿರಬೇಕಾಗಿದೆ. ಅವನಿಗೆ ಎದುರಾಗುವ ತೊಂದರೆಗಳಲ್ಲಿ ತಾಳ್ಮೆ ವಹಿಸುವವನಾಗಿರಬೇಕಾಗಿದೆ.

ದಅ್‌ವಾ ಮಾಡುವವನು ದಅ್‌ವಾದಲ್ಲಿ ತಾಳ್ಮೆಯುಳ್ಳವನಾಗಿರಬೇಕಾಗಿದೆ. ಅಂದರೆ ಅವನು ಅದರಲ್ಲಿ ಸತತ ಪ್ರಯತ್ನ ಮಾಡುವವನಾಗಿರಬೇಕಾಗಿದೆ. ಅವನು ಅದನ್ನು (ಅರ್ಧದಲ್ಲಿ) ಬಿಟ್ಟುಬಿಡಬಾರದು. ಅದರಲ್ಲಿ ಅವನಿಗೆ ಅನಾಸಕ್ತಿಯುಂಟಾಗಬಾರದು. ಬದಲಾಗಿ ಯಾವೆಲ್ಲ ಕ್ಷೇತ್ರಗಳಲ್ಲಿ ದಅ್‌ವಾ ಮಾಡಿದರೆ ಅದು ಪ್ರಯೋಜನಕಾರಿಯೂ, ಯೋಗ್ಯವೂ, ಪರಿಣಾಮಕಾರಿಯೂ ಆಗುತ್ತದೋ ಅವೆಲ್ಲವುಗಳಲ್ಲೂ ತನ್ನ ಸಾಮರ್ಥ್ಯಕ್ಕೆ ತಕ್ಕಂತೆ ಅಲ್ಲಾಹನೆಡೆಗೆ ದಅ್‌ವಾ ಮಾಡುವುದನ್ನು ಅವನು ಮುಂದುವರಿಸುತ್ತಿರಬೇಕಾಗಿದೆ. ಆದ್ದರಿಂದ ಅವನು ದಅ್‌ವಾ ಮಾಡುವುದರಲ್ಲಿ ತಾಳ್ಮೆಯುಳ್ಳವನಾಗಬೇಕು ಮತ್ತು ಅದರಲ್ಲಿ ಅವನಿಗೆ ಅನಾಸಕ್ತಿಯುಂಟಾಗಬಾರದು. ಯಾಕೆಂದರೆ ಮನುಷ್ಯನಿಗೆ ಅನಾಸಕ್ತಿಯುಂಟಾದರೆ ಅವನಿಗೆ ಅದರಲ್ಲಿ ಬೇಸರವುಂಟಾಗುತ್ತದೆ ಮತ್ತು ದಅ್‌ವಾ ಮಾಡುವುದನ್ನು ಅವನು ಬಿಟ್ಟುಬಿಡುತ್ತಾನೆ. ಆದರೆ ಅವನು ದಅ್‌ವಾ ಮಾಡುವುದರಲ್ಲಿ ಸತತ ಪ್ರಯತ್ನ ಮಾಡುವವನಾಗಿದ್ದರೆ ಒಂದು ಕಡೆಯಿಂದ ಅವನಿಗೆ ತಾಳ್ಮೆ ವಹಿಸಿದ ಪುಣ್ಯವು ಲಭ್ಯವಾಗುತ್ತದೆ ಮತ್ತು ಇನ್ನೊಂದು ಕಡೆ ಅಂತಿಮ ಫಲಿತಾಂಶವು ಅವನ ಪರವಾಗಿರುತ್ತದೆ. ಅಲ್ಲಾಹು [ಅಝ್ಝ ವಜಲ್ಲ್] ಅವನ ಪ್ರವಾದಿ(ﷺ)ರವರೊಂದಿಗೆ ಹೇಳುವ ಮಾತನ್ನು ಕೇಳಿರಿ:

﴿ تِلْكَ مِنْ أَنبَآءِ ٱلْغَيْبِ نُوحِيهَآ إِلَيْكَ ۖ مَا كُنتَ تَعْلَمُهَآ أَنتَ وَلَا قَوْمُكَ مِن قَبْلِ هَٰذَا ۖ فَٱصْبِرْ ۖ إِنَّ ٱلْعَٰقِبَةَ لِلْمُتَّقِينَ ﴿٤٩﴾ ﴾

**“ಇವು ಅಗೋಚರ ವಿಷಯಗಳಲ್ಲಿ ಸೇರಿದ ವಾರ್ತೆಗಳಾಗಿವೆ. ನಾವಿದನ್ನು ತಮಗೆ ವಹ್ಯ್ ಮೂಲಕ ತಿಳಿಸಿಕೊಡುತ್ತಿದ್ದೇವೆ. ತಾವಾಗಲಿ ತಮ್ಮ ಜನತೆಯಾಗಲಿ ಇದಕ್ಕಿಂತ ಮುಂಚೆ ಇದನ್ನು ಅರಿತವರಾಗಿರಲಿಲ್ಲ. ಆದ್ದರಿಂದ ತಾವು ತಾಳ್ಮೆ ವಹಿಸಿರಿ. ಖಂಡಿತವಾಗಿಯೂ ಅಂತಿಮ ಫಲಿತಾಂಶವು ಮುತ್ತಕೀಗಳಿಗಾಗಿದೆ.”** [18]

ಆದ್ದರಿಂದ ದಅ್‌ವಾ ಮಾಡುವವನು ಅವನ ದಅ್‌ವಾಗೆ ಎದುರಾಗಿ ವಿರೋಧಗಳ ಮತ್ತು ತರ್ಕ ವಿತರ್ಕಗಳ ಬಗ್ಗೆ ತಾಳ್ಮೆ ವಹಿಸಬೇಕಾದುದು ಅನಿವಾರ್ಯವಾಗಿದೆ. ಯಾಕೆಂದರೆ ಅಲ್ಲಾಹು [ಅಝ್ಝ ವಜಲ್ಲ್] ನೆಡೆಗೆ ದಅ್‌ವಾ ಮಾಡಲು ಎದ್ದು ನಿಲ್ಲುವ ಪ್ರತಿಯೊಬ್ಬ ವ್ಯಕ್ತಿಗೂ ವಿರೋಧಗಳು ಎದುರಾಗಿಯೇ ತೀರುತ್ತದೆ.

﴿ وَكَذَٰلِكَ جَعَلْنَا لِكُلِّ نَبِيٍّ عَدُوًّا مِّنَ الْمُجْرِمِينَ ۗ وَكَفَىٰ بِرَبِّكَ هَادِيًا وَنَصِيرًا ﴿٣١﴾ ﴾

**“ಹೀಗೆ ನಾವು ಪ್ರತಿಯೊಬ್ಬ ಸಂದೇಶವಾಹಕರಿಗೂ ಅಪರಾಧಿಗಳಲ್ಲಿ ಸೇರಿದ ಕೆಲವು ಶತ್ರುಗಳನ್ನು ಮಾಡಿರುವೆವು. ಮಾರ್ಗದರ್ಶಕನಾಗಿ ಮತ್ತು ಸಹಾಯಕನಾಗಿ ತಮ್ಮ ಪ್ರಭು ಸಾಕು!”** [19]

ಆದ್ದರಿಂದ ನಿಜವಾದ ದಅ್‌ವಾಗಳಿಗೆ ವಿರೋಧಗಳು ಎದುರಾಗಿಯೇ ತೀರುತ್ತದೆ. ಅದಕ್ಕೆ ಅಡ್ಡಿಪಡಿಸುವವರು, ಅದರಲ್ಲಿ ತರ್ಕಿಸುವವರು ಮತ್ತು ಅದರ ಬಗ್ಗೆ ಸಂಶಯಗಳನ್ನು ಬಿತ್ತುವವರು ಖಂಡಿತವಾಗಿಯೂ ಎದ್ದು ನಿಲ್ಲುತ್ತಾರೆ. ಆದರೆ ತನ್ನ ದಅ್‌ವಾಗೆ ಎದುರಾಗುವ ಎಲ್ಲ ವಿರೋಧಗಳನ್ನೂ ತಾಳ್ಮೆಯೊಂದಿಗೆ ಸಹಿಸುವುದು ದಅ್‌ವಾ ಮಾಡುವವನ ಮೇಲೆ ಕಡ್ಡಾಯವಾಗಿದೆ. ಕೆಲವೊಮ್ಮೆ ಆ ದಅ್‌ವಾವನ್ನು ಪ್ರಮಾದಪೂರಿತವೆಂದೋ ಅಥವಾ ಸತ್ಯಕ್ಕೆ ವಿರುದ್ಧವಾದುದೆಂದೋ ಹೇಳಲಾಗಬಹುದು. ಆಗ ದಅ್‌ವಾ ಮಾಡುವವನು ತನ್ನ ದಅ್‌ವಾ ಅಲ್ಲಾಹನ ಗ್ರಂಥ ಮತ್ತು ಅಲ್ಲಾಹನ ರಸೂಲ್(ﷺ)ರವರ ಸುನ್ನತ್ ಏನನ್ನು ಆವಶ್ಯಪಡುತ್ತದೋ ಅದರ ಪ್ರಕಾರವಾಗಿದೆಯೆಂದು ಅರಿತಿದ್ದರೆ ಅವರು ಹೇಳುವ ಮಾತುಗಳನ್ನು ಅವನು ತಾಳ್ಮೆಯಿಂದ ಸಹಿಸಬೇಕಾಗಿದೆ.

ಆದರೆ ಇದರ ಅರ್ಥ ದಅ್‌ವಾ ಮಾಡುವವನು, ಅವನಿಗೆ ಸತ್ಯವು ಸ್ಪಷ್ಟವಾದರೆ (ಅಂದರೆ ಅವನ ದಅ್‌ವಾದಲ್ಲಿ ಪ್ರಮಾದವಿದೆಯೆಂದು ಯಾರಾದರೂ ಆಧಾರಸಹಿತ

---

**18** **ಕುರ್‌ಆನ್** 11:49

**19** **ಕುರ್‌ಆನ್** 25:31

ಸಾಬೀತುಪಡಿಸಿದರೆ) ತಾನು ಹೇಳುವುದರಲ್ಲಿ ಮತ್ತು ತಾನು ಯಾವುದರೆಡೆಗೆ ದಅ್‌ವಾ ಮಾಡುತ್ತಿರುವನೋ ಅದರಲ್ಲಿ ಅಚಲವಾಗಿ ನಿಲ್ಲಬೇಕು ಎಂದಲ್ಲ. ಯಾಕೆಂದರೆ ಸತ್ಯವು ಸ್ಪಷ್ಟವಾದ ಬಳಿಕವೂ ತನ್ನ ಮಾತಿನಲ್ಲೇ ಅಚಲವಾಗಿ ನಿಲ್ಲುವವನು ಅಲ್ಲಾಹು ಈ ವಚನದಲ್ಲಿ ಯಾರ ಬಗ್ಗೆ ಪ್ರಸ್ತಾಪಿಸಿರುವನೋ ಅವರನ್ನು ಅನುಕರಿಸುವವನಾಗಿದ್ದಾನೆ.

﴿ يُجَٰدِلُونَكَ فِي ٱلۡحَقِّ بَعۡدَ مَا تَبَيَّنَ كَأَنَّمَا يُسَاقُونَ إِلَى ٱلۡمَوۡتِ وَهُمۡ يَنظُرُونَ ٦ ﴾

**“ಸತ್ಯವು ಸ್ಪಷ್ಟವಾದ ಬಳಿಕವೂ ಅವರು ಅದರ ಬಗ್ಗೆ ತಮ್ಮೊಂದಿಗೆ ತರ್ಕಿಸುತ್ತಿರುವರು; ಅವರು ನೋಡುತ್ತಿರುವಂತೆಯೇ ಅವರನ್ನು ಮರಣದೆಡೆಗೆ ಸಾಗಿಸಲಾಗುತ್ತಿದೆಯೋ ಎಂಬಂತೆ.”** [20]

ಸತ್ಯವು ಸ್ಪಷ್ಟವಾದ ಬಳಿಕ ಅದರ ಬಗ್ಗೆ ತರ್ಕಿಸುವುದು ಕೆಟ್ಟ ಗುಣವಾಗಿದೆ. ಈ ಗುಣವನ್ನು ಹೊಂದಿರುವವರ ಬಗ್ಗೆ ಅಲ್ಲಾಹು ಹೇಳುತ್ತಾನೆ:

﴿ وَمَن يُشَاقِقِ ٱلرَّسُولَ مِنۢ بَعۡدِ مَا تَبَيَّنَ لَهُ ٱلۡهُدَىٰ وَيَتَّبِعۡ غَيۡرَ سَبِيلِ
ٱلۡمُؤۡمِنِينَ نُوَلِّهِۦ مَا تَوَلَّىٰ وَنُصۡلِهِۦ جَهَنَّمَۖ وَسَآءَتۡ مَصِيرًا ١١٥ ﴾

**“ತನಗೆ ಸನ್ಮಾರ್ಗವು ಸ್ಪಷ್ಟವಾದ ಬಳಿಕ ಯಾರು ಸಂದೇಶವಾಹಕರಿಗೆ ವಿರುದ್ಧವಾಗಿ ಚಲಿಸುವನೋ ಮತ್ತು ಸತ್ಯವಿಶ್ವಾಸಿಗಳದ್ದಲ್ಲದ ಮಾರ್ಗವನ್ನು ಅನುಸರಿಸುವನೋ ಅವನು ತಿರುಗಿದ ಮಾರ್ಗಕ್ಕೆ ನಾವು ಅವನನ್ನು ತಿರುಗಿಸುವೆವು ಮತ್ತು ಅವನನ್ನು ನರಕಾಗ್ನಿಯಲ್ಲಿ ಉರಿಸುವೆವು. ಆ ವಾಸಸ್ಥಳವು ಎಷ್ಟು ನಿಕೃಷ್ಟವಾದುದು!”** [21]

ಆದ್ದರಿಂದ ಓ ದಾಈಗಳೇ, ನೀವು ಮಾಡುತ್ತಿರುವ ದಅ್‌ವಾಗೆ ಎದುರಾಗಿ ಬರುವ ಮಾತುಗಳು ಸತ್ಯವಾಗಿದ್ದರೆ ಅದರೆಡೆಗೆ ಮರಳುವುದು ನಿಮ್ಮ ಮೇಲೆ ಕಡ್ಡಾಯವಾಗಿದೆ. ಅದು ಸುಳ್ಳಾಗಿದ್ದರೆ ನಿಮ್ಮ ದಅ್‌ವಾದಲ್ಲಿ ನೀವು ಮುಂದಡಿಯಿಡುವ ದೃಢನಿರ್ಧಾರವನ್ನು ಅದು ತಿರುಗಿಸಿಬಿಡದಿರಲಿ.

ಅದೇ ರೀತಿ ದಅ್‌ವಾ ಮಾಡುವವನು ತನಗೆ ಎದುರಾಗುವ ತೊಂದರೆಗಳ ಬಗ್ಗೆ ತಾಳ್ಮೆ ವಹಿಸಬೇಕಾದುದು ಕಡ್ಡಾಯವಾಗಿದೆ. ಯಾಕೆಂದರೆ ದಅ್‌ವಾ ಮಾಡುವವನಿಗೆ

**20** **ಕುರ್‌ಆನ್** 8:6

**21** **ಕುರ್‌ಆನ್** 4:115

ಮೌಖಿಕವಾಗಿಯೋ ಅಥವಾ ದೈಹಿಕವಾಗಿಯೋ ತೊಂದರೆಗಳು ಎದುರಾಗಿಯೇ ತೀರುತ್ತದೆ. ಪ್ರವಾದಿಗಳನ್ನೇ ನೋಡಿ. [ಅವರ ಮೇಲೆ ಅಲ್ಲಾಹನ ಸಲಾತ್ ಮತ್ತು ಸಲಾಮ್ ಇರಲಿ]. ಅವರಿಗೆ ಮೌಖಿಕವಾಗಿಯೂ ದೈಹಿಕವಾಗಿಯೂ ತೊಂದರೆಗಳನ್ನು ನೀಡಲಾಗಿದೆ. ಅಲ್ಲಾಹನ ವಚನವನ್ನು ಓದಿರಿ:

﴿ كَذَٰلِكَ مَآ أَتَى ٱلَّذِينَ مِن قَبۡلِهِم مِّن رَّسُولٍ إِلَّا قَالُواْ سَاحِرٌ أَوۡ مَجۡنُونٌ ٥٢ ﴾

**“ಹೀಗೆ ಇವರಿಗಿಂತ ಮುಂಚಿನವರ ಬಳಿಗೆ ಯಾವುದೇ ಸಂದೇಶವಾಹಕರು ಬಂದಾಗಲೂ ಅವರು ಅವರನ್ನು ಮಾಟಗಾರ ಅಥವಾ ಹುಚ್ಚ ಎಂದು ಹೇಳದಿರಲಿಲ್ಲ.”** (22)

ಒಬ್ಬ ವ್ಯಕ್ತಿಗೆ ಅವನ ರಬ್ಬ್‌ನಿಂದ ವಹ್ಯ್ ಅವತೀರ್ಣವಾಗುತ್ತಿರುವಾಗ ಜನರು ಅವನ ಮುಖವನ್ನು ನೋಡಿ ಇವನೊಬ್ಬ ಮಾಟಗಾರ ಅಥವಾ ಹುಚ್ಚ ಎಂದು ಹೇಳಿದರೆ ಹೇಗಾಗಬಹುದು? ಅದರಿಂದ ತುಂಬಾ ನೋವಾಗುತ್ತದೆ ಎಂಬುದರಲ್ಲಿ ಅನುಮಾನವಿಲ್ಲ. ಆದರೂ ಪ್ರವಾದಿಗಳು ಅವರಿಗೆ ಮೌಖಿಕವಾಗಿ ನೀಡಲಾದ ಕಿರುಕುಳಗಳಲ್ಲೂ, ದೈಹಿಕವಾಗಿ ನೀಡಲಾದ ಕಿರುಕುಳಗಳಲ್ಲೂ ತಾಳ್ಮೆ ವಹಿಸಿದರು. ಸಂದೇಶವಾಹಕರ ಪೈಕಿ ಮೊಟ್ಟಮೊದಲನೆಯವರಾದ ನೂಹ್(عليه السلام)ರವರನ್ನೇ ನೋಡಿ. ಅವರು ಹಡಗನ್ನು ನಿರ್ಮಿಸುತ್ತಿರುವಾಗ ಅವರ ಜನರು ಅವರ ಬಳಿಯಿಂದ ಹಾದು ಹೋಗುತ್ತಾ ಅವರನ್ನು ಗೇಲಿ ಮಾಡುತ್ತಿದ್ದರು. ಆಗ ಅವರು ಹೇಳುತ್ತಿದ್ದರು:

﴿ قَالَ إِن تَسۡخَرُواْ مِنَّا فَإِنَّا نَسۡخَرُ مِنكُمۡ كَمَا تَسۡخَرُونَ ٣٨ ﴾

**“ಅವರು (ನೂಹ್) ಹೇಳಿದರು: ನೀವು ನಮ್ಮನ್ನು ಗೇಲಿಮಾಡುವುದಾದರೆ ಖಂಡಿತವಾಗಿಯೂ ನೀವು ಗೇಲಿ ಮಾಡಿದಂತೆಯೇ ನಾವೂ ನಿಮ್ಮನ್ನು ಗೇಲಿಮಾಡುವೆವು.”** (23)

ಆದರೆ ನೂಹ್(عليه السلام)ರವರನ್ನು ಗೇಲಿ ಮಾಡುವುದಕ್ಕಷ್ಟೇ ಅವರು ತಮ್ಮ ಕಾರ್ಯವನ್ನು ಸೀಮಿತಗೊಳಿಸಲಿಲ್ಲ. ಬದಲಾಗಿ ಅವರು ಅವರಿಗೆ ಕೊಲೆ ಬೆದರಿಕೆಯನ್ನು ಹಾಕಿದರು.

---

**22** **ಕುರ್‌ಆನ್** 51:52

**23** **ಕುರ್‌ಆನ್** 11:38

﴿ قَالُوا۟ لَئِن لَّمْ تَنتَهِ يَٰنُوحُ لَتَكُونَنَّ مِنَ ٱلْمَرْجُومِينَ ﴿١١٦﴾ ﴾

**“ಅವರು ಹೇಳಿದರು: ಓ ನೂಹ್! ತಾವು ನಿಲ್ಲಿಸದಿದ್ದರೆ ಖಂಡಿತವಾಗಿಯೂ ತಾವು ಮರ್ಜೂಮ್‌ಗಳಲ್ಲಿ ಸೇರಿದವರಾಗುವಿರಿ.”** (24)

ಅಂದರೆ ಕಲ್ಲೆಸೆದು ಸಾಯಿಸಲಾದವರಲ್ಲಿ ಸೇರಿದವರಾಗುವಿರಿ. ಅವರು ಕೊಲೆ ಬೆದರಿಕೆಯನ್ನು ಹಾಕಿದರು. ನಾವು ಈಗಾಗಲೇ ಅನೇಕ ಜನರನ್ನು ಕಲ್ಲೆಸೆದು ಸಾಯಿಸಿದ್ದೇವೆ, ತಾವೂ ಅವರಲ್ಲಿ ಸೇರಿದವರಾಗುವಿರಿ ಎಂದು ಅವರು ತಮ್ಮ ಪರಾಕ್ರಮವನ್ನು ತೋರಿಸುತ್ತಾ ಬೆದರಿಸುತ್ತಿದ್ದರು. ಆದರೆ ಇದು ನೂಹ್(عليه السلام)ರವರನ್ನು ಅವರ ದಅ್‌ವಾದಿಂದ ತಿರುಗಿಸಲಿಲ್ಲ. ಬದಲಾಗಿ ಅಲ್ಲಾಹು ಅವರ ಮತ್ತು ಅವರ ಜನತೆಯ ನಡುವೆ ತೀರ್ಪು ನೀಡುವ ತನಕ ಅವರು ದಅ್‌ವಾ ಮಾಡುತ್ತಲೇ ಇದ್ದರು.

ಇಬ್ರಾಹೀಮ್(عليه السلام)ರವರನ್ನು ನೋಡಿ. ಅವರ ಜನರು ಅವರನ್ನು ತಿರಸ್ಕರಿಸಿದರು. ಮಾತ್ರವಲ್ಲ ಜನರ ಸಮ್ಮುಖದಲ್ಲೇ ಅವರನ್ನು ಅಪಹಾಸ್ಯ ಮಾಡಿದರು.

﴿ قَالُوا۟ فَأْتُوا۟ بِهِۦ عَلَىٰٓ أَعْيُنِ ٱلنَّاسِ لَعَلَّهُمْ يَشْهَدُونَ ﴿٦١﴾ ﴾

**“ಅವರು ಹೇಳಿದರು: ಹಾಗಾದರೆ ಅವರನ್ನು ನೀವು ಜನರ ಕಣ್ಣ ಮುಂದೆ ತನ್ನಿರಿ. ಅವರು ಸಾಕ್ಷಿಗಳಾಗಲೂ ಬಹುದು.”** (25)

ತರುವಾಯ ಸುಟ್ಟು ಬಿಡುವುದಾಗಿ ಬೆದರಿಕೆ ಹಾಕಿದರು.

﴿ قَالُوا۟ حَرِّقُوهُ وَٱنصُرُوٓا۟ ءَالِهَتَكُمْ إِن كُنتُمْ فَٰعِلِينَ ﴿٦٨﴾ ﴾

**“ಅವರು ಹೇಳಿದರು: ನೀವೇನಾದರೂ ಮಾಡುವುದಾದರೆ ಅವರನ್ನು (ಇಬ್ರಾಹೀಮ್‌ರನ್ನು) ಸುಟ್ಟುಹಾಕಿರಿ ಮತ್ತು ನಿಮ್ಮ ಆರಾಧ್ಯರಿಗೆ ಸಹಾಯ ಮಾಡಿರಿ.”** (26)

ಅವರು ಮಹಾ ಅಗ್ನಿಯನ್ನು ಉರಿಸಿದರು ಮತ್ತು ಕವಣೆ ಯಂತ್ರದ ಮೂಲಕ

---

**24** **ಕುರ್‌ಆನ್** 26:116

**25** **ಕುರ್‌ಆನ್** 21:61

**26** **ಕುರ್‌ಆನ್** 21:68

ದೂರದಿಂದಲೇ ಇಬ್ರಾಹೀಮ್(ﷺ)ರವರನ್ನು ಅದಕ್ಕೆ ಎಸೆದರು. ಯಾಕೆಂದರೆ ಅದರ ಕಠಿಣ ಉರಿಯಿಂದಾಗಿ ಅದರ ಸಮೀಪಕ್ಕೆ ಹೋಗಲು ಅವರಿಗೆ ಸಾಧ್ಯವಿರಲಿಲ್ಲ. ರಬ್ಬುಲ್ ಇಝ್ಝತಿ ವಲ್ ಜಲಾಲ್ ಹೇಳುತ್ತಾನೆ:

﴿ قُلْنَا يَٰنَارُ كُونِى بَرْدًا وَسَلَٰمًا عَلَىٰٓ إِبْرَٰهِيمَ ٦٩ ﴾

**"ನಾವು ಹೇಳಿದೆವು: ಓ ಬೆಂಕಿಯೇ! ನೀನು ಇಬ್ರಾಹೀಮ್‌ರಿಗೆ ತಂಪು ಮತ್ತು ಸುರಕ್ಷೆಯಾಗಿ ಮಾರ್ಪಡು."** (27)

ಬೆಂಕಿಯು ತಣ್ಣಗಾಯಿತು ಮತ್ತು ಸುರಕ್ಷೆಯಾಯಿತು ಹಾಗೂ ಇಬ್ರಾಹೀಮ್(ﷺ) ರವರು ಅದರಿಂದ ಪಾರಾದರು. ಹೀಗೆ ಅಂತಿಮ ಫಲಿತಾಂಶವು ಇಬ್ರಾಹೀಮ್(ﷺ) ರವರ ಪರವಾಗಿತ್ತು.

﴿ وَأَرَادُوا۟ بِهِۦ كَيْدًا فَجَعَلْنَٰهُمُ ٱلْأَخْسَرِينَ ٧٠ ﴾

**"ಅವರು ಅವರ (ಇಬ್ರಾಹೀಮರ) ಮೇಲೆ ತಂತ್ರ ಹೂಡಲು ಬಯಸಿದರು. ಆದರೆ ನಾವು ಅವರನ್ನು ತೀರಾ ನಷ್ಟಹೊಂದಿದವರನ್ನಾಗಿ ಮಾಡಿದೆವು."** (28)

ಮೂಸಾ(ﷺ)ರವರನ್ನು ನೋಡಿ. ಫಿರ್‌ಔನ್ ಅವರಿಗೆ ಕೊಲೆ ಬೆದರಿಕೆಯನ್ನು ಹಾಕಿದನು.

﴿ وَقَالَ فِرْعَوْنُ ذَرُونِىٓ أَقْتُلْ مُوسَىٰ وَلْيَدْعُ رَبَّهُۥٓ ۖ إِنِّىٓ أَخَافُ أَن يُبَدِّلَ
دِينَكُمْ أَوْ أَن يُظْهِرَ فِى ٱلْأَرْضِ ٱلْفَسَادَ ٢٦ ﴾

**"ಫಿರ್‌ಔನ್ ಹೇಳಿದನು: ನನ್ನನ್ನು ಬಿಡಿರಿ! ನಾನು ಮೂಸಾನನ್ನು ಕೊಲ್ಲುವೆನು. ಅವನು ಅವನ ಪ್ರಭುವನ್ನು ಕರೆದು ಪ್ರಾರ್ಥಿಸಲಿ! ಅವನು ನಿಮ್ಮ ಧರ್ಮವನ್ನು ಬದಲಾವಣೆಗೊಳಿಸುವನು ಅಥವಾ ಭೂಮಿಯಲ್ಲಿ ಕ್ಷೋಭೆಯನ್ನುಂಟು**

---

27 ಕುರ್‌ಆನ್ 21:69

28 ಕುರ್‌ಆನ್ 21:70

**ಮಾಡುವನು ಎಂದು ಖಂಡಿತವಾಗಿಯೂ ನಾನು ಭಯಪಡುತ್ತಿರುವೆನು.”** (29)

ಅವನು ಕೊಲೆ ಬೆದರಿಕೆಯನ್ನು ಹಾಕಿದನು. ಆದರೆ ಅಂತಿಮ ಫಲಿತಾಂಶವು ಮೂಸಾ(ﷺ)ರವರ ಪರವಾಗಿತ್ತು.

﴿وَحَاقَ بِـَٔالِ فِرْعَوْنَ سُوٓءُ ٱلْعَذَابِ ﴿٤٥﴾﴾

**“ಫಿರ್‌ಔನನ ಜನರನ್ನು ಕಠೋರ ಶಿಕ್ಷೆಯು ಆವರಿಸಿತು.”** (30)

ಈಸಾ(ﷺ)ರವರನ್ನು ನೋಡಿ. ಅವರಿಗೆ ಅತ್ಯಂತ ಘೋರವಾದ ಕಿರುಕುಳವನ್ನು ಎದುರಿಸಬೇಕಾಗಿ ಬಂತು. ಯಹೂದರು ಅವರನ್ನು ವೇಶ್ಯೆಯ ಮಗನೆಂದು ಆಪಾದಿಸಿದರು. ಅವರ ವಾದ ಪ್ರಕಾರ ಅವರು ಈಸಾ(ﷺ)ರವರನ್ನು ಕೊಂದರು ಮತ್ತು ಶಿಲುಬೆಗೇರಿಸಿದರು. ಆದರೆ ಅಲ್ಲಾಹು [ತಆಲಾ] ಹೇಳುತ್ತಾನೆ:

﴿وَمَا قَتَلُوهُ وَمَا صَلَبُوهُ وَلَٰكِن شُبِّهَ لَهُمْ ۚ وَإِنَّ ٱلَّذِينَ ٱخْتَلَفُوا۟ فِيهِ لَفِى شَكٍّ مِّنْهُ ۚ مَا لَهُم بِهِۦ مِنْ عِلْمٍ إِلَّا ٱتِّبَاعَ ٱلظَّنِّ ۚ وَمَا قَتَلُوهُ يَقِينًۢا ﴿١٥٧﴾ بَل رَّفَعَهُ ٱللَّهُ إِلَيْهِ ۚ وَكَانَ ٱللَّهُ عَزِيزًا حَكِيمًا ﴿١٥٨﴾﴾

**“ಅವರು ಅವರನ್ನು (ಈಸಾರನ್ನು) ಕೊಂದಿಲ್ಲ ಮತ್ತು ಶಿಲುಬೆಗೇರಿಸಿಯೂ ಇಲ್ಲ. ಆದರೆ ಅವರಿಗೆ (ವಾಸ್ತವತೆಯನ್ನು) ಗುರುತಿಸಲು ಸಾಧ್ಯವಾಗದೆ ಹೋಯಿತು. ಖಂಡಿತವಾಗಿಯೂ ಅವರ (ಈಸಾರ) ವಿಷಯದಲ್ಲಿ ಭಿನ್ನರಾದವರು ಯಾರೋ ಅವರು ಅದರ ಬಗ್ಗೆ ಸಂದೇಹದಲ್ಲಿಯೇ ಇರುವರು. ಊಹಾಪೋಹಗಳನ್ನು ಅನುಸರಿಸುವುದರ ಹೊರತು ಅದರ ಬಗ್ಗೆ ಅವರಿಗೆ ಯಾವುದೇ ಅರಿವೂ ಇಲ್ಲ. ಖಂಡಿತವಾಗಿಯೂ ಅವರು ಅವರನ್ನು ಕೊಂದಿಲ್ಲ. ಆದರೆ ಅಲ್ಲಾಹು ಅವರನ್ನು ತನ್ನೆಡೆಗೆ ಎತ್ತಿಕೊಂಡಿರುವನು. ಅಲ್ಲಾಹು ಪರಾಕ್ರಮವುಳ್ಳವನೂ ವಿವೇಕವುಳ್ಳವನೂ ಆಗಿರುವನು.”** (31)

---

**29** **ಕುರ್‌ಆನ್** 40:26

**30** **ಕುರ್‌ಆನ್** 40:45

**31** **ಕುರ್‌ಆನ್** 4:157–158

ಹೀಗೆ ಈಸಾ(ﷺ)ರವರು ಅವರಿಂದ ಪಾರಾದರು.

ಅಂತಿಮ ಪ್ರವಾದಿಯೂ, ಪ್ರವಾದಿಗಳ ನಾಯಕರೂ, ಆದಮ್ ಸಂತತಿಗಳ ನೇತಾರರೂ ಆಗಿರುವ ಮುಹಮ್ಮದ್(ﷺ)ರವರನ್ನು ನೋಡಿ. ಅವರ ಬಗ್ಗೆ ಅಲ್ಲಾಹು ಹೇಳಿದನು:

﴿ وَإِذْ يَمْكُرُ بِكَ ٱلَّذِينَ كَفَرُوا۟ لِيُثْبِتُوكَ أَوْ يَقْتُلُوكَ أَوْ يُخْرِجُوكَ ۚ وَيَمْكُرُونَ وَيَمْكُرُ ٱللَّهُ ۖ وَٱللَّهُ خَيْرُ ٱلْمَٰكِرِينَ ﴿٣٠﴾ ﴾

**“ತಮ್ಮನ್ನು ಸೆರೆ ಹಿಡಿಯಲು ಅಥವಾ ಹತ್ಯೆ ಮಾಡಲು ಅಥವಾ ಊರಿನಿಂದ ಹೊರ ಹಾಕಲು ತಮಗೆ ವಿರುದ್ಧವಾಗಿ ಸತ್ಯನಿಷೇಧಿಗಳು ಒಳಸಂಚು ಹೂಡುತ್ತಿದ್ದ ಸಂದರ್ಭ(ವನ್ನು ಸ್ಮರಿಸಿರಿ). ಅವರು ತಂತ್ರ ರೂಪಿಸುವರು. ಅಲ್ಲಾಹು ಕೂಡ ತಂತ್ರ ರೂಪಿಸುವನು. ತಂತ್ರ ರೂಪಿಸುವರಲ್ಲಿ ಅಲ್ಲಾಹು ಅತ್ಯುತ್ತಮನಾಗಿರುವನು.”** (32)

﴿ وَقَالُوا۟ يَٰٓأَيُّهَا ٱلَّذِى نُزِّلَ عَلَيْهِ ٱلذِّكْرُ إِنَّكَ لَمَجْنُونٌ ﴿٦﴾ ﴾

**“ಅವರು ಹೇಳಿದರು: ಓ ವಹ್ಯ್ ಅವತೀರ್ಣಗೊಂಡಿರುವ ಮನುಷ್ಯನೇ! ಖಂಡಿತವಾಗಿಯೂ ತಾವೊಬ್ಬ ಹುಚ್ಚರಾಗಿರುವಿರಿ.”** (33)

﴿ وَيَقُولُونَ أَئِنَّا لَتَارِكُوٓا۟ ءَالِهَتِنَا لِشَاعِرٍ مَّجْنُونٍ ﴿٣٦﴾ ﴾

**“ಅವರು ಹೇಳುವರು: ಒಬ್ಬ ಹುಚ್ಚ ಕವಿಗಾಗಿ ನಾವು ನಮ್ಮ ಆರಾಧ್ಯರನ್ನು ಬಿಟ್ಟುಬಿಡಬೇಕೇ?”** (34)

ತಾರೀಖ್‌ನ ಉಲಮಾಗಳ ಬಳಿ ಸುಪರಿಚಿತವಾಗಿರುವಂತೆ ಪ್ರವಾದಿ(ﷺ)ರವರು ವಿರೋಧಿಗಳಿಂದ ಮೌಖಿಕವಾದ ಮತ್ತು ದೈಹಿಕವಾದ ಅನೇಕ ಕಿರುಕುಳಗಳನ್ನು ಎದುರಿಸಿದ್ದರು. ಆದರೂ ಅವರು ತಾಳ್ಮೆ ವಹಿಸಿದರು. ಆದ್ದರಿಂದ ಅಂತಿಮ ಫಲಿತಾಂಶವು ಅವರ ಪರವಾಗಿತ್ತು.

---

**32** **ಕುರ್‌ಆನ್** 8:30

**33** **ಕುರ್‌ಆನ್** 15:6

**34** **ಕುರ್‌ಆನ್** 37:36

ಆದ್ದರಿಂದ ದಅ್‌ವಾ ಮಾಡುವ ಪ್ರತಿಯೊಬ್ಬರಿಗೂ ತೊಂದರೆಗಳು ಎದುರಾಗಿಯೇ ತೀರುತ್ತದೆ. ಆದರೆ ಅವರು ಅದರಲ್ಲಿ ತಾಳ್ಮೆ ವಹಿಸಬೇಕಾಗಿದೆ. ಆದ್ದರಿಂದ ಅಲ್ಲಾಹು [ತಆಲಾ] ಅವನ ಪ್ರವಾದಿ(ﷺ)ರವರೊಂದಿಗೆ ಹೀಗೆ ಹೇಳಿದಾಗ:

﴿ إِنَّا نَحْنُ نَزَّلْنَا عَلَيْكَ ٱلْقُرْءَانَ تَنزِيلًا ﴿٢٣﴾ ﴾

**“ಖಂಡಿತವಾಗಿಯೂ ನಾವು ತಮಗೆ ಈ ಕುರ್‌ಆನನ್ನು ಹಂತ ಹಂತವಾಗಿ ಅವತೀರ್ಣಗೊಳಿಸಿರುವೆವು.”** [35]

ನಿರೀಕ್ಷೆಯ ಪ್ರಕಾರ ಇದರ ಬಳಿಕ ಅಲ್ಲಾಹು ಹೇಳಬೇಕಾದುದು ‘ಆದ್ದರಿಂದ ಈ ಕುರ್‌ಆನನ್ನು ತಮಗೆ ಅವತೀರ್ಣಗೊಳಿಸಿ ಕೊಟ್ಟ ಅಲ್ಲಾಹನ ಅನುಗ್ರಹಕ್ಕಾಗಿ ತಾವು ಕೃತಜ್ಞತೆ ಸಲ್ಲಿಸಿರಿ’ ಎಂದಾಗಿರಬೇಕಾಗಿದೆ. ಆದರೆ ಅಲ್ಲಾಹು ಹೇಳಿದ್ದೇನೆಂದರೆ:

﴿ فَٱصْبِرْ لِحُكْمِ رَبِّكَ وَلَا تُطِعْ مِنْهُمْ ءَاثِمًا أَوْ كَفُورًا ﴿٢٤﴾ ﴾

**“ಆದ್ದರಿಂದ ತಾವು ತಮ್ಮ ರಬ್ಬ್‌ನ ತೀರ್ಪಿಗೆ ತಾಳ್ಮೆ ವಹಿಸಿರಿ. ಅವರ ಪೈಕಿ ಯಾವುದೇ ಪಾಪಿಯನ್ನೂ, ಕೃತಘ್ನನನ್ನೂ ತಾವು ಅನುಸರಿಸದಿರಿ.”** [36]

ಈ ಕುರ್‌ಆನ್‌ನೊಂದಿಗೆ ಎದ್ದು ನಿಲ್ಲುವ ಎಲ್ಲರಿಗೂ ಮಹಾ ತಾಳ್ಮೆಯು ಅತ್ಯಾವಶ್ಯಕವಾಗುವ ವಿಷಯಗಳು ಬಂದೇ ತೀರುತ್ತವೆ ಎಂಬುದರೆಡೆಗೆ ಇದರಲ್ಲಿ ಸೂಚನೆಯಿದೆ.

ಆದ್ದರಿಂದ ದಅ್‌ವಾ ಮಾಡುವವನು ನಿರಂತರ ತಾಳ್ಮೆ ವಹಿಸುವವನಾಗಬೇಕಾಗಿದೆ ಮತ್ತು ಅಲ್ಲಾಹು ಅವನಿಗೆ ವಿಜಯವನ್ನು ಕರುಣಿಸುವ ತನಕ ಅವನು ಮುಂದುವರಿಯುತ್ತಲೇ ಇರಬೇಕಾಗಿದೆ. ಅವನು ಬದುಕಿರುವಾಗಲೇ ಅಲ್ಲಾಹು ಅವನಿಗೆ ವಿಜಯವನ್ನು ಕರುಣಿಸಬೇಕೆಂಬುದು ಅನಿವಾರ್ಯವಲ್ಲ. ಇಲ್ಲಿ ಪ್ರಾಮುಖ್ಯತೆಯಿರುವುದು ಅವನ ದಅ್‌ವಾ ಜನರ ಮಧ್ಯೆ ಶುದ್ಧರೂಪದಲ್ಲಿ ಮತ್ತು ಜನರು ಅನುಸರಿಸುವ ರೂಪದಲ್ಲಿ ನೆಲೆನಿಲ್ಲಬೇಕು ಎಂಬುದಾಗಿದೆ. ಇಲ್ಲಿ ವ್ಯಕ್ತಿಗೆ ಪ್ರಾಮುಖ್ಯತೆಯಿಲ್ಲ. ಆದರೆ ಪ್ರಾಮುಖ್ಯತೆಯಿರುವುದು ದಅ್‌ವಾಕ್ಕಾಗಿದೆ. ಅವನ ದಅ್‌ವಾ ನೆಲೆನಿಂತರೆ –ಅದು ಅವನ ಮರಣಾನಂತರವಾದರೂ ಸರಿ– ಅವನು ಜೀವಂತವಿರುವವನಾಗಿದ್ದಾನೆ.

35 **ಕುರ್‌ಆನ್** 76:23

36 **ಕುರ್‌ಆನ್** 76:24

ಅಲ್ಲಾಹು ಹೇಳುತ್ತಾನೆ:

﴿ أَوَمَن كَانَ مَيْتًا فَأَحْيَيْنَٰهُ وَجَعَلْنَا لَهُۥ نُورًا يَمْشِى بِهِۦ فِى ٱلنَّاسِ كَمَن مَّثَلُهُۥ فِى ٱلظُّلُمَٰتِ لَيْسَ بِخَارِجٍ مِّنْهَا ۚ كَذَٰلِكَ زُيِّنَ لِلْكَٰفِرِينَ مَا كَانُوا۟ يَعْمَلُونَ ﴿١٢٢﴾ ﴾

**“ಮರಣಹೊಂದಿದ ಒಬ್ಬನಿಗೆ ನಾವು ಜೀವವನ್ನು ನೀಡಿ, ತರುವಾಯ ಅವನಿಗೆ ಒಂದು ಪ್ರಕಾಶವನ್ನು ನೀಡಿ, ಅವನು ಅದರೊಂದಿಗೆ ಜನರ ಮಧ್ಯೆ ಓಡಾಡುತ್ತಿರುವನು. ಇಂತಹ ಒಬ್ಬನು ಹೊರ ಬರಲಾಗದಂತೆ ಅಂಧಕಾರಗಳಲ್ಲಿ ರುವವನಂತಾಗುವನೇ? ಹೀಗೆ ಸತ್ಯನಿಷೇಧಿಗಳಿಗೆ ಅವರು ಮಾಡುತ್ತಿರುವುದನ್ನು ಆಕರ್ಷಣೀಯಗೊಳಿಸಿ ತೋರಿಸಲಾಗಿದೆ.”** (37)

ಆದ್ದರಿಂದ ವಾಸ್ತವವಾಗಿ ದಅ್‌ವಾ ಮಾಡುವವನ ಬದುಕು ಎಂಬುದು ಅವನ ದೇಹದಲ್ಲಿ ಅವನ ಆತ್ಮವು ಅಸ್ತಿತ್ವದಲ್ಲಿರುವುದು ಮಾತ್ರವಲ್ಲ, ಬದಲಾಗಿ ಅವನ ಮಾತುಗಳು ಜನರ ಮಧ್ಯೆ ಜೀವಂತವಾಗಿ ಅಸ್ತಿತ್ವದಲ್ಲಿರುವುದು ಕೂಡ ಆಗಿದೆ. ಅಬೂ ಸುಫ್ಯಾನ್ ಮತ್ತು ಹಿರಕ್ಲ್‌ರವರ ಘಟನೆಯನ್ನು ನೋಡಿರಿ. ಪ್ರವಾದಿ(ﷺ)ರವರ ಪ್ರವಾದಿತ್ವದ ಬಗ್ಗೆ ತಿಳಿದಾಗ ಹಿರಕ್ಲ್ (38) ಅಬೂ ಸುಫ್ಯಾನ್‌ರನ್ನು ಕರೆಸಿ ಅವರೊಂದಿಗೆ ಪ್ರವಾದಿ(ﷺ)ರವರ ಬಗ್ಗೆ, ಅವರ ಅಸ್ತಿತ್ವದ ಬಗ್ಗೆ, ಅವರ ಕುಟುಂಬ ಬಗ್ಗೆ, ಅವರು ಯಾವುದರೆಡೆಗೆ ದಅ್‌ವಾ ಮಾಡುತ್ತಿದ್ದಾರೆಂಬುದರ ಬಗ್ಗೆ ಮತ್ತು ಅವರ ಅನುಯಾಯಿಗಳ (ಸಹಾಬಾಗಳ) ಬಗ್ಗೆ ಕೇಳಿದನು. ಅವನು ಕೇಳಿದ್ದಕ್ಕೆಲ್ಲಾ ಅಬೂ ಸುಫ್ಯಾನ್‌ರವರು ಉತ್ತರ ಕೊಟ್ಟಾಗ ಅವನು ಹೇಳಿದನು:

إِنْ كَانَ مَا تَقُولُ حَقًّا فَسَيَمْلِكُ مَا تَحْتَ قَدَمَيَّ هَاتَيْنِ

**“ನೀನು ಹೇಳುತ್ತಿರುವುದು ಸತ್ಯವಾಗಿದ್ದರೆ ಅವರು [ಪ್ರವಾದಿ(ﷺ)ರವರು] ನನ್ನ ಈ ಎರಡು ಪಾದಗಳ ಕೆಳಗಿರುವುದನ್ನೂ ಸ್ವಾಧೀನಪಡಿಸುವರು.”** (39)

---

37 **ಕುರ್‌ಆನ್** 6:122

38 ಪ್ರವಾದಿ(ﷺ)ರವರ ಕಾಲದಲ್ಲಿ ರೋಮ್ ಸಾಮ್ರಾಜ್ಯವನ್ನು ಆಳುತ್ತಿದ್ದ ಹಿರಾಕ್ಲಿಯಸ್ ಚಕ್ರವರ್ತಿ

39 ಅಬ್ದುಲ್ಲಾಹ್ ಇಬ್ನ್ ಅಬ್ಬಾಸ್(رضي الله عنهما)ರಿಂದ ವರದಿ: ಅಬೂ ಸುಫ್ಯಾನ್ ನನಗೆ ತಿಳಿಸಿದರು: ಕುರೈಶಿಗಳ ಒಂದು ಯಾತ್ರಾ ತಂಡದಲ್ಲಿದ್ದ ಅಬೂ ಸುಫ್ಯಾನ್‌ರನ್ನು ಹಿರಕ್ಲ್ ಕರೆಸಿದನು. ಆಗ ಅವರು

ಶಾಮ್‌ನಲ್ಲಿ ವ್ಯಾಪಾರಿಗಳಾಗಿದ್ದರು. ಅದು ಪ್ರವಾದಿ(ﷺ)ರವರು ಅಬೂ ಸುಫ್ಯಾನ್ ಮತ್ತು ಕುರೈಶೀ ಅವಿಶ್ವಾಸಿಗಳೊಂದಿಗೆ (ಹುದೈಬಿಯಾ) ಒಪ್ಪಂದ ಮಾಡಿಕೊಂಡಿದ್ದ ಕಾಲದಲ್ಲಾಗಿತ್ತು. ಹೀಗೆ ಅಬೂ ಸುಫ್ಯಾನ್ ಮತ್ತು ಕುರೈಶರು ಜೆರೂಸಲೇಮ್‌ನಲ್ಲಿದ್ದ ಹಿರಕ್ಲ್‌ನ ಬಳಿಗೆ ಹೋದರು. ಹಿರಕ್ಲ್ ಅವರನ್ನು ತನ್ನ ಸಭಾಸ್ಥಾನಕ್ಕೆ ಆಹ್ವಾನಿಸಿದನು. ಅವನ ಸುತ್ತಲೂ ರೋಮ್‌ನ ಹಿರಿಯ ಮುಖಂಡರಿದ್ದರು.

ತರುವಾಯ ಅವನು ಅವರನ್ನು ಮತ್ತು ಭಾಷಾಂತರಕಾರನನ್ನು ಕರೆಸಿ ಕೇಳಿದನು: ತಾನು ಪ್ರವಾದಿಯೆಂದು ವಾದಿಸುವ ಆ ವ್ಯಕ್ತಿಯೊಂದಿಗೆ [ಪ್ರವಾದಿ(ﷺ)ರವರೊಂದಿಗೆ] ನಿಮ್ಮ ಪೈಕಿ ಅತಿ ನಿಕಟ ಸಂಬಂಧವನ್ನು ಹೊಂದಿದವರು ಯಾರು? ಆಗ ಅಬೂ ಸುಫ್ಯಾನ್ ಹೇಳಿದರು: ನಾನು ಹೇಳಿದೆ: ನಾನು ಅವರ ಪೈಕಿ ಅತಿ ನಿಕಟ ಸಂಬಂಧಿಕನು. ಆಗ ಅವನು ಹೇಳಿದನು: ಅವನನ್ನು (ಅಬೂ ಸುಫ್ಯಾನ್‌ರನ್ನು) ನನ್ನ ಬಳಿಗೆ ಸಮೀಪಗೊಳಿಸಿರಿ. ಆಗ ಅವನ ಜನರು ಅಬೂ ಸುಫ್ಯಾನ್‌ರನ್ನು ಅವನಿಗೆ ಸಮೀಪಗೊಳಿಸಿದರು. ಉಳಿದವರನ್ನು ಅವರ ಹಿಂದೆ ನಿಲ್ಲಿಸಿದರು.

ತರುವಾಯ ಹಿರಕ್ಲ್ ಭಾಷಾಂತರಗಾರನೊಂದಿಗೆ ಹೇಳಿದನು: ನಾನು ಈ ವ್ಯಕ್ತಿಯೊಂದಿಗೆ ಕೆಲವು ಪ್ರಶ್ನೆಗಳನ್ನು ಕೇಳುತ್ತೇನೆ. ಅವನು ಸುಳ್ಳು ಹೇಳಿದರೆ ಅವನು ಸುಳ್ಳು ಹೇಳುತ್ತಿದ್ದಾನೆಂದು ನೀವು ಹೇಳಬೇಕು ಎಂದು ಅವರೊಂದಿಗೆ ಹೇಳಿರಿ. (ಅಬೂ ಸುಫ್ಯಾನ್ ಹೇಳುತ್ತಾರೆ) ಜನರು ನನ್ನನ್ನು ಸುಳ್ಳನೆಂದು ಕರೆಯುವರು ಎಂಬ ನಾಚಿಕೆಯು ನನಗಿಲ್ಲದಿರುತ್ತಿದ್ದರೆ ನಾನು ಸುಳ್ಳು ಹೇಳುತ್ತಿದ್ದೆ.

ತರುವಾಯ ಅವನು ನನ್ನೊಂದಿಗೆ ಮೊಟ್ಟಮೊದಲ ಪ್ರಶ್ನೆಯನ್ನು ಕೇಳಿದನು. ನಿಮ್ಮಲ್ಲಿ ಅವರ (ಪ್ರವಾದಿ(ﷺ)ರವರ) ಕುಟುಂಬವು ಹೇಗಿದೆ? ನಾನು ಹೇಳಿದೆ: ಅವರು ನಮ್ಮಲ್ಲಿ ಉನ್ನತ ಕುಟುಂಬವನ್ನು ಹೊಂದಿದ್ದಾರೆ.

ಅವನು ಕೇಳಿದನು: ಅವರಿಗಿಂತ (ಪ್ರವಾದಿಗಿಂತ) ಮುಂಚೆ ನಿಮ್ಮಲ್ಲಿ ಯಾರಾದರೂ ಈ ಮಾತನ್ನು ಹೇಳಿದ್ದಾರೆಯೇ (ಅಂದರೆ ಪ್ರವಾದಿತ್ವವನ್ನು ವಾದಿಸಿದ್ದಾರೆಯೇ)? ನಾನು ಹೇಳಿದೆ: ಇಲ್ಲ.

ಅವನು ಕೇಳಿದನು: ಅವರ ಪೂರ್ವಿಕರಲ್ಲಿ ಯಾರಾದರೂ ಅರಸನಾಗಿದ್ದರೇ? ನಾನು ಹೇಳಿದೆ: ಇಲ್ಲ.

ಅವನು ಕೇಳಿದನು: ಜನರ ಪೈಕಿ ಸ್ಥಿತಿವಂತರು ಅವರನ್ನು ಹಿಂಬಾಲಿಸುತ್ತಿದ್ದಾರೆಯೇ ಅಥವಾ ಬಲಹೀನರೇ? ನಾನು ಹೇಳಿದೆ: ಇಲ್ಲ, ಬಲಹೀನರು.

ಅವನು ಕೇಳಿದನು: ಅವರು ಹೆಚ್ಚುತ್ತಿದ್ದಾರೆಯೇ ಅಥವಾ ಕಡಿಮೆಯಾಗುತ್ತಿದ್ದಾರೆಯೇ? ನಾನು ಹೇಳಿದೆ: ಇಲ್ಲ, ಹೆಚ್ಚುತ್ತಿದ್ದಾರೆ.

ಅವನು ಕೇಳಿದನು: ಅವರ ಧರ್ಮವನ್ನು ಪ್ರವೇಶಿಸಿದ ಬಳಿಕ ನಿರಾಸೆಯಿಂದ ಯಾರಾದರೂ ಹಿಂದೆ ಮರಳುತ್ತಿದ್ದಾರೆಯೇ? ನಾನು ಹೇಳಿದೆ ಇಲ್ಲ.

ಅವನು ಕೇಳಿದನು: ಅವರು ಈ ಮಾತನ್ನು ಹೇಳುವುದಕ್ಕೆ (ಪ್ರವಾದಿತ್ವವನ್ನು ವಾದಿಸುವುದಕ್ಕೆ) ಮುಂಚೆ ಅವರನ್ನು ನೀವು ಸುಳ್ಳನೆಂದು ಆರೋಪಿಸುತ್ತಿದ್ದೀರಾ? ನಾನು ಹೇಳಿದೆ: ಇಲ್ಲ.

ಅವನು ಕೇಳಿದನು: ಅವರು ವಾಗ್ದಾನವನ್ನು ಉಲ್ಲಂಘಿಸುತ್ತಾರೆಯೇ? ನಾನು ಹೇಳಿದೆ ಇಲ್ಲ. ನಾವು ಅವರೊಂದಿಗೆ ಒಂದು ಒಪ್ಪಂದದಲ್ಲಿದ್ದೇವೆ. ಅದರ ವಿಷಯದಲ್ಲಿ ಅವರು ಏನು ಮಾಡುತ್ತಾರೋ ಗೊತ್ತಿಲ್ಲ. (ಅಬೂ ಸುಫ್ಯಾನ್ ಹೇಳುತ್ತಾರೆ) ಈ ಒಂದು ಮಾತಿನ ಹೊರತು ಅದರಲ್ಲಿ ಹೆಚ್ಚಿಗೆ ಏನನ್ನಾದರೂ ಸೇರಿಸಲು ನನಗೆ ಸಾಧ್ಯವಾಗಲಿಲ್ಲ.

ಅವನು ಕೇಳಿದನು: ನೀವು ಅವರೊಂದಿಗೆ ಯುದ್ಧ ಮಾಡಿದ್ದೀರಾ? ನಾನು ಹೇಳಿದೆ: ಹೌದು.

ಅವನು ಕೇಳಿದನು: ಅವರೊಂದಿಗೆ ನಿಮ್ಮ ಯುದ್ಧ ಹೇಗಿತ್ತು? ನಾನು ಹೇಳಿದೆ: ನಮ್ಮ ನಡುವೆಯಿರುವ ಯುದ್ಧದಲ್ಲಿ ಕೆಲವೊಮ್ಮೆ ಅವರು ಗೆಲ್ಲುತ್ತಿದ್ದರು ಮತ್ತು ಕೆಲವೊಮ್ಮೆ ನಾವು ಗೆಲ್ಲುತ್ತಿದ್ದೆವು.

ಅವನು ಕೇಳಿದನು: ಅವರು ನಿಮ್ಮೊಂದಿಗೆ ಏನೆಲ್ಲ ಆದೇಶಿಸುತ್ತಾರೆ. ನಾನು ಹೇಳಿದೆ: ಅವರು ಹೇಳುತ್ತಾರೆ: ಅಲ್ಲಾಹನನ್ನು ಮಾತ್ರ ಆರಾಧಿಸಿರಿ ಮತ್ತು ಅವನೊಂದಿಗೆ ಏನನ್ನೂ ಸಹಭಾಗಿಯನ್ನಾಗಿ ಮಾಡಬೇಡಿರಿ. ನಿಮ್ಮ ಪೂರ್ವಿಕರು ಹೇಳುವುದನ್ನು ಬಿಟ್ಟುಬಿಡಿರಿ. ಅವರು ನಮ್ಮೊಂದಿಗೆ ನಮಾಝ್ ಮಾಡಲು, ಸತ್ಯ ನುಡಿಯಲು, ಸಭ್ಯತೆಯನ್ನು ಕಾಪಾಡಲು ಮತ್ತು ಕುಟುಂಬ ಸಂಬಂಧವನ್ನು ಕಾಪಾಡಲು ಆದೇಶಿಸುತ್ತಾರೆ.

ಆಗ ಅವನು (ಹಿರಕ್ಲ್) ಭಾಷಾಂತರಗಾರನೊಂದಿಗೆ ಹೇಳಿದನು: ಅವರೊಂದಿಗೆ ಹೇಳಿರಿ: ನಾನು

(ﷺ)ರವರ ಬಗ್ಗೆ ಇಂತಹ ಒಂದು ಮಾತನ್ನು ಹೇಳುವರೆಂದು ಯಾರಾದರೂ

ನಿನ್ನೊಂದಿಗೆ ಅವರ ಕುಟುಂಬದ ಬಗ್ಗೆ ಕೇಳಿದೆ. ಆಗ ನೀನು ಅವರು ಉನ್ನತ ಕುಟುಂಬವನ್ನು ಹೊಂದಿದ್ದಾರೆಂದು ಹೇಳಿದೆ. ಪ್ರವಾದಿಗಳ ವಿಷಯವು ಹೀಗೆಯೇ ಆಗಿದೆ. ಅವರನ್ನು ಅವರ ಜನತೆಯ ಉನ್ನತ ಕುಟುಂಬದಲ್ಲೇ ಕಳುಹಿಸಲಾಗುತ್ತದೆ.

ನಿಮ್ಮ ಪೈಕಿ ಯಾರಾದರೂ ಈ ಮಾತನ್ನು ಹೇಳಿದ್ದಾರೆಯೇ (ಅಂದರೆ ಪ್ರವಾದಿತ್ವವನ್ನು ವಾದಿಸಿದ್ದಾರೆಯೇ) ಎಂದು ಕೇಳಿದೆ. ನೀನು ಇಲ್ಲವೆಂದು ಹೇಳಿದೆ. ಇವರಿಗಿಂತ ಮುಂಚೆ ಯಾರಾದರೂ ಈ ಮಾತನ್ನು ಹೇಳಿದ್ದರೆ (ಪ್ರವಾದಿತ್ವವನ್ನು ವಾದಿಸಿದ್ದರೆ) ಈ ವ್ಯಕ್ತಿ ಮುಂಚೆ ಯಾರೋ ಹೇಳಿದ್ದನ್ನು ಅನುಸರಿಸುತ್ತಿದ್ದಾರೆಂದು ಹೇಳಬಹುದಾಗಿತ್ತು.

ಅವರ ಪೂರ್ವಿಕರ ಪೈಕಿ ಯಾರಾದರೂ ಅರಸರಾಗಿದ್ದರೇ ಎಂದು ನಾನು ಕೇಳಿದೆ. ನೀನು ಇಲ್ಲವೆಂದು ಹೇಳಿದೆ. ಅವರ ಪೂರ್ವಿಕರ ಪೈಕಿ ಯಾರಾದರೂ ಅರಸರಾಗಿದ್ದರೆ ಇವರು ತಮ್ಮ ಪೂರ್ವಿಕರ ಆಡಳಿತವನ್ನು ಮರಳಿ ಪಡೆಯಲು ಹವಣಿಸುತ್ತಿದ್ದಾರೆಂದು ಹೇಳಬಹುದಾಗಿತ್ತು.

ಅವರು ಈ ಮಾತನ್ನು ಹೇಳುವುದಕ್ಕೆ (ಪ್ರವಾದಿತ್ವವನ್ನು ವಾದಿಸುವುದಕ್ಕೆ) ಮುಂಚೆ ನೀವು ಅವರನ್ನು ಸುಳ್ಳನೆಂದು ಆರೋಪಿಸುತ್ತಿದ್ದಿರಾ ಎಂದು ನಾನು ಕೇಳಿದೆ. ನೀನು ಇಲ್ಲವೆಂದು ಹೇಳಿದೆ. ನನಗೆ ಗೊತ್ತು. ಒಬ್ಬ ಪ್ರವಾದಿ ಜನರ ವಿಷಯದಲ್ಲಿ ಸುಳ್ಳು ಹೇಳುವುದನ್ನು ಬಿಟ್ಟು ಅಲ್ಲಾಹನ ವಿಷಯದಲ್ಲಿ ಸುಳ್ಳು ಹೇಳುವವನಾಗಲಾರನು.

ಜನರ ಪೈಕಿ ಸ್ಥಿತಿವಂತರು ಅವರನ್ನು ಅನುಸರಿಸುತ್ತಿದ್ದಾರೆಯೇ ಅಥವಾ ಬಲಹೀನರೇ ಎಂದು ನಾನು ಕೇಳಿದೆ. ನೀನು ಬಲಹೀನರೆಂದು ಹೇಳಿದೆ. ಹೌದು ಪ್ರವಾದಿಗಳ ಅನುಯಾಯಿಗಳು ಬಲಹೀನರೇ ಆಗಿರುತ್ತಾರೆ.

ಅವರು ಹೆಚ್ಚುತ್ತಿದ್ದಾರೆಯೇ ಅಥವಾ ಕಡಿಮೆಯಾಗುತ್ತಿದ್ದಾರೆಯೇ ಎಂದು ನಾನು ಕೇಳಿದೆ. ನೀನು ಅವರು ಹೆಚ್ಚುತ್ತಿದ್ದಾರೆಂದು ಹೇಳಿದೆ. ಈಮಾನ್‌ನ ವಿಷಯವು ಹಾಗೆಯೇ ಆಗಿದೆ. ಅದು ಪೂರ್ಣವಾಗುವ ತನಕ ಹೆಚ್ಚುತ್ತಲೇ ಇರುತ್ತದೆ.

ಅವರ ಧರ್ಮವನ್ನು ಪ್ರವೇಶಿಸಿದ ಬಳಿಕ ಯಾರಾದರೂ ನಿರಾಸೆಯಿಂದ ಹಿಂದೆ ಮರಳುತ್ತಿದ್ದಾರೆಯೇ ಎಂದು ನಾನು ಕೇಳಿದೆ. ನೀನು ಇಲ್ಲವೆಂದು ಹೇಳಿದೆ. ಈಮಾನ್‌ನ ಪ್ರಭೆಯು ಹೃದಯಗಳೊಂದಿಗೆ ಬೆರೆಯುವಾಗ ಅದರ ವಿಷಯವು ಹೀಗೆಯೇ ಆಗಿದೆ.

ಅವರು ವಾಗ್ದಾನವನ್ನು ಉಲ್ಲಂಘಿಸುತ್ತಿದ್ದಾರೆಯೇ ಎಂದು ನಾನು ಕೇಳಿದೆ. ನೀನು ಇಲ್ಲವೆಂದು ಹೇಳಿದೆ. ಹೀಗೆಯೇ ಆಗಿದೆ. ಪ್ರವಾದಿಗಳು ಎಂದೂ ವಾಗ್ದಾನಗಳನ್ನು ಉಲ್ಲಂಘಿಸಲಾರರು.

ಅವರು ನಿಮ್ಮೊಂದಿಗೆ ಏನನ್ನು ಆದೇಶಿಸುತ್ತಾರೆಂದು ನಾನು ಕೇಳಿದೆ. ಅವರು ನಿಮ್ಮೊಂದಿಗೆ ಅಲ್ಲಾಹನನ್ನು ಮಾತ್ರ ಆರಾಧಿಸಲು ಮತ್ತು ಅವನೊಂದಿಗೆ ಏನನ್ನೂ ಸಹಭಾಗಿಯಾಗಿ ಮಾಡದಿರಲು ಆದೇಶಿಸುತ್ತಾರೆ, ವಿಗ್ರಹಾರಾಧನೆಯನ್ನು ವಿರೋಧಿಸುತ್ತಾರೆ ಹಾಗೂ ನಮಾಝ್, ಸತ್ಯಸಂಧತೆ ಮತ್ತು ಸಭ್ಯತೆಯನ್ನು ಆದೇಶಿಸುತ್ತಾರೆಂದು ನೀನು ಹೇಳಿದೆ.

ನೀನು ಹೇಳುವುದು ಸತ್ಯವಾಗಿದ್ದರೆ ಅವರು ನನ್ನ ಈ ಎರಡು ಪಾದಗಳ ಕೆಳಗಿರುವ ಸ್ಥಳವನ್ನು ಸ್ವಾಧೀನಪಡಿಸುವರು. ಒಬ್ಬ ಪ್ರವಾದಿ ಬರುವರೆಂಬುದನ್ನು ನಾನು ಅರಿತುಕೊಂಡಿದ್ದೆ. ಆದರೆ ಅವರು ನಿಮ್ಮಲ್ಲಿ ಬರುವರೆಂದು ನಾನು ಭಾವಿಸಿರಲಿಲ್ಲ. ನನಗದು ಗೊತ್ತಿರುತ್ತಿದ್ದರೆ ನಾನು ಅವರ ಬಳಿಗೆ ಹೋಗಿ ಅವರನ್ನು ಭೇಟಿಯಾಗುತ್ತಿದ್ದೆ. ನಾನು ಅವರ ಬಳಿಯಿದ್ದರೆ ಅವರ ಪಾದವನ್ನು ತೊಳೆಯುತ್ತಿದ್ದೆ.

ನಂತರ ದಿಹ್ಯಾರವರ ಮೂಲಕ ಪ್ರವಾದಿ(ﷺ)ರವರು ಬುಸ್ರಾದ ರಾಜ್ಯಪಾಲರಿಗೆ ಕಳುಹಿಸಿದ ಪತ್ರವನ್ನು ಅವನು ತರಲು ಹೇಳಿದನು. ಆ ಪತ್ರವನ್ನು ಹಿರಕ್ಲ್‌ಗೆ ನೀಡಲಾಯಿತು. ಅವನು ಅದನ್ನು ಓದಿದನು. ಅದರಲ್ಲಿ ಹೀಗೆ ಬರೆಯಲಾಗಿತ್ತು:

ಪರಮ ದಯಾಳುವೂ ಕರುಣಾಮಯಿಯೂ ಆದ ಅಲ್ಲಾಹನ ನಾಮದಿಂದ

ಅಲ್ಲಾಹನ ದಾಸರೂ ಸಂದೇಶವಾಹಕರೂ ಆದ ಮುಹಮ್ಮದ್‌ರಿಂದ ರೋಮ್‌ನ ದೊರೆಯಾದ ಹಿರಕ್ಲ್‌ನಿಗೆ. ಮಾರ್ಗದರ್ಶನವನ್ನು ಹಿಂಬಾಲಿಸಿದವರ ಮೇಲೆ ಶಾಂತಿಯಿರಲಿ. ಮುಂದುವರಿದು ಹೇಳುವುದೇನೆಂದರೆ, ಇಸ್ಲಾಮ್‌ನ ದಅ್‌ವಾದೊಂದಿಗೆ ನಾವು ತಮಗೆ ದಅ್‌ವಾ ಮಾಡುತ್ತಿದ್ದೇನೆ. ತಾವು ಮುಸ್ಲಿಮರಾಗಿರಿ. ಹಾಗಾದರೆ ತಾವು ರಕ್ಷೆ ಹೊಂದುವಿರಿ. ತಾವು ಮುಸ್ಲಿಮರಾಗಿರಿ. ಹಾಗಾದರೆ

ಕಲ್ಪಿಸಿಕೊಳ್ಳುವರೇ? ಆ ಸಂದರ್ಭದಲ್ಲಿ ಪ್ರವಾದಿ(ﷺ)ರವರು ಅರೇಬಿಯಾ ದ್ವೀಪವನ್ನು ಕೂಡ ಶೈತಾನನ ದಾಸ್ಯತ್ವ ಮತ್ತು ದೇಹೇಚ್ಛೆಗಳಿಂದ ಮುಕ್ತಗೊಳಿಸಿರಲಿಲ್ಲ. ಇಂತಹ ಒಬ್ಬ ವ್ಯಕ್ತಿ ಇಂತಹ ಒಂದು ಮಾತನ್ನು ಹೇಳುವರೆಂದು ಯಾರಾದರೂ ಕಲ್ಪಿಸಿಕೊಳ್ಳುವರೇ? ಆದ್ದರಿಂದಲೇ ಅಬೂ ಸುಫ್ಯಾನ್ ಅಲ್ಲಿಂದ ಹೊರಟು ಬಂದಾಗ ತಮ್ಮ ಜನರೊಂದಿಗೆ ಹೇಳಿದರು:

لَقَدْ أَمِرَ أَمْرُ ابْنِ أَبِي كَبْشَةَ إِنَّهُ لَيَخَافُهُ مَلِكُ بَنِي الْأَصْفَرِ

**"ಇಬ್ನ್ ಅಬೀ ಕಬ್‌ಶಾ [ಪ್ರವಾದಿ(ﷺ)]ರವರ ವಿಷಯವು ಗಂಭೀರವಾಗಿದೆ. ಹಳದಿ ಸಂತತಿಗಳ [40] ದೊರೆ ಕೂಡ ಅವರನ್ನು ಭಯಪಡುತ್ತಿದ್ದಾನೆ."**

ಅಮಿರ ಎಂದರೆ ಗಂಭೀರವಾಯಿತು ಎಂದರ್ಥ. ಅಲ್ಲಾಹು [ತಆಲಾ] ಹೇಳುತ್ತಾನೆ:

﴿ لَقَدْ جِئْتَ شَيْـًٔا إِمْرًا ﴿٧١﴾ ﴾

**"ಖಂಡಿತವಾಗಿಯೂ ತಾವು ಗಂಭೀರವಾದುದನ್ನೇ ಮಾಡಿರುವಿರಿ."** [41]

ಇಮ್ರನ್ ಎಂದರೆ ಗಂಭೀರವಾದುದು ಎಂದರ್ಥ.

ಪ್ರವಾದಿ(ﷺ)ರವರು ಹಿರಕ್ಲ್‌ನ ಪಾದಗಳಡಿಯಲ್ಲಿರುವುದನ್ನು ತಮ್ಮ ದಅ್‌ವಾದ

---

ಅಲ್ಲಾಹು ತಮಗೆ ಪುಣ್ಯವನ್ನು ಇಮ್ಮಡಿಯಾಗಿ ನೀಡುವನು. ತಾವು ವಿಮುಖರಾಗುವುದಾದರೆ ತಮ್ಮ ಮೇಲೆ ಪ್ರಜೆಗಳ ಪಾಪವೂ ಇರುವುದು. ಓ ಗ್ರಂಥದವರೇ, ನಮ್ಮ ಮತ್ತು ನಿಮ್ಮ ನಡುವೆಯಿರುವ ಸಮಾನ ವಚನದೆಡೆಗೆ ಬನ್ನಿರಿ. ಅಂದರೆ ನಾವು ಅಲ್ಲಾಹನನ್ನು ಮಾತ್ರ ಆರಾಧಿಸಬೇಕು. ಅವನೊಂದಿಗೆ ಏನನ್ನೂ ಸಹಭಾಗಿಯನ್ನಾಗಿ ಮಾಡಬಾರದು. ನಮ್ಮ ಪೈಕಿ ಕೆಲವರು ಕೆಲವರನ್ನು ಅಲ್ಲಾಹನ ಹೊರತಾದ ರಬ್ಬ್‌ಗಳನ್ನಾಗಿ ಮಾಡಿಕೊಳ್ಳಬಾರದು. ಅವರೇನಾದರೂ ವಿಮುಖರಾಗುವುದಾದರೆ ತಾವು ಹೇಳಿರಿ. ನಾವು ಮುಸ್ಲಿಮರಾಗಿದ್ದೇವೆ ಎಂಬುದಕ್ಕೆ ನೀವು ಸಾಕ್ಷಿ ವಹಿಸಿರಿ.

ಅಬೂ ಸುಫ್ಯಾನ್ ಹೇಳಿದರು: ಹೀಗೆ ಅವನು (ಹಿರಕ್ಲ್) ಹೇಳುವುದೆಲ್ಲವನ್ನೂ ಹೇಳಿದಾಗ ಮತ್ತು ಪತ್ರವನ್ನು ಓದಿ ಮುಗಿಸಿದಾಗ ಅಲ್ಲಿ ದೊಡ್ಡ ಕೋಲಾಹಲವುಂಟಾಯಿತು. ಧ್ವನಿಗಳು ಏರತೊಡಗಿದವು. ನಮ್ಮನ್ನು ಹೊರ ಕಳುಹಿಸಲಾಯಿತು. ನಮ್ಮನ್ನು ಹೊರ ಕಳುಹಿಸಲಾದಾಗ ನನ್ನ ಜೊತೆಗಿದ್ದವರೊಂದಿಗೆ ನಾನು ಹೇಳಿದೆ: ಇಬ್ನ್ ಅಬೀ ಕಬ್‌ಶಾ [ಪ್ರವಾದಿ(ﷺ)] ರವರ ವಿಷಯವು ಗಂಭೀರವಾಗಿದೆ. ಹಳದಿ ಸಂತತಿಗಳ ದೊರೆ ಕೂಡ ಅವರನ್ನು ಭಯಪಡುತ್ತಿದ್ದಾನೆ. ಪ್ರವಾದಿ(ﷺ)ರವರು ಖಂಡಿತವಾಗಿಯೂ ವಿಜಯ ಗಳಿಸುವರೆಂದು ಆಗ ನನಗೆ ದೃಢನಂಬಿಕೆಯುಂಟಾಯಿತು. ಕೊನೆಗೆ ಅಲ್ಲಾಹು ನನ್ನನ್ನು ಇಸ್ಲಾಮಿಗೆ ಸೇರಿಸಿದನು. [ಸಹೀಹುಲ್ ಬುಖಾರಿ 1/16–17; ಹದೀಸ್ ನಂ. 6]

**40** ಅರೇಬಿಯಾದ ಜನರು ರೋಮನ್ನರನ್ನು ಬನುಲ್ ಅಸ್ಫರ್ (ಹಳದಿ ಸಂತತಿಗಳು) ಎಂದು ಕರೆಯುತ್ತಿದ್ದರು.

**41** **ಕುರ್‌ಆನ್** 18:71

ಮೂಲಕ ಸ್ವಾಧೀನಪಡಿಸಿದರೇ ಹೊರತು ವೈಯುಕ್ತಿಕವಾಗಿಯಲ್ಲ. ಯಾಕೆಂದರೆ ಅವರ ದಅ್‌ವಾ ಆ ಭೂಪ್ರದೇಶವನ್ನು ಪ್ರವೇಶಿಸಿ ಅಲ್ಲಿದ್ದ ವಿಗ್ರಹ, ಶಿರ್ಕ್ ಮತ್ತು ಅದರ ಜನರನ್ನು ನಿರ್ನಾಮ ಮಾಡಿತು. ಪ್ರವಾದಿ(ﷺ)ರವರ ಮರಣಾನಂತರ ಅಲ್‌ಖುಲಫಾಉ ರ್‍ರಾಶಿದೂನ್‌ಗಳು ಆ ಭೂಮಿಯನ್ನು ಸ್ವಾಧೀನಪಡಿಸಿದರು. ಅವರು ಅದನ್ನು ಸ್ವಾಧೀನಪಡಿಸಿದ್ದು ಪ್ರವಾದಿ(ﷺ)ರವರ ದಅ್‌ವಾದ ಮೂಲಕವಾಗಿತ್ತು. ಪ್ರವಾದಿ (ﷺ)ರವರ ಶರೀಅತ್ತಿನ ಮೂಲಕವಾಗಿತ್ತು. ಆದ್ದರಿಂದ ದಅ್‌ವಾ ಮಾಡುವವನು ತಾಳ್ಮೆ ವಹಿಸಬೇಕಾಗಿದೆ. ಅವನು ಅಲ್ಲಾಹನೊಂದಿಗೆ ಸತ್ಯಸಂಧತೆಯನ್ನು ಪಾಲಿಸಿದರೆ ಅದು ಅವನ ಬದುಕಿನ ಕಾಲದಲ್ಲಾಗಿರಲಿ ಅಥವಾ ಮರಣಾನಂತರವಾಗಿರಲಿ ಅಂತಿಮ ಫಲಿತಾಂಶವು ಅವನ ಪರವಾಗಿರುವುದು.

﴿وَٱصْبِرُوٓا۟ ۖ إِنَّ ٱلْأَرْضَ لِلَّهِ يُورِثُهَا مَن يَشَآءُ مِنْ عِبَادِهِۦ ۖ
وَٱلْعَٰقِبَةُ لِلْمُتَّقِينَ ﴿١٢٨﴾﴾

**“ತಾಳ್ಮೆ ವಹಿಸಿರಿ. ಖಂಡಿತವಾಗಿಯೂ ಭೂಮಿಯು ಅಲ್ಲಾಹುವಿನದ್ದಾಗಿದೆ. ಅವನ ದಾಸರ ಪೈಕಿ ಅವನು ಇಚ್ಛಿಸುವವರಿಗೆ ಅವನು ಅದನ್ನು ಉತ್ತರಾಧಿಕಾರವನ್ನಾಗಿ ನೀಡುವನು. ಅಂತಿಮ ಫಲಿತಾಂಶವಿರುವುದು ಮುತ್ತಕೀಗಳಿಗಾಗಿದೆ.”** (42)

﴿إِنَّهُۥ مَن يَتَّقِ وَيَصْبِرْ فَإِنَّ ٱللَّهَ لَا يُضِيعُ أَجْرَ ٱلْمُحْسِنِينَ ﴿٩٠﴾﴾

**“ಖಂಡಿತವಾಗಿಯೂ ಯಾರು ಭಯಭಕ್ತಿ ಪಾಲಿಸುವವರೋ ಮತ್ತು ತಾಳ್ಮೆ ವಹಿಸುವವರೋ, (ಅಂತಹ) ಸತ್ಕರ್ಮಿಗಳ ಪ್ರತಿಫಲವನ್ನು ಅಲ್ಲಾಹು ಖಂಡಿತವಾಗಿಯೂ ವ್ಯರ್ಥಗೊಳಿಸಲಾರನು.”** (43)

---

**42** ಕುರ್‌ಆನ್ 7:128

**43** ಕುರ್‌ಆನ್ 12:90

## الزاد الثالث: الحكمة فيدعو إلى الله بالحكمة

## ಮೂರನೆ ಪೂರ್ವಸಿದ್ಧತೆ: ಹಿಕ್ಮತ್, ಹಿಕ್ಮತ್‌ನೊಂದಿಗೆ ಅಲ್ಲಾಹನೆಡೆಗೆ ದಅ್‌ವಾ ಮಾಡಬೇಕಾಗಿದೆ

ಮೂರನೆ ಪೂರ್ವಸಿದ್ಧತೆಯು ಹಿಕ್ಮತ್ (ವಿವೇಕ) ಆಗಿದೆ. ಆದ್ದರಿಂದ ಹಿಕ್ಮತ್‌ನೊಂದಿಗೆ ಅಲ್ಲಾಹನೆಡೆಗೆ ದಅ್‌ವಾ ಮಾಡಬೇಕಾಗಿದೆ. ಹಿಕ್ಮತ್ ಇಲ್ಲದವನಿಗೆ ಹಿಕ್ಮತ್ತನ್ನು ಚಲಾವಣೆ ಮಾಡಲಾಗದು. ಅಲ್ಲಾಹನೆಡೆಗಿರುವ ದಅ್‌ವಾ ಹಿಕ್ಮತ್‌ನಿಂದ ಕೂಡಿರಬೇಕು. ತರುವಾಯ ಸುಂದರವಾದ ಉಪದೇಶದೊಂದಿಗೆ ಕೂಡಿರಬೇಕು. ತರುವಾಯ ದಅ್‌ವಾ ಮಾಡಲ್ಪಡುವವನು ಅನ್ಯಾಯಕಾರನಲ್ಲದಿದ್ದರೆ ಅವನೊಂದಿಗೆ ಅತ್ಯುತ್ತಮವಾದ ರೀತಿಯಲ್ಲಿ ತರ್ಕಿಸುವ ಮೂಲಕವಾಗಿರಬೇಕು. ತರುವಾಯ ದಅ್‌ವಾ ಮಾಡಲ್ಪಡುವವನು ಅನ್ಯಾಯಕಾರನಾಗಿದ್ದರೆ ಅವನೊಂದಿಗೆ ಅತ್ಯುತ್ತಮವಲ್ಲದ ರೀತಿಯಲ್ಲಿ ತರ್ಕಿಸುವ ಮೂಲಕವಾಗಿರಬೇಕು. ಆದ್ದರಿಂದ ಇಲ್ಲಿ ನಾಲ್ಕು ಹಂತಗಳಿವೆ. ಅಲ್ಲಾಹು [ತಆಲಾ] ಹೇಳುತ್ತಾನೆ:

﴿ ٱدۡعُ إِلَىٰ سَبِيلِ رَبِّكَ بِٱلۡحِكۡمَةِ وَٱلۡمَوۡعِظَةِ ٱلۡحَسَنَةِۖ وَجَٰدِلۡهُم بِٱلَّتِي هِيَ
أَحۡسَنُۚ إِنَّ رَبَّكَ هُوَ أَعۡلَمُ بِمَن ضَلَّ عَن سَبِيلِهِۦ وَهُوَ أَعۡلَمُ بِٱلۡمُهۡتَدِينَ ١٢٥ ﴾

**“ತಾವು ತಮ್ಮ ರಬ್ಬ್‌ನ ಮಾರ್ಗದೆಡೆಗೆ ಹಿಕ್ಮತ್‌ನೊಂದಿಗೆ ಮತ್ತು ಸುಂದರವಾದ ಉಪದೇಶದೊಂದಿಗೆ ದಅ್‌ವಾ ಮಾಡಿರಿ. ಮತ್ತು ಯಾವುದು ಅತ್ಯುತ್ತಮವಾಗಿದೆಯೋ ಅದರ ಮೂಲಕ ಅವರೊಂದಿಗೆ ತರ್ಕಿಸಿರಿ. ತನ್ನ ಮಾರ್ಗದಿಂದ ಪಥಭ್ರಷ್ಟರಾದವರ ಬಗ್ಗೆ ಖಂಡಿತವಾಗಿಯೂ ತಮ್ಮ ರಬ್ಬ್ ಚೆನ್ನಾಗಿ ಅರಿತಿರುವನು ಮತ್ತು ಸನ್ಮಾರ್ಗ ಪಡೆದವರ ಬಗ್ಗೆಯೂ ಅವನು ಚೆನ್ನಾಗಿ ಅರಿತಿರುವನು.”** (44)

ಅಲ್ಲಾಹು [ತಆಲಾ] ಹೇಳುತ್ತಾನೆ:

**44** ಕುರ್‌ಆನ್ 16:125

﴿ ۞ وَلَا تُجَٰدِلُوٓاْ أَهۡلَ ٱلۡكِتَٰبِ إِلَّا بِٱلَّتِي هِيَ أَحۡسَنُ إِلَّا ٱلَّذِينَ ظَلَمُواْ مِنۡهُمۡۖ وَقُولُوٓاْ ءَامَنَّا بِٱلَّذِيٓ أُنزِلَ إِلَيۡنَا وَأُنزِلَ إِلَيۡكُمۡ وَإِلَٰهُنَا وَإِلَٰهُكُمۡ وَٰحِدٞ وَنَحۡنُ لَهُۥ مُسۡلِمُونَ ٤٦ ﴾

**"ಗ್ರಂಥದವರೊಂದಿಗೆ ಅತ್ಯುತ್ತಮವಾದ ವಿಧದಲ್ಲೇ ಹೊರತು ತರ್ಕಿಸದಿರಿ; ಅವರ ಪೈಕಿ ಅನ್ಯಾಯವೆಸಗಿದವರ ಹೊರತು. (ಅವರೊಂದಿಗೆ) ಹೇಳಿರಿ: ನಮಗೆ ಅವತೀರ್ಣಗೊಂಡಿರುವುದರಲ್ಲಿ ಮತ್ತು ನಿಮಗೆ ಅವತೀರ್ಣಗೊಂಡಿರುವುದರಲ್ಲಿ ನಾವು ವಿಶ್ವಾಸವಿಟ್ಟಿರುವೆವು. ನಮ್ಮ ಆರಾಧ್ಯನು ಮತ್ತು ನಿಮ್ಮ ಆರಾಧ್ಯನು ಒಬ್ಬನೇ ಆಗಿರುವನು. ನಾವು ಅವನಿಗೆ ಶರಣಾಗತರಾಗಿರುವೆವು."** [45]

ಹಿಕ್ಮತ್ [46] ಎಂದರೆ ವಿಷಯಗಳನ್ನು ಅವುಗಳ ಸೂಕ್ತ ಸ್ಥಳಗಳಲ್ಲಿ ಇಳಿಸುವ

---

**45** **ಕುರ್‌ಆನ್** 29:46

**46** ಮುಹಮ್ಮದ್ ಇಬ್ನ್ ಅಬೀಬಕ್ರ್ ಅಯ್ಯೂಬ್ ಅಝ್ಝುರ‌ಈ ಹೇಳುತ್ತಾರೆ: ಕುರ್‌ಆನ್‌ನಲ್ಲಿ ಬಂದ ಹಿಕ್ಮತ್ ಎಂಬ ಪದವು ಎರಡು ರೀತಿಯಲ್ಲಿದೆ. ಒಂದು ಮುಫ್ರದ್ (ಏಕಪದ) ಇನ್ನೊಂದು ಮುಕ್ತರಿನುನ್ ಬಿಲ್ ಕಿತಾಬ್ (ಕಿತಾಬ್ ಎಂಬ ಪದದೊಂದಿಗೆ ಜೊತೆಗೂಡಿರುವುದು). ಕುರ್‌ಆನ್‌ನಲ್ಲಿ ಹಿಕ್ಮತ್ ಎಂಬ ಪದವು ಏಕಪದವಾಗಿ (ಮುಫ್ರದ್) ಆಗಿ ಬಂದರೆ ಅದಕ್ಕೆ ನುಬುವ್ವತ್ (ಪ್ರವಾದಿತ್ವ), ಇಲ್ಮುಲ್ ಕುರ್‌ಆನ್ (ಕುರ್‌ಆನ್‌ನ ಇಲ್ಮ್) ಮೊದಲಾದ ಅರ್ಥ ಬರುತ್ತದೆ.

ಇಬ್ನ್ ಅಬ್ಬಾಸ್(ﷺ)ರವರು ಹೇಳಿದರು: ಹಿಕ್ಮತ್ ಎಂದರೆ ಕುರ್‌ಆನ್‌ನ ಇಲ್ಮ್ ಆಗಿದೆ. ಅಂದರೆ ಕುರ್‌ಆನಿನ ನಾಸಿಖ್ (ರದ್ದುಗೊಳಿಸುವಂತದ್ದು) ಮತ್ತು ಮನ್ಸೂಖ್ (ರದ್ದುಗೊಳಿಸಲಾದದ್ದು), ಮುಹ್ಕಮ್ (ಸ್ಪಷ್ಟವಾಗಿ ಅರ್ಥವಾಗುವಂತದ್ದು) ಮತ್ತು ಮುತಶಾಬಿಹ್ (ಸ್ಪಷ್ಟವಾಗಿ ಅರ್ಥವಾಗದಂತದ್ದು), ಮುಕದ್ದಿಮ್ (ಮುಂದೂಡುವಂತದ್ದು) ಮತ್ತು ಮುಅಖ್ಖಿರ್ (ಹಿಂದೂಡುವಂತದ್ದು), ಹಲಾಲ್ (ಧರ್ಮ ಸಮ್ಮತವಾಗಿರುವಂತದ್ದು) ಮತ್ತು ಹರಾಮ್ (ನಿಷಿದ್ಧವಾಗಿರುವಂತದ್ದು) ಇತ್ಯಾದಿಗಳಾಗಿವೆ.

ಅದ್ದಹ್ಹಾಕ್ ಹೇಳಿದರು: ಹಿಕ್ಮತ್ ಎಂದರೆ ಕುರ್‌ಆನ್ ಮತ್ತು ಅದರಲ್ಲಿ ಚಿಂತಿಸಿ ಗ್ರಹಿಸುವಂತದ್ದಾಗಿದೆ.

ಮುಜಾಹಿದ್ ಹೇಳಿದರು: ಹಿಕ್ಮತ್ ಎಂದರೆ ಕುರ್‌ಆನ್, ಇಲ್ಮ್ ಮತ್ತು ಫಿಕ್‌ಹ್ ಆಗಿದೆ.

ಇನ್ನೊಂದು ವರದಿಯಲ್ಲಿರುವಂತೆ ಅವರು ಹೀಗೆನ್ನುತ್ತಾರೆ: ಹಿಕ್ಮತ್ ಎಂದರೆ ಮಾತು ಮತ್ತು ಕ್ರಿಯೆಯಲ್ಲಿ ಕರಾರುವಾಕ್ಕಾಗಿರುವುದಾಗಿದೆ.

ಇಬ್ರಾಹೀಮ್ ಅನ್ನಖಈ ಹೇಳಿದರು: ಹಿಕ್ಮತ್ ಎಂದರೆ ವಸ್ತುಗಳ ತಾತ್ಪರ್ಯ ಮತ್ತು ಅದರ ಗ್ರಹಿಕೆಯಾಗಿದೆ.

ಅಲ್‌ಹಸನ್ ಅಲ್‌ಬಸರೀ ಹೇಳಿದರು: ಹಿಕ್ಮತ್ ಎಂದರೆ ದೇವಭಕ್ತಿಯಾಗಿದೆ. ಬಹುಶಃ ಅವರು ಹಿಕ್ಮತ್ತಿನ ಫಲ ಮತ್ತು ಆವಶ್ಯಕತೆಯನ್ನು ಉದ್ದೇಶಿಸಿರಬಹುದು.

ಕುರ್‌ಆನಿನಲ್ಲಿ ಹಿಕ್ಮತ್ ಎಂಬ ಪದವು ಕಿತಾಬ್ ಎಂಬ ಪದದೊಂದಿಗೆ ಜೊತೆಗೂಡಿ ಬಂದರೆ ಅದರ ಅರ್ಥವು ಸುನ್ನತ್ ಎಂದಾಗಿದೆ. ಇಮಾಮ್ ಅಶ್ಶಾಫಿಈ ಮೊದಲಾದವರು ಹೀಗೆ ಹೇಳಿದ್ದಾರೆ. ಕೆಲವರು ಅದನ್ನು ವಹ್ಯ್‌ನ ಮೂಲಕ ನೀಡುವ ತೀರ್ಪು ಎಂದಿದ್ದಾರೆ. ಆದರೆ ಸುನ್ನತ್ ಎಂಬ ಅರ್ಥವು ಹೆಚ್ಚು ವ್ಯಾಪಕವೂ ಪ್ರಸಿದ್ಧವೂ ಆಗಿದೆ.

ಹಿಕ್ಮತ್ ಎಂಬ ಪದದ ಸುಂದರವಾದ ವ್ಯಾಖ್ಯಾನವು ಮುಜಾಹಿದ್ ಮತ್ತು ಇಮಾಮ್ ಮಾಲಿಕ್‌ರವರು ಹೇಳಿದ ವ್ಯಾಖ್ಯಾನವಾಗಿದೆ. ಅಂದರೆ ಅದು ಸತ್ಯವನ್ನು ಅರಿತುಕೊಳ್ಳುವುದು ಮತ್ತು ಅದರ ಪ್ರಕಾರ ಅಮಲ್ ಮಾಡುವುದು. ಮಾತು ಮತ್ತು ಕ್ರಿಯೆಯಲ್ಲಿ ಕರಾರುವಾಕ್ಕಾಗಿರುವುದು. ಆದರೆ

ಮೂಲಕ ಮತ್ತು ಅವುಗಳನ್ನು ಅವುಗಳ ಸೂಕ್ತ ಸ್ಥಾನದಲ್ಲಿ ಇಡುವ ಮೂಲಕ ಅವುಗಳನ್ನು ಕರಾರುವಾಕ್ಕುಗೊಳಿಸುವುದು ಮತ್ತು ಪ್ರಬಲಗೊಳಿಸುವುದು ಎಂದಾಗಿದೆ. ಆತುರಪಡುವುದು ಮತ್ತು ಜನರು ಸಂಜೆ ಮುಂಜಾನೆಯ ಮಧ್ಯೆ ಪ್ರವಾದಿ(ﷺ)ರವರ ಕಾಲದಲ್ಲಿ ಸಹಾಬಾಗಳಿದ್ದ ಸ್ಥಿತಿಗೆ ಬದಲಾಗಬೇಕೆಂದು ಬಯಸುವುದು ಹಿಕ್ಮತ್ ಅಲ್ಲ. ಯಾರಾದರೂ ಹಾಗೆ ಬಯಸುವುದಾದರೆ ಅವನು ಬುದ್ಧಿಶೂನ್ಯನಾಗಿದ್ದಾನೆ. ಹಿಕ್ಮತ್ ಇಲ್ಲದವನಾಗಿದ್ದಾನೆ. ಯಾಕೆಂದರೆ ಈ ರೀತಿ ಸಂಭವಿಸುವುದನ್ನು ಅಲ್ಲಾಹನ ಹಿಕ್ಮತ್ ನಿರಾಕರಿಸುತ್ತದೆ. ಇದಕ್ಕಿರುವ ಪುರಾವೆ ಮುಹಮ್ಮದ್(ﷺ)ರವರಾಗಿದ್ದಾರೆ. ಗ್ರಂಥವು ಅವತೀರ್ಣಗೊಂಡಿರುವುದು ಅವರಿಗಾಗಿದೆ. ಅವರ ಮೇಲೆ ಶರೀಅತ್ ಹಂತ ಹಂತವಾಗಿ ಅವತೀರ್ಣಗೊಂಡು ಕೊನೆಗೆ ಅದು ಜನರ ಮನಸ್ಸಿನಲ್ಲಿ ಬಲವಾಗಿ ಬೇರೂರಿ ಪರಿಪೂರ್ಣಗೊಂಡಿತ್ತು. ನಮಾಝ್ ಕಡ್ಡಾಯವಾದುದು ಮಿಅ್‌ರಾಜ್‌ನ ಸಂದರ್ಭದಲ್ಲಿ, ಅಂದರೆ ಹಿಜ್ರಾಗಿಂತ ಮೂರು ವರ್ಷ ಮುಂಚೆಯಾಗಿತ್ತು. ಒಂದೂವರೆ ವರ್ಷವೆಂದೂ ಹೇಳಲಾಗುತ್ತದೆ. ಐದು ವರ್ಷವೆಂದೂ ಹೇಳಲಾಗುತ್ತದೆ. ಈ ವಿಷಯದಲ್ಲಿ ವಿದ್ವಾಂಸರ ಮಧ್ಯೆ ಭಿನ್ನಾಭಿಪ್ರಾಯವಿದೆ. ಆದರೂ ಆಗ ಅದು ಇಂದಿರುವ ರೂಪದಲ್ಲಿ ಕಡ್ಡಾಯವಾಗಿರಲಿಲ್ಲ. ಮೊಟ್ಟಮೊದಲು ಕಡ್ಡಾಯವಾದುದು ದುಹ್ರ್‌ನ ಎರಡು ರಕ್‌ಅತ್, ಅಸ್ರ್‌ನ ಎರಡು ರಕ್‌ಅತ್ ಮತ್ತು ಫಜ್ರ್‌ನ ಎರಡು

---

ಇದು ಕುರ್‌ಆನನ್ನು ಚೆನ್ನಾಗಿ ಗ್ರಹಿಸುವ ಮೂಲಕ, ಇಸ್ಲಾಮಿನ ಶರೀಅತ್ತನ್ನು ಮತ್ತು ಈಮಾನಿನ ವಾಸ್ತವತೆಗಳನ್ನು ಚೆನ್ನಾಗಿ ಅಧ್ಯಯನ ಮಾಡುವ ಮೂಲಕವಲ್ಲದೆ ಉಂಟಾಗಲಾರದು.

ಹಿಕ್ಮತ್ ಎಂಬ ಪದವು ಎರಡು ವಿಧಗಳನ್ನು ಹೊಂದಿದೆ. ಒಂದು ಇಲ್ಮಿಯ್ಯಃ (ಇಲ್ಮ್‌ಗೆ ಸಂಬಂಧಿಸಿದ್ದು) ಇನ್ನೊಂದು ಅಮಲಿಯ್ಯಃ (ಕರ್ಮಕ್ಕೆ ಸಂಬಂಧಿಸಿದ್ದು). ಹಿಕ್ಮಃ ಇಲ್ಮಿಯ್ಯಃ ಎಂದರೆ ವಸ್ತುಗಳ ಆಂತರ್ಯಗಳನ್ನು ಪೂರ್ಣವಾಗಿ ಅರಿತುಕೊಳ್ಳುವುದು ಮತ್ತು ಸೃಷ್ಟಿ, ಆಜ್ಞೆ, ವಿಧಿ ಮತ್ತು ಶರೀಅತ್‌ಗೆ ಸಂಬಂಧಿಸಿ ಕಾರಣ ಮತ್ತು ಪರಿಣಾಮಗಳ ಮಧ್ಯೆಯಿರುವ ಸಂಬಂಧವನ್ನು ಅರಿತುಕೊಳ್ಳುವುದು.

ಹಿಕ್ಮಃ ಅಮಲಿಯ್ಯಃ ಎಂದರೆ ಅಲ್‌ಮನಾಝಿಲ್ ಎಂಬ ಗ್ರಂಥದ ಲೇಖಕರು ಹೇಳಿದಂತೆ, ಅದು ಒಂದು ವಸ್ತುವನ್ನು ಅದರ ಸೂಕ್ತ ಸ್ಥಾನದಲ್ಲಿಡುವುದಾಗಿದೆ. ಇದು ಮೂರು ಅಂತಸ್ತುಗಳನ್ನು ಹೊಂದಿದೆ.

ಮೊದಲನೆಯದು: ಪ್ರತಿಯೊಂದು ವಸ್ತುವಿಗೆ ಅದರ ಹಕ್ಕನ್ನು ನೀಡುವುದು. ಅದರಲ್ಲಿ ಮಿತಿಮೀರದಿರುವುದು. ಅದರಲ್ಲಿ ಆತುರಪಡದಿರುವುದು ಮತ್ತು ಅದರಲ್ಲಿ ತಡಮಾಡದಿರುವುದು. ಉದಾ: ಬಿತ್ತಿದ ಬೀಜಕ್ಕೆ ನೀರುಣಿಸುವಾಗ ಅದರ ಹಕ್ಕನ್ನು ಅದಕ್ಕೆ ನೀಡಬೇಕಾಗಿದೆ. ಅಂದರೆ ಅದಕ್ಕೆ ಬೇಕಾದಷ್ಟು ನೀರನ್ನು ಮಾತ್ರ ಉಣಿಸಬೇಕಾಗಿದೆ. ಅದಕ್ಕಿಂತ ಹೆಚ್ಚು ಉಣಿಸಿದರೆ ಕೃಷಿ ಹಾಳಾಗುವುದು. ಹಾಗೆಯೇ ಅದನ್ನು ಕೊಯ್ಯುವಾಗ ಅದರ ಸಮಯದಲ್ಲೇ ಕೊಯ್ಯಬೇಕಾಗಿದೆ. ಆತುರಪಡುವುದಾಗಲಿ ತಡಮಾಡುವುದಾಗಲಿ ಕೂಡದು. ಅದು ಹಿಕ್ಮತ್‌ಗೆ ವಿರುದ್ಧವಾಗಿದೆ. ಹಿಕ್ಮತ್ ಎಂದರೆ ಒಂದು ಕ್ರಿಯೆಯನ್ನು ಸೂಕ್ತವಾದ ವಿಧದಲ್ಲಿ ಮತ್ತು ಸೂಕ್ತವಾದ ಸಮಯದಲ್ಲಿ ಮಾಡುವುದಾಗಿದೆ.

ಎರಡನೆಯದು: ಅಲ್ಲಾಹನ ವಾಗ್ದಾನದಲ್ಲಿ ಅವನ ವೀಕ್ಷಣೆಯನ್ನು ಪೂರ್ಣವಾಗಿ ಅರಿತುಕೊಳ್ಳುವುದು, ಅವನ ತೀರ್ಪಿನಲ್ಲಿ ಅವನ ನ್ಯಾಯನಿಷ್ಠತೆಯನ್ನು ಅರಿತುಕೊಳ್ಳುವುದು ಮತ್ತು ಅವನು ತಡೆದಿರಿಸಿರುವುದರಲ್ಲಿ (ಅಂದರೆ ಸೃಷ್ಟಿಗಳಿಗೆ ದಯಪಾಲಿಸದಿರುವುದರಲ್ಲಿ) ಅವನ ಕೃಪೆಯನ್ನು ಅರಿತುಕೊಳ್ಳುವುದು.

ಮೂರನೆಯದು: ಒಂದು ವಿಷಯದ ಬಗ್ಗೆ ಒಂದು ನಿಗಮನಕ್ಕೆ ಅಥವಾ ಸಮಾಪ್ತಿಗೆ ಬರುವಾಗ ಅದರಲ್ಲಿ ಇಲ್ಮ್‌ನ ಅತ್ಯುನ್ನತ ಮಟ್ಟವನ್ನು ಅಂದರೆ ದೃಢಜ್ಞಾನವನ್ನು ತಲುಪುವುದು ಮತ್ತು ಯಾರಿಗಾದರೂ ಮಾರ್ಗದರ್ಶನ ಮಾಡುವಾಗ ಅದರಲ್ಲಿ ನಿಜಸ್ಥಿತಿಯೆಡೆಗೆ ತಲುಪುವುದು ಅಂದರೆ ವಾಸ್ತವ ಸಂಗತಿಯೆಡೆಗೆ ಅವನಿಗೆ ಮಾರ್ಗದರ್ಶನ ಮಾಡುವುದು. [ಮದಾರಿಜು ಸ್ಸಾಲಿಕೀನ್ 2/478–482]

ರಕ್‌ಅತ್ ಮತ್ತು ಇಶಾದ ಎರಡು ರಕ್‌ಅತ್ ಆಗಿತ್ತು. ಮಗ್ರಿಬ್ ನಮಾಝ್ ಮೂರು ರಕ್‌ಅತ್ ಆಗಿತ್ತು. ಅದು ಹಗಲಿನ ವಿತ್ರ್ (ಬೆಸ ಸಂಖ್ಯೆಯ ನಮಾಝ್) ಆಗಿತ್ತು. ಹಿಜ್ರಾದ ಬಳಿಕ, ಅಂದರೆ ಪ್ರವಾದಿ(ﷺ)ರವರು ಮಕ್ಕಾದಲ್ಲಿ ಹದಿಮೂರು ವರ್ಷ ಕಳೆದ ಬಳಿಕ, ವಾಸಸ್ಥಳದಲ್ಲಿ (ಅಂದರೆ ಯಾತ್ರಿಕನಲ್ಲದವನು) ಮಾಡುವ ನಮಾಝ್‌ಗಳ ರಕ್‌ಅತ್‌ಗಳನ್ನು ಹೆಚ್ಚಿಸಲಾಯಿತು. ಹೀಗೆ ದುಹ್ರ್, ಅಸ್ರ್ ಮತ್ತು ಇಶಾ ನಮಾಝ್‌ಗಳು ನಾಲ್ಕು ರಕ್‌ಅತ್‌ಗಳಾದವು. (47) ಫಜ್ರ್ ನಮಾಝ್ ಹೇಗಿತ್ತೋ ಹಾಗೆಯೇ (ಎರಡು ರಕ್‌ಅತ್‌ಗಳಾಗಿ) ನೆಲೆನಿಂತಿತು. ಯಾಕೆಂದರೆ ಅದರಲ್ಲಿ ಕುರ್‌ಆನ್ ಪಾರಾಯಣವನ್ನು ದೀರ್ಘಗೊಳಿಸಲಾಗುತ್ತದೆ. ಮಗ್ರಿಬ್ ಮೂರು ರಕ್‌ಅತ್ ಆಗಿಯೇ ಉಳಿಯಿತು. ಯಾಕೆಂದರೆ ಅದು ಹಗಲಿನ ವಿತ್ರ್ ಆಗಿದೆ.

ಝಕಾತ್ ಕಡ್ಡಾಯವಾದುದು ಹಿಜ್ರಾ ಎರಡನೆ ವರ್ಷದಲ್ಲಾಗಿತ್ತು. ಅಥವಾ ಅದು ಮಕ್ಕಾದಲ್ಲೇ ಕಡ್ಡಾಯವಾಗಿತ್ತು. ಆದರೆ ಅದರ ನಿಸಾಬ್ ಮತ್ತು ಕಡ್ಡಾಯತೆಗಳನ್ನು ಆಗ ನಿರ್ಣಯಿಸಲಾಗಿರಲಿಲ್ಲ. ಹಿಜ್ರಾ ಒಂಬತ್ತನೆ ವರ್ಷಕ್ಕೆ ಮುಂಚೆ ಪ್ರವಾದಿ(ﷺ) ರವರು ಝಕಾತನ್ನು ಸಂಗ್ರಹಿಸುವುದಕ್ಕಾಗಿ ಜನರನ್ನು ಕಳುಹಿಸಿರಲಿಲ್ಲ. ಆದ್ದರಿಂದ ಝಕಾತ್‌ನ ಬೆಳವಣಿಗೆಯು ಮೂರು ಹಂತಗಳಲ್ಲಾಗಿತ್ತು. ಒಂದು: ಮಕ್ಕಾದಲ್ಲಿ ಅದನ್ನು ಆದೇಶಿಸಲಾಯಿತು. ಆದರೆ ಕಡ್ಡಾಯತೆಯನ್ನು ಸ್ಪಷ್ಟಪಡಿಸಲಾಗಿರಲಿಲ್ಲ. ಯಾವುದಕ್ಕೆ ಎಷ್ಟು ಝಕಾತ್ ಕೊಡಬೇಕು ಎಂಬುದನ್ನು ನಿರ್ಣಯಿಸಲಾಗಿರಲಿಲ್ಲ. ಅದನ್ನು ಜನರಿಗೇ ವಹಿಸಿಕೊಡಲಾಯಿತು. ಎರಡು: ಹಿಜ್ರಾ ಎರಡನೆ ವರ್ಷದಲ್ಲಿ ಝಕಾತನ್ನು ಅದರ ನಿಸಾಬ್‌ನೊಂದಿಗೆ ವಿವರಿಸಲಾಯಿತು. ಮೂರು: ಹಿಜ್ರಾ ಒಂಬತ್ತನೆ ವರ್ಷದಲ್ಲಿ ಪ್ರವಾದಿ (ﷺ)ರವರು ಜಾನುವಾರುಗಳು, ಫಲಕೃಷಿಗಳು ಇತ್ಯಾದಿಗಳನ್ನು ಹೊಂದಿದವರಿಂದ ಝಕಾತನ್ನು ಪಡೆಯಲು ಜನರನ್ನು ಕಳುಹಿಸತೊಡಗಿದರು.

ಆದ್ದರಿಂದ ಅಲ್ಲಾಹು [ಅಝ್ಝ ವಜಲ್ಲ್] ಅವನ ಶರೀಅತ್ತನ್ನು ಜಾರಿಗೊಳಿಸುವಾಗ ಜನರ ಸ್ಥಿತಿಗತಿಗಳನ್ನು ಪರಿಗಣಿಸಿರುವುದರ ಬಗ್ಗೆ ಆಲೋಚಿಸಿರಿ. ಅಲ್ಲಾಹು ತೀರ್ಪುಗಾರರಲ್ಲೇ ಅತಿದೊಡ್ಡ ತೀರ್ಪುಗಾರನಾಗಿದ್ದಾನೆ. ಅದೇ ರೀತಿ ಉಪವಾಸವನ್ನು ಕೂಡ ಹಂತ ಹಂತವಾಗಿ ಶರೀಅತ್‌ನಲ್ಲಿ ಜಾರಿಗೊಳಿಸಲಾಯಿತು. ಮೊಟ್ಟಮೊದಲು ಅದನ್ನು ಜನರ ಆಯ್ಕೆಗೆ ಬಿಡಲಾಯಿತು. ಉಪವಾಸ ಆಚರಿಸಲು ಇಚ್ಛಿಸುವವರು ಆಚರಿಸುತ್ತಿದ್ದರು ಮತ್ತು ಉಪವಾಸ ಆಚರಿಸಲು ಇಚ್ಛಿಸದವರು ಅದರ ಬದಲಿಗೆ ಬಡವರಿಗೆ ಆಹಾರ ನೀಡುತ್ತಿದ್ದರು. ತರುವಾಯ ಉಪವಾಸವನ್ನು ನಿರ್ಣಯಿಸಲಾಯಿತು.

**47** ಉಮ್ಮುಲ್ ಮುಅ್‌ಮಿನೀನ್ ಆಇಶಾ(رضي الله عنها)ರಿಂದ ವರದಿ: ಅಲ್ಲಾಹು ನಮಾಝನ್ನು ಕಡ್ಡಾಯಗೊಳಿಸಿದಾಗ ವಾಸಸ್ಥಳದಲ್ಲೂ ಯಾತ್ರೆಯಲ್ಲೂ ನಮಾಝ್ ಎರಡೆರಡು ರಕ್‌ಅತ್‌ಗಳಾಗಿದ್ದವು. ತರುವಾಯ ಯಾತ್ರೆಯ ನಮಾಝನ್ನು (ಅದರ ರಕ್‌ಅತ್‌ಗಳನ್ನು) ಹಾಗೆಯೇ ಉಳಿಸಲಾಯಿತು ಮತ್ತು ವಾಸಸ್ಥಳದಲ್ಲಿರುವ ನಮಾಝನ್ನು (ಅದರ ರಕ್‌ಅತ್‌ಗಳನ್ನು) ಹೆಚ್ಚಿಸಲಾಯಿತು. [ಸಹೀಹುಲ್ ಬುಖಾರಿ 1/133; ಹದೀಸ್ ನಂ. 350; ಸಹೀಹ್ ಮುಸ್ಲಿಮ್ 1/478; ಹದೀಸ್ ನಂ. 685]

ಆದರೆ ನಿರಂತರವಾಗಿ ಉಪವಾಸ ಆಚರಿಸಲು ಸಾಧ್ಯವಾಗದವರು ಬಡವರಿಗೆ ಅನ್ನದಾನ ಮಾಡಲು ಆದೇಶಿಸಲಾಯಿತು.

ಒಟ್ಟಿನಲ್ಲಿ ನಾನು ಹೇಳುವುದೇನೆಂದರೆ ಸಂಜೆ ಮತ್ತು ಮುಂಜಾನೆಗಳ ಮಧ್ಯೆ ಜಗತ್ತು ಬದಲಾಗಬೇಕೆಂದು ಬಯಸುವುದನ್ನು ಹಿಕ್ಮತ್ ನಿರಾಕರಿಸುತ್ತದೆ ಎಂಬುದನ್ನಾಗಿದೆ. ಅದಕ್ಕೆ ಸುದೀರ್ಘವಾದ ತಾಳ್ಮೆಯು ಅನಿವಾರ್ಯವಾಗಿದೆ. ಇಂದು ನೀನು ದಅ್‌ವಾ ಮಾಡಬೇಕೆಂದು ಬಯಸುವ ನಿನ್ನ ಸಹೋದರನಿಂದ ಕೆಲವು ಸತ್ಯಗಳನ್ನು ಸ್ವೀಕರಿಸು. ತರುವಾಯ ಅವನಲ್ಲಿರುವ ಅಸತ್ಯಗಳು ಸ್ವಲ್ಪ ಸ್ವಲ್ಪವಾಗಿ ದೂರವಾಗುವ ರೀತಿಯಲ್ಲಿ ಹಂತ ಹಂತವಾಗಿ ಅವನಿಗೆ ವಿವರಿಸಿಕೊಡು. ಆದರೆ ಎಲ್ಲ ಜನರೂ ಒಂದೇ ರೀತಿಯಲ್ಲಿರಲಾರರು. ಅವರಲ್ಲಿ ಅಜ್ಞಾನಿಗಳು ಮತ್ತು ಹಠಮಾರಿಗಳ ಮಧ್ಯೆಯಿರುವ ವ್ಯತ್ಯಾಸವನ್ನು ನೀನು ಅರಿತಿರಬೇಕಾಗಿದೆ.

ಬಹುಶಃ ಈ ಸಂದರ್ಭದಲ್ಲಿ ಪ್ರವಾದಿ(ﷺ)ರವರ ದಅ್‌ವಾದ ಕೆಲವು ಉದಾಹರಣೆಗಳನ್ನು ನಾನು ವಿವರಿಸಲು ಬಯಸುತ್ತೇನೆ.

ಮೊದಲನೆ ಉದಾಹರಣೆ: ಪ್ರವಾದಿ(ﷺ)ರವರು ಮತ್ತು ಅವರ ಸಹಾಬಾಗಳು ಮಸೀದಿಯಲ್ಲಿ ಕುಳಿತಿರುವಾಗ ಒಬ್ಬ ಗ್ರಾಮೀಣ ಅರಬಿ ಅಲ್ಲಿಗೆ ಬಂದರು. ನಂತರ ಆತ ಮಸೀದಿಯ ಒಂದು ಪಾರ್ಶ್ವದಲ್ಲಿ ಮೂತ್ರ ವಿಸರ್ಜನೆ ಮಾಡಿದರು. ಆಗ ಜನರು (ಸಹಾಬಾಗಳು) ಆ ವ್ಯಕ್ತಿಯನ್ನು ತೀಕ್ಷ್ಣವಾಗಿ ಗದರಿಸಿದರು. ಆದರೆ ಪ್ರವಾದಿ(ﷺ) ರವರು –ಅಲ್ಲಾಹು ಹಿಕ್ಮತ್ ನೀಡಿದ್ದು ಅವರಿಗಾಗಿದೆ– ಸಹಾಬಾಗಳನ್ನು ತಡೆದರು. ಆತ ಮೂತ್ರ ವಿಸರ್ಜನೆ ಮಾಡಿ ಮುಗಿಸಿದ ಬಳಿಕ ಪ್ರವಾದಿ(ﷺ)ರವರು ಒಂದು ತೊಟ್ಟಿ ನೀರನ್ನು ತರಿಸಿ ಅದರ ಮೇಲೆ ಸುರಿಯಲು (ಸಹಾಬಾಗಳೊಂದಿಗೆ) ಹೇಳಿದರು. ಹೀಗೆ ಆ ಮಾಲಿನ್ಯವು ನಿವಾರಣೆಯಾದ ಬಳಿಕ ಪ್ರವಾದಿ(ﷺ)ರವರು ಆ ಗ್ರಾಮೀಣ ಅರಬಿಯನ್ನು ಬಳಿಗೆ ಕರೆದು ಅವರೊಂದಿಗೆ ಹೇಳಿದರು:

«إِنَّ هَذِهِ الْمَسَاجِدَ لَا يَصْلُحُ فِيهَا شَيْءٌ مِنَ الْأَذَى أَوِ الْقَذَرِ، إِنَّمَا هِيَ لِلصَّلَاةِ وَقِرَاءَةِ الْقُرْآنِ»

**“ಖಂಡಿತವಾಗಿಯೂ ಈ ಮಸೀದಿಗಳು ಅದರಲ್ಲಿ ಮಾಲಿನ್ಯ ಅಥವಾ ಹೊಲಸು ಮಾಡುವುದಕ್ಕಿರುವುದಲ್ಲ. ಅವುಗಳಿರುವುದು ನಮಾಝ್‌ಗಾಗಿ ಮತ್ತು ಕುರ್‌ಆನ್ ಪಾರಾಯಣಕ್ಕಾಗಿ ಮಾತ್ರವಾಗಿದೆ.”** (48)

---

**48** ಅನಸ್ ಇಬ್ನ್ ಮಾಲಿಕ್(رضي الله عنه)ರಿಂದ ವರದಿ: ಅವರು ಹೇಳಿದರು: ನಾವು ಪ್ರವಾದಿ(ﷺ) ರವರೊಂದಿಗೆ ಮಸೀದಿಯಲ್ಲಿದ್ದಾಗ ಒಬ್ಬ ಗ್ರಾಮೀಣ ಅರಬಿ ಬಂದರು. ನಂತರ ಎದ್ದು ನಿಂತು ಮಸೀದಿಯಲ್ಲಿ ಮೂತ್ರ ವಿಸರ್ಜನೆ ಮಾಡಿದರು. ಆಗ ಸಹಾಬಾಗಳು ನಿಲ್ಲಿಸು ನಿಲ್ಲಿಸು ಎಂದರು.

ಅಥವಾ ಪ್ರವಾದಿ(ﷺ)ರವರು ಹೇಳಿದಂತೆ. ಈ ಸುಂದರವಾದ ವರ್ತನೆಯನ್ನು ಕಂಡಾಗ ಆ ಗ್ರಾಮೀಣ ಅರಬಿಯ ಹೃದಯವು ತೆರೆದುಕೊಂಡಿತು. ಆದ್ದರಿಂದಲೇ ಆತ ಹೀಗೆ ಹೇಳಿದ್ದಾಗಿ ಕೆಲವು ವಿದ್ವಾಂಸರು ಉದ್ಧರಿಸಿದ್ದಾರೆ:

اللَّهُمَّ ارْحَمْنِي وَمُحَمَّدًا وَلَا تَرْحَمْ مَعَنَا أَحَدًا

**"ಓ ಅಲ್ಲಾಹ್! ನನ್ನ ಮೇಲೆ ಮತ್ತು ಮುಹಮ್ಮದ್(ﷺ)ರ ಮೇಲೆ ಕರುಣೆ ತೋರು. ನಮ್ಮ ಜೊತೆಗೆ ಇತರ ಯಾರ ಮೇಲೂ ಕರುಣೆ ತೋರದಿರು."** [49]

ಯಾಕೆಂದರೆ ಮುಹಮ್ಮದ್(ﷺ)ರವರು ಆ ಗ್ರಾಮೀಣ ವ್ಯಕ್ತಿಯೊಂದಿಗೆ ಅತ್ಯುತ್ತಮವಾದ ವರ್ತನೆಯೊಂದಿಗೆ ವರ್ತಿಸಿದ್ದರು. ಆದರೆ ಸಹಾಬಾಗಳು ಈ ಅಜ್ಞಾನಿ ವ್ಯಕ್ತಿಯ ಸ್ಥಿತಿಯನ್ನು ಪರಿಗಣಿಸುವುದರ ಬದಲು ಮಾಲಿನ್ಯವನ್ನು ನಿವಾರಿಸುವುದಕ್ಕಾಗಿಯೇ ಆತುರಪಟ್ಟರು.

ಎರಡನೆ ಉದಾಹರಣೆ: ಪ್ರವಾದಿ(ﷺ)ರವರು ಜನರೊಂದಿಗೆ ನಮಾಝ್ ಮಾಡುತ್ತಿರುವಾಗ ಒಬ್ಬ ವ್ಯಕ್ತಿ ಸೀನಿದರು. ತರುವಾಯ ಅಲ್‌ಹಮ್ದುಲಿಲ್ಲಾಹ್ ಎಂದರು. ನಮಾಝ್ ಮಾಡುವಾಗ ಸೀನಿದರೆ ಅಲ್‌ಹಮ್ದುಲಿಲ್ಲಾಹ್ ಎಂದು ಹೇಳಬೇಕಾಗಿದೆ. ಅದು ಕಿಯಾಮ್‌ನಲ್ಲಾಗಿದ್ದರೂ, ರುಕೂಅ್‌ನಲ್ಲಾಗಿದ್ದರೂ ಅಥವಾ ಸುಜೂದ್‌ನಲ್ಲಾಗಿದ್ದರೂ ಸರಿ. ಆ ವ್ಯಕ್ತಿ ಅಲ್‌ಹಮ್ದುಲಿಲ್ಲಾಹ್ ಎಂದು ಹೇಳಿದರು. ಆಗ ಮುಆವಿಯಾ ಇಬ್ನುಲ್ ಹಕಮ್(رضي الله عنه)ರವರು ಯರ್ಹಮುಕಲ್ಲಾಹ್ ಎಂದು ಹೇಳಿದರು.

---

ಆಗ ಪ್ರವಾದಿ(ﷺ)ರವರು ಹೇಳಿದರು: **ಅವರನ್ನು ಗದರಿಸಬೇಡಿ. ಅವರನ್ನು ಬಿಟ್ಟುಬಿಡಿ.** ಸಹಾಬಾಗಳು ಅವರನ್ನು ಬಿಟ್ಟರು. ಆತ ಮೂತ್ರ ವಿಸರ್ಜನೆ ಮಾಡಿ ಮುಗಿಸಿದರು. ತರುವಾಯ ಪ್ರವಾದಿ(ﷺ)ರವರು ಅವರನ್ನು ಕರೆದು ಅವರೊಂದಿಗೆ ಹೇಳಿದರು: **ಖಂಡಿತವಾಗಿಯೂ ಈ ಮಸೀದಿಗಳು ಅದರಲ್ಲಿ ಮೂತ್ರ ಅಥವಾ ಹೊಲಸು ಮಾಡುವುದಕ್ಕಿರುವುದಲ್ಲ. ಅವುಗಳಿರುವುದು ಅಲ್ಲಾಹು [ಅಝ್ಝ ವಜಲ್ಲ್] ನನ್ನು ಸ್ಮರಿಸುವುದಕ್ಕೆ, ನಮಾಝ್ ಮಾಡುವುದಕ್ಕೆ ಮತ್ತು ಕುರ್‌ಆನ್ ಪಾರಾಯಣ ಮಾಡುವುದಕ್ಕೆ ಮಾತ್ರವಾಗಿದೆ.** ಅಥವಾ ಪ್ರವಾದಿ(ﷺ)ರವರು ಹೇಳಿದಂತೆ. ತರುವಾಯ ಪ್ರವಾದಿ(ﷺ)ರವರು ತಮ್ಮ ಸಹಾಬಾಗಳಲ್ಲಿ ಒಬ್ಬರನ್ನು ಕರೆದು, ಒಂದು ತೊಟ್ಟಿ ನೀರನ್ನು ತರಿಸಿ ಅದರ ಮೇಲೆ ಸುರಿದರು. [ಸಹೀಹ್ ಮುಸ್ಲಿಮ್ 1/237; ಹದೀಸ್ ನಂ. 285]

**49** ಅಬೂ ಹುರೈರಾ(رضي الله عنه)ರಿಂದ ವರದಿ: ಅವರು ಹೇಳಿದರು: ಪ್ರವಾದಿ(ﷺ)ರವರು ನಮಾಝ್ ಮಾಡುವುದಕ್ಕಾಗಿ ಎದ್ದು ನಿಂತರು. ನಾವೂ ಅವರೊಂದಿಗೆ ನಿಂತೆವು. ನಮಾಝ್ ಮಾಡುತ್ತಿರುವಾಗ ಗ್ರಾಮೀಣ ಅರಬಿ ಹೇಳಿದನು: ಓ ಅಲ್ಲಾಹ್! ನನ್ನ ಮೇಲೆ ಮತ್ತು ಮುಹಮ್ಮದ್(ﷺ)ರವರ ಮೇಲೆ ಕರುಣೆ ತೋರು. ನಮ್ಮ ಜೊತೆಗೆ ಇತರ ಯಾರ ಮೇಲೂ ಕರುಣೆ ತೋರದಿರು. ಸಲಾಮ್ ಹೇಳಿ (ನಮಾಝ್ ಮುಗಿಸಿ)ದ ಬಳಿಕ ಪ್ರವಾದಿ(ﷺ)ರವರು ಆ ಗ್ರಾಮೀಣ ಅರಬಿಯೊಂದಿಗೆ ಹೇಳಿದರು: **ಬಹಳ ವಿಸ್ತಾರವಾದುದನ್ನು –ಅಂದರೆ ಅಲ್ಲಾಹನ ಕರುಣೆಯನ್ನು– ತಾವು ಪರಿಮಿತಗೊಳಿಸಿಬಿಟ್ಟಿರಿ.** [ಸಹೀಹುಲ್ ಬುಖಾರಿ 4/93; ಹದೀಸ್ ನಂ. 6010]

ಇದು ಮನುಷ್ಯರೊಂದಿಗಿರುವ ಸಂಭಾಷಣೆಯಾಗಿರುವುದರಿಂದ ಇದನ್ನು ಹೇಳಿದರೆ ನಮಾಝ್ ಬಾತಿಲ್ ಆಗುತ್ತದೆ. ಆದ್ದರಿಂದ ಜನರು ಮುಆವಿಯಾ(ﷺ)ರವರು ದಿಟ್ಟಿಸಿ ನೋಡತೊಡಗಿದರು. ಮುಆವಿಯಾ(ﷺ) ಹೇಳಿದರು: ವಾಸುಕ್ಲ ಉಮ್ಮಿಯಾಹ್ –ಇದರ ಅರ್ಥ ನನ್ನ ತಾಯಿ ನನ್ನನ್ನು ಕಳೆದುಕೊಳ್ಳಲಿ ಎಂದಾಗಿದೆ. ಇಂತಹ ಮಾತನ್ನು ಹೇಳಲಾಗುತ್ತದೆ. ಆದರೆ ಅದರ ಅರ್ಥವನ್ನು ಉದ್ದೇಶಿಸಲಾಗುವುದಿಲ್ಲ. ಈ ಮಾತನ್ನು ಪ್ರವಾದಿ(ﷺ)ರವರು ಮುಆದ್ ಇಬ್ನ್ ಜಬಲ್(ﷺ)ರಿಗೆ ಹೇಳಿದ್ದರು. ಪ್ರವಾದಿ(ﷺ)ರವರು ಕೇಳಿದರು: ಇವೆಲ್ಲವನ್ನೂ ಸ್ವಾಧೀನದಲ್ಲಿಟ್ಟುಕೊಂಡಿರುವ ಒಂದನ್ನು ನಾನು ತಮಗೆ ತಿಳಿಸಿಕೊಡಲೇ? ಮುಆದ್(ﷺ)ರವರು ಹೇಳಿದರು: ಓ ಅಲ್ಲಾಹನ ಸಂದೇಶವಾಹಕರೇ, ತಿಳಿಸಿಕೊಡಿರಿ. ಪ್ರವಾದಿ(ﷺ)ರವರು ತಮ್ಮ ನಾಲಗೆಯನ್ನು ಹಿಡಿದು ಹೇಳಿದರು: ಇದನ್ನು ನಿಯಂತ್ರಿಸಿರಿ. ಆಗ ಮುಆದ್(ﷺ)ರವರು ಕೇಳಿದರು: ನಾವು ಏನನ್ನು ಮಾತನಾಡುತ್ತೇವೋ ಅದರಿಂದಾಗಿ ನಮ್ಮನ್ನು ಶಿಕ್ಷಿಸಲಾಗುವುದೇ? ಪ್ರವಾದಿ(ﷺ)ರವರು ಹೇಳಿದರು:

«ثَكِلَتْكَ أُمُّكَ يَا مُعَاذُ وَهَلْ يَكُبُّ النَّاسَ فِي النَّارِ عَلَى وُجُوهِهِمْ أَوْ عَلَى مَنَاخِرِهِمْ إِلَّا حَصَائِدُ أَلْسِنَتِهِمْ»

**"ಓ ಮುಆದ್, ತಮ್ಮ ತಾಯಿ ತಮ್ಮನ್ನು ಕಳೆದುಕೊಳ್ಳಲಿ. ಜನರನ್ನು ಅವರ ಮುಖಗಳ ಮೇಲೆ ಅಥವಾ ಅವರ ಮೂಗುಗಳ ಮೇಲೆ ನರಕಾಗ್ನಿಯಲ್ಲಿ ತಲೆಕೆಳಗಾಗಿ ಹಾಕುವುದು ಅವರ ನಾಲಗೆಗಳ ಉತ್ಪತ್ತಿಗಳೇ ಹೊರತು ಇನ್ನಾವುದಾದರೂ ಆಗಿದೆಯೇ?"** (50)

---

**50** ಮುಆದ್ ಇಬ್ನ್ ಜಬಲ್(ﷺ)ರಿಂದ ವರದಿ: ಅವರು ಹೇಳಿದರು: ಒಂದು ಯಾತ್ರೆಯಲ್ಲಿ ನಾನು ಪ್ರವಾದಿ(ﷺ)ರವರ ಜೊತೆಗಿದ್ದೆ. ಒಂದಿನ ಬೆಳಿಗ್ಗೆ ನಾವು ಸಂಚರಿಸುತ್ತಿರುವಾಗ ನಾನು ಅವರ ಸಮೀಪದಲ್ಲೇ ಇದ್ದೆ. ನಾನು ಕೇಳಿದೆ: ಓ ಅಲ್ಲಾಹನ ಸಂದೇಶವಾಹಕರೇ, ನನ್ನನ್ನು ಸ್ವರ್ಗಕ್ಕೆ ಪ್ರವೇಶ ಮಾಡಿಸುವ ಮತ್ತು ನರಕಾಗ್ನಿಯಿಂದ ದೂರ ಮಾಡುವ ಒಂದು ಕರ್ಮವನ್ನು ನನಗೆ ತಿಳಿಸಿಕೊಡಿ. ಅವರು ಹೇಳಿದರು: **ತಾವು ನನ್ನೊಂದಿಗೆ ಮಹಾ ವಿಷಯವೊಂದನ್ನೇ ಕೇಳಿರುವಿರಿ. ಅಲ್ಲಾಹು ಯಾರಿಗೆ ಅದನ್ನು ಸರಳೀಕರಿಸುತ್ತಾನೋ ಅವನಿಗೆ ಅದು ಸರಳವಾಗಿದೆ. ತಾವು ಅಲ್ಲಾಹನನ್ನು ಮಾತ್ರ ಆರಾಧಿಸಿರಿ. ಅವನೊಂದಿಗೆ ಏನನ್ನೂ ಸಹಭಾಗಿಯನ್ನಾಗಿ ಮಾಡದಿರಿ. ನಮಾಝನ್ನು ಸಂಸ್ಥಾಪಿಸಿರಿ. ಝಕಾತ್ ನೀಡಿರಿ. ರಮದಾನ್‌ನಲ್ಲಿ ಉಪವಾಸ ಆಚರಿಸಿರಿ. ಕಅ್‌ಬಾಲಯಕ್ಕೆ ಹಜ್ಜ್ ನಿರ್ವಹಿಸಿರಿ.** ನಂತರ ಅವರು ಹೇಳಿದರು: **ಒಳಿತಿನ ಬಾಗಿಲುಗಳ ಬಗ್ಗೆ ನಾನು ತಮಗೆ ತಿಳಿಸಿಕೊಡಲೇ? ಉಪವಾಸವು ಒಂದು ಗುರಾಣಿಯಾಗಿದೆ. ನೀರು ಬೆಂಕಿಯನ್ನು ನಂದಿಸುವಂತೆ ದಾನಧರ್ಮವು ಪಾಪವನ್ನು ನಂದಿಸುತ್ತದೆ. ರಾತ್ರಿಯ ಯಾಮಗಳಲ್ಲಿ ಒಬ್ಬ ವ್ಯಕ್ತಿ ನಿರ್ವಹಿಸುವ ನಮಾಝ್.** ತರುವಾಯ ಅವರು ಓದಿದರು:

**"ಭಯ ಮತ್ತು ನಿರೀಕ್ಷೆಯೊಂದಿಗೆ ತಮ್ಮ ಪ್ರಭುವಿನಲ್ಲಿ ಪ್ರಾರ್ಥಿಸುವವರಾಗಿ ಅವರ ಪಾರ್ಶ್ವಗಳು ಅವರ ಶಯನ ಸ್ಥಳಗಳನ್ನು ಬಿಟ್ಟಗಲುವುವು. ನಾವು ಅವರಿಗೆ ಒದಗಿಸಿರುವುದರಿಂದ ಅವರು ವ್ಯಯಿಸುವರು. ಅವರು ಮಾಡಿರುವುದಕ್ಕಿರುವ ಪ್ರತಿಫಲವಾಗಿ ಕಣ್ಣು ತಂಪಾಗಿಸುವ ಏನನ್ನೆಲ್ಲ ಅವರಿಗಾಗಿ ಗೋಪ್ಯವಾಗಿಡಲಾಗಿದೆ**

ತರುವಾಯ ಮುಆವಿಯಾ(ﷺ)ರವರು ನಮಾಝನ್ನು ಮುಂದುವರಿಸಿದರು. ನಮಾಝ್ ಮುಗಿದ ಬಳಿಕ ಪ್ರವಾದಿ(ﷺ)ರವರು ಅವರನ್ನು ಕರೆದರು. ಮುಆವಿಯಾ(ﷺ)ರವರು ಹೇಳುತ್ತಾರೆ: ಅಲ್ಲಾಹನ ಮೇಲಾಣೆ! ಪ್ರವಾದಿ(ﷺ)ರವರಿಗಿಂತಲೂ ಸುಂದರವಾಗಿ ಕಲಿಸಿಕೊಡುವ ಬೇರೊಬ್ಬ ಅಧ್ಯಾಪಕನನ್ನು ನಾನು ಕಂಡಿಲ್ಲ. ಓ ಅಲ್ಲಾಹ್! ಅವರ ಮೇಲೆ ಸಲಾತ್ ಮತ್ತು ಸಲಾಮ್‌ಗಳನ್ನು ವರ್ಷಿಸು. ಅಲ್ಲಾಹನ ಮೇಲಾಣೆ! ಅವರು ನನ್ನನ್ನು ಬಯ್ಯುವುದಾದಲಿ ಗದರಿಸುವುದಾಗಲಿ ಮಾಡಲಿಲ್ಲ. ಅವರು ಹೇಳಿದ್ದು ಇದು ಮಾತ್ರವಾಗಿತ್ತು:

«إِنَّ هَذِهِ الصَّلَاةَ لَا يَصْلُحُ فِيهَا شَيْءٌ مِنْ كَلَامِ النَّاسِ، إِنَّمَا هِيَ التَّسْبِيحُ وَالتَّكْبِيرُ وَقِرَاءَةُ الْقُرْآنِ»

**"ಖಂಡಿತವಾಗಿಯೂ ಈ ನಮಾಝ್ ಎಂಬುದು ಜನರು ಮಾತನಾಡುವುದಕ್ಕಿರುವುದಲ್ಲ. ಇದು ತಸ್ಬೀಹ್, ತಕ್ಬೀರ್ ಮತ್ತು ಕುರ್‌ಆನ್ ಪಾರಾಯಣ ಮಾತ್ರವಾಗಿದೆ."** (51)

---

**ಎಂಬುದನ್ನು ಯಾವುದೇ ವ್ಯಕ್ತಿಯೂ ಅರಿತಿರಲಾರನು."** [ಕುರ್‌ಆನ್ 32:16–17]

ತರುವಾಯ ಅವರು ಕೇಳಿದರು: **ಎಲ್ಲ ವಿಷಯಗಳ ಶಿರೋಸ್ಥಾನದ ಬಗ್ಗೆ, ಅದರ ಸ್ಥಂಭಗಳ ಬಗ್ಗೆ ಮತ್ತು ಅದರ ಪರಾಕಾಷ್ಠೆಯ ಬಗ್ಗೆ ನಾನು ತಮಗೆ ತಿಳಿಸಿಕೊಡಲೇ?** ನಾನು ಹೇಳಿದೆ: ಓ ಅಲ್ಲಾಹನ ಸಂದೇಶವಾಹಕರೇ, ತಿಳಿಸಿಕೊಡಿ. ಅವರು ಹೇಳಿದರು: **ವಿಷಯದ ಶಿರೋಸ್ಥಾನವು ಇಸ್ಲಾಮ್ ಆಗಿದೆ. ಅದರ ಸ್ಥಂಭಗಳು ನಮಾಝ್ ಆಗಿದೆ ಮತ್ತು ಅದರ ಪರಾಕಾಷ್ಠೆಯು ಜಿಹಾದ್ ಆಗಿದೆ.** ತರುವಾಯ ಅವರು ಕೇಳಿದರು: **ಇವೆಲ್ಲವನ್ನೂ ಸ್ವಾಧೀನದಲ್ಲಿಟ್ಟುಕೊಂಡಿರುವ ಒಂದನ್ನು ನಾನು ತಮಗೆ ತಿಳಿಸಿಕೊಡಲೇ?** ನಾನು ಹೇಳಿದೆ: ಓ ಅಲ್ಲಾಹನ ಪ್ರವಾದಿಯವರೇ, ತಿಳಿಸಿಕೊಡಿ. ಆಗ ಅವರು ತಮ್ಮ ನಾಲಗೆಯನ್ನು ಹಿಡಿದು ಹೇಳಿದರು: **ಇದನ್ನು ನಿಯಂತ್ರಿಸಿರಿ.** ನಾನು ಕೇಳಿದೆ: ಓ ಅಲ್ಲಾಹನ ಪ್ರವಾದಿಯವರೇ, ನಾವು ಏನನ್ನು ಮಾತನಾಡುತ್ತೇವೋ ಅದರಿಂದಾಗಿ ನಮ್ಮನ್ನು ಶಿಕ್ಷಿಸಲಾಗುವುದೇ? ಆಗ ಅವರು ಹೇಳಿದರು: **ಓ ಮುಆದ್, ತಮ್ಮ ತಾಯಿ ತಮ್ಮನ್ನು ಕಳೆದುಕೊಳ್ಳಲಿ. ಜನರನ್ನು ಅವರ ಮುಖಗಳ ಮೇಲೆ ಅಥವಾ ಅವರ ಮೂಗುಗಳ ಮೇಲೆ ನರಕಾಗ್ನಿಯಲ್ಲಿ ತಲೆಕೆಳಗಾಗಿ ಹಾಕುವುದು ಅವರ ನಾಲಗೆಗಳ ಉತ್ಪತ್ತಿಗಳೇ ಹೊರತು ಇನ್ನಾವುದಾದರೂ ಆಗಿದೆಯೇ?** [ಸುನನು ತ್ತಿರ್ಮಿದಿ 4/362; ಹದೀಸ್ ನಂ. 2616. ಅಶ್ಶೈಖ್ ಅಲ್‌ಅಲ್ಬಾನೀ ಇದನ್ನು ಸಹೀಹ್ ಎಂದಿದ್ದಾರೆ. (ನೋಡಿ: ಸಹೀಹ್ ಸುನನಿ ತ್ತಿರ್ಮಿದಿ 3/43]

**51** ಮುಆವಿಯಾ ಇಬ್ನುಲ್ ಹಕಮ್ ಅಸ್ಸುಲಮೀ(ﷺ)ರಿಂದ ವರದಿ: ಅವರು ಹೇಳಿದರು: ಒಂದಿನ ನಾನು ಪ್ರವಾದಿ(ﷺ)ರವರ ಜೊತೆಗೆ ನಮಾಝ್ ಮಾಡುತ್ತಿರುವಾಗ ಜಮಾಅತ್‌ನಲ್ಲಿ ಸೇರಿದ ಒಬ್ಬ ವ್ಯಕ್ತಿ ಸೀನಿದರು. ಆಗ ನಾನು ಯರ್ಹಮುಕಲ್ಲಾಹ್ ಎಂದು ಹೇಳಿದೆ. ಆಗ ಜನರು ನನ್ನನ್ನು ದಿಟ್ಟಿಸಿ ನೋಡತೊಡಗಿದರು. ನಾನು ಹೇಳಿದೆ. ನನ್ನ ತಾಯಿ ನನ್ನನ್ನು ಕಳೆದುಕೊಳ್ಳಲಿ. ನಿಮಗೇನಾಗಿದೆ? ನೀವೇಕೆ ನನ್ನನ್ನು ನೋಡುತ್ತಿದ್ದೀರಿ? ಆಗ ಅವರು ಅವರ ಕೈಗಳನ್ನು ಅವರ ತೊಡೆಗಳ ಮೇಲೆ ಹೊಡೆಯತೊಡಗಿದರು. ಅವರು ನನ್ನನ್ನು ಮೌನವಾಗಿರಲು ಹೇಳುತ್ತಿದ್ದಾರೆಂದು ನನಗೆ ಅರಿವಾದಾಗ (ನನಗೆ ಕೋಪ ಬಂತು). ಆದರೆ ನಾನು ಏನನ್ನೂ ಮಾತನಾಡಲಿಲ್ಲ. ಪ್ರವಾದಿ(ﷺ)ರವರು ನಮಾಝ್ ಮುಗಿಸಿದಾಗ –ನನ್ನ ತಂದೆ ಮತ್ತು ನನ್ನ ತಾಯಿಯನ್ನು ಅವರಿಗೆ ಒಪ್ಪಿಸುತ್ತಿದ್ದೇನೆ. ಅವರಿಗಿಂತ ಮೊದಲೋ ಅವರ ನಂತರವೋ ಅವರಿಗಿಂತಲೂ ಸುಂದರವಾಗಿ ಕಲಿಸುವ ಒಬ್ಬ ಅಧ್ಯಾಪಕನನ್ನು ನಾನು ಕಂಡಿಲ್ಲ–

ಅಥವಾ ಪ್ರವಾದಿ(ﷺ)ರವರು ಹೇಳಿದಂತೆ. ಜನರೊಂದಿಗೆ ಪ್ರೀತಿಯಿಂದ ಮಾಡುವ ಈ ದಅ್‌ವಾದೆಡೆಗೆ ನೋಡಿರಿ. ಯಾವುದೇ ವ್ಯಕ್ತಿಯೂ ಇದನ್ನು ಸ್ವೀಕರಿಸುವನು ಮತ್ತು ಅವನ ಹೃದಯವು ಅದಕ್ಕಾಗಿ ತೆರೆದುಕೊಳ್ಳುವುದು.

ಈ ಹದೀಸಿನಿಂದ ನಮಗೆ ಲಭ್ಯವಾಗುವ ಫಿಕ್‌ಹ್‌ಗೆ ಸಂಬಂಧಿಸಿದ ಪ್ರಯೋಜನವು ಮಾತನಾಡಿದರೆ ನಮಾಝ್ ಬಾತಿಲ್ ಆಗುತ್ತದೆ ಎಂಬುದನ್ನು ಅರಿಯದ ಯಾರಾದರೂ ನಮಾಝ್‌ನಲ್ಲಿ ಮಾತನಾಡಿದರೆ ಅವನ ನಮಾಝ್ ಸಹೀಹ್ ಆಗಿದೆ.

ಮೂರನೆ ಉದಾಹರಣೆ: ಒಬ್ಬ ವ್ಯಕ್ತಿ ಪ್ರವಾದಿ(ﷺ)ರವರ ಬಳಿಗೆ ಬಂದು ಹೇಳಿದರು: ಓ ಅಲ್ಲಾಹನ ಸಂದೇಶವಾಹಕರೇ, ನಾನು ನಾಶವಾದೆನು. ಪ್ರವಾದಿ(ﷺ)ರವರು ಕೇಳಿದರು: ನಿನ್ನನ್ನು ನಾಶ ಮಾಡಿದ್ದೇನು? ಆ ವ್ಯಕ್ತಿ ಹೇಳಿದರು: ನಾನು ರಮದಾನ್‌ನಲ್ಲಿ ಉಪವಾಸವಿರುವಾಗಲೇ ನನ್ನ ಪತ್ನಿಯೊಂದಿಗೆ ಸಂಭೋಗ ಮಾಡಿದೆನು. ಆಗ ಪ್ರವಾದಿ (ﷺ)ರವರು ಆ ವ್ಯಕ್ತಿಯೊಂದಿಗೆ ಒಬ್ಬ ಗುಲಾಮನನ್ನು ವಿಮೋಚನೆ ಮಾಡುವಂತೆ ಹೇಳಿದರು. ಆಗ ಆ ವ್ಯಕ್ತಿ ಹೇಳಿದರು: ನನಗೆ ಅದಕ್ಕಿರುವ ಸಾಮರ್ಥ್ಯವಿಲ್ಲ. ತರುವಾಯ ಪ್ರವಾದಿ(ﷺ)ರವರು ಆ ವ್ಯಕ್ತಿಯೊಂದಿಗೆ ನಿರಂತರ ಎರಡು ತಿಂಗಳು ಉಪವಾಸ ಆಚರಿಸುವಂತೆ ಹೇಳಿದರು: ಆಗ ಆ ವ್ಯಕ್ತಿ ಹೇಳಿದರು: ಅದು ನನ್ನಿಂದ ಸಾಧ್ಯವಿಲ್ಲ. ತರುವಾಯ ಪ್ರವಾದಿ(ﷺ)ರವರು ಆ ವ್ಯಕ್ತಿಯೊಂದಿಗೆ ಅರುವತ್ತು ಬಡವರಿಗೆ ಊಟ

---

ಅಲ್ಲಾಹನ ಮೇಲಾಣೆ! ಅವರು ನನ್ನನ್ನು ಗದರಿಸಲಿಲ್ಲ, ನನಗೆ ಹೊಡೆಯಲಿಲ್ಲ, ನನಗೆ ಬಯ್ಯಲಿಲ್ಲ. ಅವರು ಹೇಳಿದರು: **ಖಂಡಿತವಾಗಿಯೂ ಈ ನಮಾಝ್ ಎಂಬುದು ಜನರು ಮಾತನಾಡುವುದಕ್ಕಿರುವುದಲ್ಲ. ಇದು ತಸ್ಬೀಹ್, ತಕ್ಬೀರ್ ಮತ್ತು ಕುರ್‌ಆನ್ ಪಾರಾಯಣ ಮಾತ್ರವಾಗಿದೆ.** ಅಥವಾ ಪ್ರವಾದಿ(ﷺ)ರವರು ಹೇಳಿದಂತೆ. ನಾನು ಹೇಳಿದೆ: ಓ ಅಲ್ಲಾಹನ ಸಂದೇಶವಾಹಕರೇ, ನಾನು ಇತ್ತೀಚೆಗಷ್ಟೇ ಜಾಹಿಲಿಯ್ಯತ್ತಿನಿಂದ ಇಸ್ಲಾಮಿಗೆ ಬಂದವನು. ಅಲ್ಲಾಹು ಇಸ್ಲಾಮನ್ನು ತಂದನು. ನಮ್ಮಲ್ಲಿ ಕೆಲವರು ಜ್ಯೋತಿಷ್ಯರ ಬಳಿಗೆ ಹೋಗುವವರಿದ್ದಾರೆ. ಅವರು ಹೇಳಿದರು: **ತಾವು ಅವರ ಬಳಿಗೆ ಹೋಗಬಾರದು.** ನಾನು ಹೇಳಿದೆ: ನಮ್ಮಲ್ಲಿ ಕೆಲವರು ಶಕುನವನ್ನು ನಂಬುತ್ತಾರೆ. ಅವರು ಹೇಳಿದರು: **ಅದು ಅವರು ಅವರ ಹೃದಯದಲ್ಲಿ ಕಾಣುವಂತಹುದ್ದಾಗಿದೆ. ಆದರೆ ಅದು ಅವರನ್ನು (ಏನಾದರೂ ಮಾಡುವುದರಿಂದ) ತಡೆಯದಿರಲಿ.** ನಾನು ಹೇಳಿದೆ: ನಮ್ಮಲ್ಲಿ ಕೆಲವರು (ಮರಳಿನಲ್ಲಿ) ಗೆರೆ ಎಳೆಯುತ್ತಾರೆ. ಅವರು ಹೇಳಿದರು: **ಪ್ರವಾದಿಗಳಲ್ಲಿ ಒಬ್ಬರು ಗೆರೆ ಎಳೆಯುತ್ತಿದ್ದರು. ಅದು ಅದರೊಂದಿಗೆ ಹೊಂದಾಣಿಕೆಯಾದರೆ ಅದರಲ್ಲಿ ತೊಂದರೆಯಿಲ್ಲ.**

ನನಗೊಬ್ಬ ಗುಲಾಮಸ್ತ್ರೀಯಿದ್ದಳು. ಆಕೆ ಉಹುದ್‌ನ ಸಮೀಪ ಮತ್ತು ಅಲ್‌ಜವ್ವಾನಿಯ್ಯದಲ್ಲಿ ನನ್ನ ಆಡುಗಳನ್ನು ಮೇಯಿಸುತ್ತಿದ್ದಳು. ಒಂದಿನ ಒಂದು ತೋಳ ಆಡಿನ ಮಂದೆಯಲ್ಲಿ ಸೇರಿದ ಒಂದು ಆಡನ್ನು ಎಳೆದೊಯ್ಯುವುದನ್ನು ನಾನು ಕಂಡೆನು. ನಾನು ಮನುಷ್ಯರಲ್ಲಿ ಸೇರಿದವನಾಗಿರುವುದರಿಂದ ಮನುಷ್ಯರಿಗೆ ಕೋಪ ಬರುವಂತೆ ನನಗೂ ಕೋಪ ಬಂತು. ನಾನು (ಕೈ ಚಾಚಿ) ಆಕೆಗೊಂದು ಬಾರಿಸಿದೆ. ತರುವಾಯ ನಾನು ಪ್ರವಾದಿ(ﷺ)ರವರ ಬಳಿಗೆ ಬಂದೆ. ನನ್ನ ಈ ಕೃತ್ಯವು ನನಗೆ ಭೀಕರವಾಗಿ ಕಂಡಿತು. ನಾನು ಹೇಳಿದೆ: ಓ ಅಲ್ಲಾಹನ ಸಂದೇಶವಾಹಕರೇ, ನಾನು ಆಕೆಯನ್ನು ವಿಮೋಚನೆ ಮಾಡಲೇ? ಅವರು ಹೇಳಿದರು: **ಆಕೆಯನ್ನು ನನ್ನ ಬಳಿಗೆ ಕರೆತನ್ನಿರಿ.** ನಾನು ಆಕೆಯನ್ನು ಕರೆತಂದೆ. ಪ್ರವಾದಿ(ﷺ) ರವರು ಆಕೆಯೊಂದಿಗೆ ಕೇಳಿದರು: **ಅಲ್ಲಾಹು ಎಲ್ಲಿದ್ದಾನೆ?** ಆಕೆ ಹೇಳಿದಳು: ಆಕಾಶದ ಮೇಲೆ. ಪ್ರವಾದಿ (ﷺ)ರವರು ಕೇಳಿದರು: **ನಾನು ಯಾರು**? ಆಕೆ ಹೇಳಿದಳು: ತಾವು ಅಲ್ಲಾಹನ ಸಂದೇಶವಾಹಕರು. ಪ್ರವಾದಿ(ﷺ)ರವರು ಹೇಳಿದರು: **ಆಕೆಯನ್ನು ವಿಮೋಚನೆ ಮಾಡಿರಿ. ಆಕೆ ವಿಶ್ವಾಸಿನಿಯಾಗಿದ್ದಾಳೆ.** [ಸಹೀಹ್ ಮುಸ್ಲಿಮ್ 1/381; ಹದೀಸ್ ನಂ. 537]

ಹಾಕುವಂತೆ ಹೇಳಿದರು. ಆಗ ಆ ವ್ಯಕ್ತಿ ಹೇಳಿದರು: ಅದು ನನ್ನಿಂದ ಸಾಧ್ಯವಿಲ್ಲ. ಹೀಗೆ ಆ ವ್ಯಕ್ತಿ ಪ್ರವಾದಿ(ﷺ)ರವರ ಬಳಿ ಕುಳಿತರು. ಸ್ವಲ್ಪ ಹೊತ್ತಿನಲ್ಲೇ ಯಾರೋ ಒಬ್ಬರು ಪ್ರವಾದಿ(ﷺ)ರವರಿಗೆ ಒಂದು ಬುಟ್ಟಿ ಖರ್ಜೂರವನ್ನು ತಂದು ಕೊಟ್ಟರು. ಪ್ರವಾದಿ (ﷺ)ರವರು ಆ ವ್ಯಕ್ತಿಯೊಂದಿಗೆ ಹೇಳಿದರು: ಇದನ್ನು ಪಡೆದು ದಾನ ಮಾಡು. ಆದರೆ ಆ ವ್ಯಕ್ತಿ ಪ್ರವಾದಿ(ﷺ)ರವರ ಆದರಣೀಯತೆಯಲ್ಲಿ ಆಸೆಪಟ್ಟರು. ಪ್ರವಾದಿ(ﷺ)ರವರು ಜನರೊಂದಿಗೆ ಅಪಾರ ಆದರದೊಂದಿಗೆ ವರ್ತಿಸುತ್ತಿದ್ದರು. ಯಾಕೆಂದರೆ ಅವರು ಜನರಲ್ಲಿ ಅತಿಹೆಚ್ಚು ಆದರಣೀಯರಾಗಿದ್ದರು. ಆದ್ದರಿಂದ ಆ ವ್ಯಕ್ತಿ ಹೇಳಿದರು: ಓ ಅಲ್ಲಾಹನ ಸಂದೇಶವಾಹಕರೇ, ಇದನ್ನು ನನಗಿಂತಲೂ ಬಡವರಾಗಿರುವವರಿಗೆ ದಾನ ಮಾಡಬೇಕೇ? ಅಲ್ಲಾಹನ ಮೇಲಾಣೆ! ಮದೀನಾದ ಎರಡು ಸರಹದ್ದುಗಳ ಮಧ್ಯೆ ನನಗಿಂತಲೂ ಹೆಚ್ಚು ಬಡವರಾಗಿರುವವರ ಮನೆಯನ್ನು ಕಾಣಲಾಗದು. ಆಗ ಪ್ರವಾದಿ (ﷺ)ರವರು ತಮ್ಮ ದವಡೆ ಹಲ್ಲು ಕಾಣುವಂತೆ ನಕ್ಕರು. ಆ ವ್ಯಕ್ತಿ ನಾನು ನಾಶವಾದೆನು ಎನ್ನುತ್ತಾ ಭಯದೊಂದಿಗೆ ಬಂದಿದ್ದರು. ಆದರೆ ಈಗ ಒಂದು ಲಾಭದೊಂದಿಗೆ ಮರಳುತ್ತಿದ್ದಾರೆ. ಪ್ರವಾದಿ(ﷺ)ರವರು ಆ ವ್ಯಕ್ತಿಯೊಂದಿಗೆ ಹೇಳಿದರು. ಇದನ್ನು ತಮ್ಮ ಕುಟುಂಬಕ್ಕೆ ತಿನ್ನಿಸಿರಿ. ಆ ವ್ಯಕ್ತಿ ಈ ಇಸ್ಲಾಮ್ ಧರ್ಮದ ಬಗ್ಗೆ ಸಮಾಧಾನದೊಂದಿಗೆ, ಲಾಭದೊಂದಿಗೆ ಮತ್ತು ಸಂತೋಷದೊಂದಿಗೆ ಹೊರಟು ಹೋದರು. ಈ ಇಸ್ಲಾಮ್ ಧರ್ಮದ ಮೊಟ್ಟಮೊದಲ ದಾಈ ಆಗಿರುವ ಪ್ರವಾದಿ(ﷺ)ರವರಿಂದ ಲಭ್ಯವಾದ ಸರಳತೆಯೊಂದಿಗೆ ಅವರು ಹೊರಟು ಹೋದರು. [52]

ನಾಲ್ಕನೆ ಉದಾಹರಣೆ: ತಪ್ಪು ಮಾಡಿದ ವ್ಯಕ್ತಿಯೊಂದಿಗೆ ಪ್ರವಾದಿ(ﷺ)ರವರು ಹೇಗೆ ವರ್ತಿಸಿದರು ಎಂಬುದನ್ನು ನೋಡೋಣ. ಪ್ರವಾದಿ(ﷺ)ರವರು ಒಬ್ಬ ವ್ಯಕ್ತಿಯ ಕೈಯಲ್ಲಿ

---

**52** ಅಬೂ ಹುರೈರಾ(رضي الله عنه)ರಿಂದ ವರದಿ: ಅವರು ಹೇಳಿದರು: ನಾವು ಪ್ರವಾದಿ(ﷺ)ರವರ ಬಳಿ ಕುಳಿತಿರುವಾಗ ಒಬ್ಬ ವ್ಯಕ್ತಿ ಬಂದು ಹೇಳಿದರು: ಓ ಅಲ್ಲಾಹನ ಸಂದೇಶವಾಹಕರೇ, ನಾನು ನಾಶವಾಗಿ ಹೋದೆ. ಪ್ರವಾದಿ(ﷺ)ರವರು ಕೇಳಿದರು: **ನಿನಗೇನಾಯಿತು**? ಆ ವ್ಯಕ್ತಿ ಹೇಳಿದರು: ನಾನು ಉಪವಾಸಿಗನಾಗಿದ್ದು ನನ್ನ ಪತ್ನಿಯೊಂದಿಗೆ ಸಂಭೋಗ ಮಾಡಿದೆ. ಪ್ರವಾದಿ(ﷺ)ರವರು ಕೇಳಿದರು: **ಒಬ್ಬ ಗುಲಾಮನ್ನು ವಿಮೋಚನೆ ಮಾಡುವ ಸಾಮರ್ಥ್ಯ ತಮಗಿದೆಯೇ**? ಆ ವ್ಯಕ್ತಿ ಹೇಳಿದರು: ಇಲ್ಲ. ಪ್ರವಾದಿ(ﷺ)ರವರು ಕೇಳಿದರು: **ನಿರಂತರ ಎರಡು ತಿಂಗಳು ಉಪವಾಸ ಆಚರಿಸಲು ತಮಗೆ ಸಾಧ್ಯವೇ**? ಆ ವ್ಯಕ್ತಿ ಹೇಳಿದರು: ಇಲ್ಲ. ಪ್ರವಾದಿ(ﷺ)ರವರು ಕೇಳಿದರು: **ಅರುವತ್ತು ಬಡವರಿಗೆ ಆಹಾರ ನೀಡಲು ತಮಗೆ ಸಾಮರ್ಥ್ಯವಿದೆಯೇ**? ಆ ವ್ಯಕ್ತಿ ಹೇಳಿದರು: ಇಲ್ಲ. ಪ್ರವಾದಿ(ﷺ)ರವರು ಸ್ವಲ್ಪ ಹೊತ್ತು ಹಾಗೆಯೇ ಕುಳಿತರು. ನಾವು ಇದೇ ಸ್ಥಿತಿಯಲ್ಲಿದ್ದಾಗ ಒಬ್ಬ ವ್ಯಕ್ತಿ ಪ್ರವಾದಿ(ﷺ)ರವರಿಗೆ ಒಂದು ಬುಟ್ಟಿ ಖರ್ಜೂರವನ್ನು ತಂದುಕೊಟ್ಟರು. ಪ್ರವಾದಿ(ﷺ)ರವರು ಹೇಳಿದರು: **ಆ ಪ್ರಶ್ನೆ ಕೇಳಿದ ವ್ಯಕ್ತಿ ಎಲ್ಲಿ**? ಆ ವ್ಯಕ್ತಿ ಹೇಳಿದರು: ನಾನಿಲ್ಲಿದ್ದೇನೆ. ಪ್ರವಾದಿ(ﷺ)ರವರು ಹೇಳಿದರು: **ಇದನ್ನು ತೆಗೆದುಕೊಂಡು ದಾನ ಮಾಡಿರಿ**. ಆ ವ್ಯಕ್ತಿ ಕೇಳಿದರು: ಓ ಅಲ್ಲಾಹನ ಸಂದೇಶವಾಹಕರೇ, ನನಗಿಂತಲೂ ಬಡವರಾಗಿರುವವರಿಗೆ ದಾನ ಮಾಡಬೇಕೇ? ಅಲ್ಲಾಹನ ಮೇಲಾಣೆ! (ಮದೀನಾದ) ಎರಡು ಸರಹದ್ದುಗಳ ಮಧ್ಯೆ ನನ್ನ ಮನೆಯವರಿಗಿಂತಲೂ ಬಡವರಾಗಿರುವ ಮನೆಯವರು ಇಲ್ಲ. ಆಗ ಪ್ರವಾದಿ(ﷺ)ರವರು ತಮ್ಮ ದವಡೆ ಹಲ್ಲು ಕಾಣುವಂತೆ ನಕ್ಕರು. ತರುವಾಯ ಹೇಳಿದರು: **ಅದನ್ನು ತಮ್ಮ ಮನೆಯವರಿಗೆ ತಿನ್ನಿಸಿರಿ.** [ಸಹೀಹುಲ್ ಬುಖಾರಿ 2/41; ಹದೀಸ್ ನಂ. 1936. ಸಹೀಹ್ ಮುಸ್ಲಿಮ್ 2/781; ಹದೀಸ್ ನಂ. 1111]

ಚಿನ್ನದ ಒಂದು ಉಂಗುರವೊಂದನ್ನು ಕಂಡರು. ಅವರು ತಕ್ಷಣ ತಮ್ಮ ಆದರಣೀಯ ಕೈಯಿಂದ ಅದನ್ನು ಕಳಚಿ ನೆಲಕ್ಕೆಸೆದರು. ನಂತರ ಹೇಳಿದರು:

«يَعْمِدُ أَحَدُكُمْ إِلَى جَمْرَةٍ مِنْ نَارٍ فَيَجْعَلُهَا فِي يَدِهِ»

**"ನಿಮ್ಮಲ್ಲೊಬ್ಬನು ನರಕಾಗ್ನಿಯ ಕೆಂಡವನ್ನು ಉದ್ದೇಶಿಸುತ್ತಾನೆ. ತರುವಾಯ ಅದನ್ನು ತನ್ನ ಕೈಯಲ್ಲಿಡುತ್ತಾನೆ."**

ಮೊದಲ ಎರಡು ಉದಾಹರಣೆಗಳಲ್ಲಿರುವ ವ್ಯಕ್ತಿಗಳೊಂದಿಗೆ ವರ್ತಿಸಿದಂತೆ ಪ್ರವಾದಿ (ﷺ)ರವರು ಈ ವ್ಯಕ್ತಿಯೊಂದಿಗೆ ವರ್ತಿಸಲಿಲ್ಲ. ಬದಲಾಗಿ ಆ ಚಿನ್ನದ ಉಂಗುರವನ್ನು ಆ ವ್ಯಕ್ತಿಯ ಕೈಯಿಂದ ಕಳಚಿ ಅದನ್ನು ನೆಲಕ್ಕೆಸೆದರು. ಪ್ರವಾದಿ(ﷺ)ರವರು ಅಲ್ಲಿಂದ ನಿರ್ಗಮಿಸಿದ ಬಳಿಕ ಆ ವ್ಯಕ್ತಿಯೊಂದಿಗೆ ಯಾರೋ ಹೇಳಿದರು: ನಿನ್ನ ಆ ಉಂಗುರವನ್ನು ತೆಗೆದು ಅದರಿಂದ ಏನಾದರೂ ಪ್ರಯೋಜನವನ್ನು ಪಡೆ. ಆದರೆ ಆ ವ್ಯಕ್ತಿ ಹೇಳಿದರು:

«وَاللَّهِ لَا آخُذُ خَاتَمًا طَرَحَهُ النَّبِيُّ صَلَّى اللَّهُ عَلَيْهِ وَسَلَّمَ»

**"ಅಲ್ಲಾಹನ ಮೇಲಾಣೆ! ಪ್ರವಾದಿ(ﷺ)ರವರು ಎಸೆದ ಉಂಗುರವನ್ನು ನಾನೆಂದೂ ತೆಗೆದುಕೊಳ್ಳಲಾರೆ."** [53]

ಅಲ್ಲಾಹು ಅಕ್ಬರ್. ಇದು ಸಹಾಬಾಗಳು ಪ್ರವಾದಿ(ﷺ)ರವರ ಆಜ್ಞಾಪಾಲನೆ ಮಾಡುತ್ತಿದ್ದ ಬಹುದೊಡ್ಡ ಮಾದರಿಯಾಗಿದೆ.

ಇಲ್ಲಿ ಪ್ರಾಮುಖ್ಯತೆಯಿರುವುದು ದಅ್‌ವಾ ಮಾಡುವವನು ಅಲ್ಲಾಹನೆಡೆಗೆ ದಅ್‌ವಾ ಮಾಡುವುದು ಹಿಕ್ಮತ್‌ನಿಂದಾಗಿರಬೇಕು ಎಂಬುದಾಗಿದೆ. ಅಜ್ಞಾನಿಯು ಜ್ಞಾನಿಯಂತಲ್ಲ, ಹಠಮಾರಿಯು ಸುಲಭವಾಗಿ ಒಪ್ಪಿಕೊಳ್ಳುವವನಂತಲ್ಲ. ಆದ್ದರಿಂದ ಪ್ರತಿಯೊಬ್ಬರೊಂದಿಗೆ ಅವರಿಗೆ ಹೊಂದಾಣಿಕೆಯಾಗುವ ವಿಧದಲ್ಲಿ ವರ್ತಿಸಬೇಕಾಗಿದೆ.

---

**53** ಅಬ್ದುಲ್ಲಾಹ್ ಇಬ್ನ್ ಅಬ್ಬಾಸ್(ರ)ರಿಂದ ವರದಿ: ಪ್ರವಾದಿ(ﷺ)ರವರು ಒಬ್ಬ ವ್ಯಕ್ತಿಯ ಕೈಯಲ್ಲಿ ಚಿನ್ನದ ಉಂಗುರವೊಂದನ್ನು ಕಂಡರು. ಅವರು ಅದನ್ನು ಕಳಚಿ ಎಸೆದರು. ನಂತರ ಹೇಳಿದರು: **ನಿಮ್ಮಲ್ಲೊಬ್ಬನು ನರಕಾಗ್ನಿಯ ಕೆಂಡವನ್ನು ಉದ್ದೇಶಿಸುತ್ತಾನೆ. ತರುವಾಯ ಅದನ್ನು ತನ್ನ ಕೈಯಲ್ಲಿಡುತ್ತಾನೆ.** ಪ್ರವಾದಿ(ﷺ)ರವರು ಹೊರಟುಹೋದ ಬಳಿಕ ಆ ವ್ಯಕ್ತಿಯೊಂದಿಗೆ ಯಾರೋ ಹೇಳಿದರು: ತಮ್ಮ ಉಂಗುರವನ್ನು ತೆಗೆದುಕೊಳ್ಳಿರಿ. ಅದರಿಂದ ಪ್ರಯೋಜನ ಪಡಿರಿ. ಆ ವ್ಯಕ್ತಿ ಹೇಳಿದರು: ಅಲ್ಲಾಹನ ಮೇಲಾಣೆ! ಅಲ್ಲಾಹನ ರಸೂಲ್(ﷺ)ರವರು ಅದನ್ನು ಎಸೆದಿರುವುದರಿಂದ ನಾನದನ್ನು ಎಂದಿಗೂ ತೆಗೆದುಕೊಳ್ಳಲಾರೆ. [ಸಹೀಹ್ ಮುಸ್ಲಿಮ್ 3/1655; ಹದೀಸ್ ನಂ. 2090]

## الزاد الرابع: أن يتخلق الداعية بالأخلاق الفاضلة

## ನಾಲ್ಕನೆ ಪೂರ್ವಸಿದ್ಧತೆ: ದಅ್‌ವಾ ಮಾಡುವವನು ಅತ್ಯುತ್ಕೃಷ್ಟವಾದ ಸ್ವಭಾವವನ್ನು ಹೊಂದಿರಬೇಕಾಗಿದೆ

ನಾಲ್ಕನೆ ಪೂರ್ವಸಿದ್ಧತೆಯು ದಅ್‌ವಾ ಮಾಡುವವನು ಅತ್ಯುತ್ಕೃಷ್ಟವಾದ ಸ್ವಭಾವವನ್ನು ಹೊಂದಿರಬೇಕು ಎಂಬುದಾಗಿದೆ. ಅಂದರೆ ಅವನು ಅಲ್ಲಾಹನೆಡೆಗೆ ದಅ್‌ವಾ ಮಾಡುವ ವಿಷಯದಲ್ಲಿ ಮಾದರಿಯಾಗುವುದಕ್ಕಾಗಿ ಅವನ ಅಕೀದಃದಲ್ಲಿ, ಇಬಾದತ್‌ಗಳಲ್ಲಿ, ರೂಪದಲ್ಲಿ ಮತ್ತು ಅವನ ಎಲ್ಲ ಸ್ವಭಾವಗಳಲ್ಲಿ ಇಲ್ಮ್‌ನ ಪ್ರಭಾವವು ಅವನಲ್ಲಿ ಪ್ರಕಟವಾಗಬೇಕಾಗಿದೆ. ಆದರೆ ಅವನ ಸ್ಥಿತಿಯು ಇದಕ್ಕೆ ತದ್ವಿರುದ್ಧವಾಗಿದ್ದರೆ ಅವನ ದಅ್‌ವಾ ವಿಫಲವಾಗುವುದು. ಇನ್ನು ಅದು ಯಶಸ್ವಿಯಾದರೂ ಅದು ಬಹಳ ಅಪೂರ್ವವಾಗಿದೆ.

ಆದ್ದರಿಂದ ದಅ್‌ವಾ ಮಾಡುವವನು ಅವನ ದಅ್‌ವಾ ಸ್ವೀಕಾರಯೋಗ್ಯವಾಗುವುದಕ್ಕಾಗಿ ಮತ್ತು ಅವನು ನರಕಾಗ್ನಿಯಲ್ಲಿ ಮೊಟ್ಟಮೊದಲು ಉರಿಸಲಾಗುವ ವ್ಯಕ್ತಿಯಾಗದಿರುವುದಕ್ಕಾಗಿ ಅವನು ಯಾವುದರೆಡೆಗೆ ದಅ್‌ವಾ ಮಾಡುತ್ತಾನೋ ಅದರಲ್ಲಿ ಸೇರಿದ ಇಬಾದತ್, ವ್ಯವಹಾರ, ಸ್ವಭಾವ ಇತ್ಯಾದಿಗಳಲ್ಲಿ ಅವನು ಅತ್ಯುತ್ತಮ ಮಾದರಿಯನ್ನು ಹೊಂದಿರಬೇಕಾಗಿದೆ.

ಓ ಸಹೋದರರೇ, ನಾವು ನಮ್ಮ ಸ್ಥಿತಿಯೆಡೆಗೆ ನೋಡಿದರೆ ನಾವು ವಾಸ್ತವದಲ್ಲಿ ಒಂದು ವಿಷಯದೆಡೆಗೆ ದಅ್‌ವಾ ಮಾಡುತ್ತೇವೆಯೇ ಹೊರತು ನಾವು ಅದನ್ನು ನಿರ್ವಹಿಸುವುದಿಲ್ಲ. ಇದೊಂದು ಬಹುದೊಡ್ಡ ಕಳಂಕವಾಗಿದೆಯೆಂಬುದರಲ್ಲಿ ಅನುಮಾನವೇ ಇಲ್ಲ. ಆದರೆ ನಮ್ಮ ಮತ್ತು ನಾವು ದಅ್‌ವಾ ಮಾಡುವ ವಿಷಯದ ನಡುವೆ ಅದಕ್ಕಿಂತಲೂ ಶ್ರೇಷ್ಠವಾಗಿರುವುದರೆಡೆಗೆ ನಾವು ನೋಡುವಂತೆ ನಮ್ಮ ದೃಷ್ಟಿಯು ಅಡ್ಡವಾಗಿ ಬರುವ ಹೊರತು. ಯಾಕೆಂದರೆ ಪ್ರತಿಯೊಂದು ಸ್ಥಾನಕ್ಕೂ ಅದರದ್ದೇ ಆದ ಶ್ರೇಷ್ಠತೆಯಿದೆ. ಕೆಲವೊಮ್ಮೆ ಮಫ್ದೂಲ್ ಆಗಿರುವ ವಿಷಯವು ಕೆಲವು ಸಂದರ್ಭಗಳಿಂದಾಗಿ ಹೆಚ್ಚು ಶ್ರೇಷ್ಠತೆ ಪಡೆದು ಫಾದಿಲ್ ಆಗಿರುವ ವಿಷಯವು ಮಫ್ದೂಲ್ ಆಗುವ ಸಾಧ್ಯತೆಯಿದೆ. [54] ಆದ್ದರಿಂದಲೇ ಪ್ರವಾದಿ(ﷺ)ರವರು ಕೆಲವು

---

**54** ಶ್ರೇಷ್ಠತೆಯಿರುವ ಎರಡು ವಿಷಯಗಳಲ್ಲಿ ಒಂದು ಇನ್ನೊಂದಕ್ಕಿಂತಲೂ ಹೆಚ್ಚು ಶ್ರೇಷ್ಠವಾಗಿದ್ದರೆ ಹೆಚ್ಚು ಶ್ರೇಷ್ಠವಾಗಿರುವುದನ್ನು ಫಾದಿಲ್ (فاضل) ಎನ್ನಲಾಗುತ್ತದೆ. ಇನ್ನೊಂದನ್ನು ಮಫ್ದೂಲ್ (مفضول) ಎನ್ನಲಾಗುತ್ತದೆ. ಉದಾ: ಕುರ್‌ಆನ್ ಪಾರಾಯಣ ಮಾಡುವುದು ಮತ್ತು ದಿಕ್ರ್ ಹೇಳುವುದು

ವಿಷಯಗಳೆಡೆಗೆ ದಅ್‌ವಾ ಮಾಡುತ್ತಿದ್ದರು. ಆದರೆ ಕೆಲವು ಸಂದರ್ಭಗಳಲ್ಲಿ ಅವರು ಅದಕ್ಕಿಂತಲೂ ಹೆಚ್ಚು ಪ್ರಾಮುಖ್ಯತೆಯಿರುವ ವಿಷಯಗಳಲ್ಲಿ ಮಗ್ನರಾಗುತ್ತಿದ್ದರು. ಅವರು ಕೆಲವೊಮ್ಮೆ ಇನ್ನು ಅವರು ಉಪವಾಸ ಆಚರಿಸುವುದನ್ನು ನಿಲ್ಲಿಸಲಾರರೋ ಎಂದು ಭಾವಿಸುವ ತನಕ ಉಪವಾಸ ಆಚರಿಸುತ್ತಿದ್ದರು. ಮತ್ತೆ ಕೆಲವೊಮ್ಮೆ ಇನ್ನು ಅವರು ಉಪವಾಸ ಆಚರಿಸಲಾರರೋ ಎಂದು ಭಾವಿಸುವ ತನಕ ಉಪವಾಸ ಆಚರಿಸುವುದನ್ನು ನಿಲ್ಲಿಸುತ್ತಿದ್ದರು. (55)

ಓ ಸಹೋದರರೇ, ದಅ್‌ವಾ ಮಾಡುವ ಪ್ರತಿಯೊಬ್ಬರೂ ಅವನು ನಿಜವಾದ ದಾಈ ಆಗುವ ಸಲುವಾಗಿ ಮತ್ತು ಅವನ ಮಾತು ಸ್ವೀಕಾರ್ಯತೆಗೆ ಹೆಚ್ಚು ಅರ್ಹವಾಗುವ ಸಲುವಾಗಿ ಒಬ್ಬ ದಾಈಗಿರಬೇಕಾದ ಎಲ್ಲ ಸ್ವಭಾವಗಳನ್ನೂ ಅವನು ಹೊಂದಿರಬೇಕೆಂದು ನಾನು ಆಶಿಸುತ್ತಿದ್ದೇನೆ.

---

ಎರಡಕ್ಕೂ ಶ್ರೇಷ್ಠತೆಯಿದೆ. ಆದರೆ ಕುರ್‌ಆನ್ ಪಾರಾಯಣವು ದಿಕ್ರ್ ಹೇಳುವುದಕ್ಕಿಂತಲೂ ಹೆಚ್ಚು ಶ್ರೇಷ್ಠವಾಗಿದೆ. ಆದ್ದರಿಂದ ಕುರ್‌ಆನ್ ಪಾರಾಯಣವನ್ನು ಫಾದಿಲ್ ಮತ್ತು ದಿಕ್ರ್ ಹೇಳುವುದನ್ನು ಮಫ್ದೂಲ್ ಎನ್ನಲಾಗುತ್ತದೆ. ಆದರೆ ಕೆಲವೊಮ್ಮೆ ಮಫ್ದೂಲ್ ಫಾದಿಲ್‌ಗಿಂತಲೂ ಹೆಚ್ಚು ಶ್ರೇಷ್ಠವಾಗುವ ಸಂದರ್ಭಗಳಿರುತ್ತವೆ. ಉದಾ: ಒಬ್ಬ ವ್ಯಕ್ತಿ ಕುರ್‌ಆನ್ ಪಾರಾಯಣ ಮಾಡುತ್ತಿರುವಾಗ ಅದಾನ್ ಕೇಳಿದರೆ ಅವನು ಕುರ್‌ಆನ್ ಪಾರಾಯಣವನ್ನು ಮುಂದುವರಿಸಬೇಕೇ ಅಥವಾ ಮುಅದ್ದಿನ್‌ಗೆ ಉತ್ತರ ಕೊಡಬೇಕೇ? ಅಶ್ಶೈಖ್ ಅಲ್‌ಉಸೈಮೀನ್‌ರವರು ತಮ್ಮ ಒಂದು ಫತ್ವಾದಲ್ಲಿ ಹೇಳುವ ಪ್ರಕಾರ ಅತಿಶ್ರೇಷ್ಠವಾಗಿರುವುದು ಮುಅದ್ದಿನ್‌ಗೆ ಉತ್ತರ ಕೊಡುವುದಾಗಿದೆ. ಕುರ್‌ಆನ್ ಪಾರಾಯಣವು ದಿಕ್ರ್‌ಗಳಲ್ಲೇ ಅತಿಶ್ರೇಷ್ಠವಾಗಿದ್ದರೂ ಸಹ ಆ ಸಂದರ್ಭದಲ್ಲಿ (ಅಂದರೆ ಅದಾನ್ ಕೇಳುವಾಗ) ದಿಕ್ರ್ ಹೇಳುವುದು (ಅಂದರೆ ಅದಾನ್‌ನ ದಿಕ್ರ್‌ಗಳನ್ನು ಹೇಳುವುದು) ಕುರ್‌ಆನ್ ಪಾರಾಯಣ ಮಾಡುವುದಕ್ಕಿಂತಲೂ ಶ್ರೇಷ್ಠವಾಗಿದೆ. ಯಾಕೆಂದರೆ ಕುರ್‌ಆನ್ ಪಾರಾಯಣವು ಸಮಯ ಬಂಧಿತವಲ್ಲ. ಅದನ್ನು ಯಾವಾಗ ಬೇಕಾದರೂ ಪಾರಾಯಣ ಮಾಡಬಹುದಾಗಿದೆ. ಆದರೆ ಮುಅದ್ದಿನ್‌ಗೆ ಉತ್ತರ ಕೊಡುವುದು ಅದಾನ್ ಕೇಳುವುದರೊಂದಿಗೆ ಬಂಧಿತವಾಗಿದೆ.

**55** ಅಶ್ಶೈಖ್ ಅಲ್‌ಉಸೈಮೀನ್‌ರವರು ಇಲ್ಲಿ ಹೇಳಲು ಉದ್ದೇಶಿಸುವುದೇನೆಂದರೆ ದಅ್‌ವಾ ಮಾಡುವ ವ್ಯಕ್ತಿ ಕೆಲವೊಮ್ಮೆ ತಾನು ಜನರಿಗೆ ಆದೇಶಿಸುವ ಫಾದಿಲ್ ಆಗಿರುವ ವಿಷಯವನ್ನು ಮಾಡದೆ ಮಫ್ದೂಲ್ ಆಗಿರುವ ಬೇರೆಯೇ ಒಂದನ್ನು ಮಾಡಬಹುದು. ಆ ಸಂದರ್ಭದಲ್ಲಿ ಅವನು ತಾನು ಹೇಳುವುದಕ್ಕೆ ವಿರುದ್ಧವಾಗಿ ವರ್ತಿಸುತ್ತಾನೆ ಎನ್ನಲಾಗದು. ಇದನ್ನು ಶೈಖುಲ್ ಇಸ್ಲಾಮ್ ಇಬ್ನ್ ತೈಮಿಯ್ಯಃ ತಮ್ಮ ಫತಾವಾದಲ್ಲಿ ಉದಾಹರಣೆ ಸಹಿತ ಸುಂದರವಾಗಿ ವಿವರಿಸುತ್ತಾರೆ. ಕೆಲವೊಮ್ಮೆ ಜನರಲ್ಲಿ ಕೆಲವರು ತಮ್ಮ ಪರಿಸ್ಥಿತಿಗೆ ತಕ್ಕಂತೆ ಫಾದಿಲ್ ಅನ್ನು ಬಿಟ್ಟು ಮಫ್ದೂಲ್ ಅನ್ನು ಆರಿಸಬಹುದು. ಯಾಕೆಂದರೆ ಅವನಿಗೆ ನೆಮ್ಮದಿ ಸಿಗುವುದು ಆ ಮಫ್ದೂಲ್ ಆಗಿರುವ ವಿಷಯದಲ್ಲಾಗಿರಬಹುದು. ಉದಾ: ಒಬ್ಬ ವ್ಯಕ್ತಿ ಕುರ್‌ಆನ್ ಪಾರಾಯಣ ಮಾಡುವುದನ್ನು ಬಿಟ್ಟು ದಿಕ್ರ್ ಹೇಳುವುದನ್ನು ಆರಿಸಬಹುದು. ಅಂದರೆ ಕುರ್‌ಆನ್ ಪಾರಾಯಣವು ಫಾದಿಲ್ ಆಗಿದ್ದರೂ ಅವನು ಅದನ್ನು ಬಿಟ್ಟು ಮಫ್ದೂಲ್ ಆಗಿರುವ ದಿಕ್ರ್ ಹೇಳುವುದನ್ನು ಆರಿಸಬಹುದು. ಆದರೆ ಅವನ ಪ್ರಕಾರ ಅವನ ಆ ಆಯ್ಕೆಯು ಅತಿಶ್ರೇಷ್ಠವಾಗಿದೆ. ಯಾಕೆಂದರೆ ಅನಾಸಕ್ತಿಯಿಂದ ಕುರ್‌ಆನ್ ಓದುವುದಕ್ಕಿಂತಲೂ ಆಸಕ್ತಿಯೊಂದಿಗೆ ದಿಕ್ರ್ ಹೇಳುವುದು ಅತಿಶ್ರೇಷ್ಠವಾಗಿದೆ. ಆದ್ದರಿಂದ ಜನರು ಕೆಲವೊಮ್ಮೆ ತಮಗೆ ಮಾಡಲು ಸಾಧ್ಯವಾಗದ ಫಾದಿಲ್ ಆಗಿರುವುದನ್ನು ಬಿಟ್ಟು ತಮಗೆ ಮಾಡಲು ಸಾಧ್ಯವಾಗುವ ಮಫ್ದೂಲ್ ಆಗಿರುವುದನ್ನು ಆರಿಸಿದರೆ ಅವನ ಪ್ರಕಾರ ಅದು ಅತಿಶ್ರೇಷ್ಠವೇ ಆಗಿದೆ.

## الزاد الخامس: أن يكسر الداعية الحواجز

## ಐದನೆ ಪೂರ್ವಸಿದ್ಧತೆ: ದಅ್ವಾ ಮಾಡುವವನು ಎಲ್ಲ ಅಡೆತಡೆಗಳನ್ನು ಧ್ವಂಸ ಮಾಡಬೇಕಾಗಿದೆ

ಐದನೆ ಪೂರ್ವಸಿದ್ಧತೆಯು ದಅ್ವಾ ಮಾಡುವವನು ತನ್ನ ಮತ್ತು ಜನರ ಮಧ್ಯೆಯಿರುವ ಎಲ್ಲ ಅಡೆತಡೆಗಳನ್ನು ಧ್ವಂಸ ಮಾಡಬೇಕು ಎಂಬುದಾಗಿದೆ. ಯಾಕೆಂದರೆ ದಅ್ವಾ ಮಾಡುವವರಲ್ಲಿ ಸೇರಿದ ನಮ್ಮ ಅನೇಕ ಸಹೋದರರಿಗೆ, ಜನರು ದುರಾಚಾರ ಮಾಡುವುದನ್ನು ಕಂಡರೆ ಅವರೆಡೆಗೆ ಸಾಗದಂತೆ ಮತ್ತು ಅವರಿಗೆ ಪ್ರಾಮಾಣಿಕವಾಗಿ ಉಪದೇಶ ಮಾಡದಂತೆ ಅವನ ಆತ್ಮಗೌರವ ಮತ್ತು ಆ ದುರಾಚಾರದೊಂದಿಗೆ ಅವನಿಗಿರುವ ಅಸಹ್ಯತೆಯು ಅವನನ್ನು ತಡೆಯುತ್ತದೆ. ಇದೊಂದು ಪ್ರಮಾದವಾಗಿದೆ. ಇದು ಯಾವತ್ತೂ ಹಿಕ್ಮತ್‌ನಲ್ಲಿ ಸೇರಿದ್ದಲ್ಲ. ಬದಲಾಗಿ ಹಿಕ್ಮತ್ ಎಂಬುದು ಅವರೆಡೆಗೆ ತೆರಳಿ ಅವರಿಗೆ ದಅ್ವಾ ಮಾಡುವುದಾಗಿದೆ, ಅವರಿಗೆ ತಲುಪಿಸಿಕೊಡುವುದಾಗಿದೆ, ಅವರಲ್ಲಿ ನಿರೀಕ್ಷೆಯನ್ನು ಹುಟ್ಟಿಸುವುದಾಗಿದೆ ಮತ್ತು ಅವರಲ್ಲಿ ಭಯವನ್ನು ಹುಟ್ಟಿಸುವುದಾಗಿದೆ. ಇವರು ದುಷ್ಟರಾಗಿದ್ದಾರೆ, ಇವರ ಸುತ್ತ ನಡೆಯಲು ಸಾಧ್ಯವಿಲ್ಲ ಎಂದು ನೀನು ಹೇಳಬಾರದು. ನೀನೊಬ್ಬ ಮುಸ್ಲಿಮ್ ದಾಈ ಆಗಿದ್ದು, ಇಂತಹ ಜನರ ನಡುವೆ ನಡೆಯಲು ನಿನಗೆ ಸಾಧ್ಯವಿಲ್ಲದಿದ್ದರೆ ಮತ್ತು ಇವರೆಡೆಗೆ ತೆರಳಿ ಇವರನ್ನು ಅಲ್ಲಾಹನೆಡೆಗೆ ದಅ್ವಾ ಮಾಡಲು ನಿನಗೆ ಸಾಧ್ಯವಿಲ್ಲದಿದ್ದರೆ ಇವರ ರಕ್ಷಣೆ ಮಾಡುವವರು ಯಾರು? ಅವರಂತಿರುವವರೇ ಅವರ ರಕ್ಷಣೆ ಮಾಡಬೇಕೇ? ಅಥವಾ ಇಲ್ಮ್ ಇಲ್ಲದವರು ಅವರ ರಕ್ಷಣೆ ಮಾಡಬೇಕೇ? ಎಂದಿಗೂ ಸಲ್ಲದು. ಆದ್ದರಿಂದಲೇ ದಅ್ವಾ ಮಾಡುವವನು ತಾಳ್ಮೆ ವಹಿಸಬೇಕಾಗಿದೆ. ನಾವು ಈ ಮೊದಲು ಹೇಳಿದ ತಾಳ್ಮೆ ಇದೇ ಆಗಿದೆ. ದಅ್ವಾ ಮಾಡುವವನು ತನ್ನ ಮನಸ್ಸನ್ನು ತಾಳ್ಮೆಯಲ್ಲಿಟ್ಟುಕೊಳ್ಳಬೇಕು, ಅದನ್ನು ಬಲವಂತಪಡಿಸಬೇಕು ಮತ್ತು ಯಾರಿಗೆ ದಅ್ವಾದ ಆವಶ್ಯಕತೆಯಿದೆಯೋ ಅವರಿಗೆ ತನ್ನ ದಅ್ವಾವನ್ನು ತಲುಪಿಸುವುದಕ್ಕಾಗಿ ತನ್ನ ಮತ್ತು ಜನರ ಮಧ್ಯೆಯಿರುವ ಅಡೆತಡೆಗಳನ್ನು ಧ್ವಂಸ ಮಾಡಬೇಕು. ಆದರೆ ಯಾರಾದರೂ ಇದನ್ನು ತನ್ನ ಯೋಗ್ಯತೆಗೆ ಕಳಂಕವೆಂದು ಭಾವಿಸುವುದಾದರೆ ಅದು (ಆ ಭಾವನೆಯು) ಪ್ರವಾದಿ (ﷺ)ರವರ ಮಾರ್ಗಕ್ಕೆ ವಿರುದ್ಧವಾದುದಾಗಿದೆ. ಎಲ್ಲರಿಗೂ ತಿಳಿದಿರುವಂತೆ ಪ್ರವಾದಿ (ﷺ)ರವರು ಹಜ್ಜ್‌ನ ಸಮಯದಲ್ಲಿ ಮಿನಾಗೆ ತೆರಳಿ ಅಲ್ಲಿ ಮುಶ್ರಿಕ್‌ಗಳ ಬಳಿಗೆ ಹೋಗಿ ಅವರನ್ನು ಅಲ್ಲಾಹನೆಡೆಗೆ ದಅ್ವಾ ಮಾಡುತ್ತಿದ್ದರು. ಪ್ರವಾದಿ(ﷺ)ರವರು ಅವರೊಂದಿಗೆ ಹೇಳುತ್ತಿದ್ದರು:

«أَلَا أَحَدٌ يَحْمِلُنِي حَتَّى أُبَلِّغَ كَلَامَ رَبِّي، فَإِنَّ قُرَيْشًا مَنَعَتْنِي أَنْ أُبَلِّغَ كَلَامَ رَبِّي»

**“ನಾನು ನನ್ನ ರಬ್ಬ್‌ನ ವಚನಗಳನ್ನು ತಲುಪಿಸಿಕೊಡುವುದಕ್ಕಾಗಿ ನನ್ನನ್ನು ಒಯ್ಯುವವರು ಯಾರಾದರೂ ಇದ್ದಾರೆಯೇ? ಯಾಕೆಂದರೆ ನಾನು ನನ್ನ ರಬ್ಬ್‌ನ ವಚನಗಳನ್ನು ತಲುಪಿಸಿಕೊಡದಂತೆ ಕುರೈಶೀಗಳು ನನ್ನನ್ನು ತಡೆದಿದ್ದಾರೆ.”** (56)

ಇದು ನಮ್ಮ ಪ್ರವಾದಿ, ನಮ್ಮ ಇಮಾಮ್ ಮತ್ತು ನಮ್ಮ ಮಾದರಿಯಾದ ಮುಹಮ್ಮದ್(ﷺ)ರವರ ಚರ್ಯೆಯಾಗಿದ್ದರೆ ಅಲ್ಲಾಹನೆಡೆಗೆ ದಅ್‌ವಾ ಮಾಡುವುದರಲ್ಲಿ ಅವರಂತಾಗುವುದು ನಮ್ಮ ಮೇಲೆ ಕಡ್ಡಾಯವಾಗಿದೆ.

---

**56** ಜಾಬಿರ್(رضي الله عنه)ರಿಂದ ವರದಿ: ಅವರು ಹೇಳಿದರು: ಹಜ್ಜ್‌ನ ಸಮಯದಲ್ಲಿ ಪ್ರವಾದಿ(ﷺ)ರವರು ತಮ್ಮನ್ನು ತಾವೇ ಜನರ ಮುಂದೆ ಪ್ರದರ್ಶಿಸುತ್ತಿದ್ದರು (ಅಂದರೆ ಅವರ ಮಧ್ಯೆ ಓಡಾಡುತ್ತಿದ್ದರು). (ಹಜ್ಜ್‌ಗೆ ಬರುವ ಎಲ್ಲ ಅರಬಿ ಗೋತ್ರದವರೊಂದಿಗೂ) ಅವರು ಕೇಳುತ್ತಿದ್ದರು: **ನನ್ನನ್ನು ಅವರ ಜನತೆಯೆಡೆಗೆ ಒಯ್ಯುವವರು ಯಾರಾದರೂ ಇದ್ದಾರೆಯೇ? ಯಾಕೆಂದರೆ ನಾನು ನನ್ನ ರಬ್ಬ್‌ನ ವಚನಗಳನ್ನು ತಲುಪಿಸಿಕೊಡದಂತೆ ಕುರೈಶೀಗಳು ನನ್ನನ್ನು ತಡೆದಿದ್ದಾರೆ.** [ಸುನನು ತ್ತಿರ್ಮಿದಿ 5/45; ಹದೀಸ್ ನಂ. 2925. ಅಶ್ಶೈಖ್ ಅಲ್‌ಅಲ್ಬಾನೀ ಇದನ್ನು ಸಹೀಹ್ ಎಂದಿದ್ದಾರೆ (ನೋಡಿ: ಸಹೀಹ್ ಸುನನಿ ತ್ತಿರ್ಮಿದಿ 3/168]

## الزاد السادس: أن يكون قلب الداعية منشرحًا لمن خالفه

## ಆರನೆ ಪೂರ್ವಸಿದ್ಧತೆ: ದಅ್‌ವಾ ಮಾಡುವವನ ಹೃದಯವು ವಿರುದ್ಧಾಭಿಪ್ರಾಯ ಹೊಂದಿದವನಿಗೆ ತೆರೆದುಕೊಳ್ಳಬೇಕಾಗಿದೆ

ಆರನೆ ಪೂರ್ವಸಿದ್ಧತೆಯು ದಅ್‌ವಾ ಮಾಡುವವನ ಹೃದಯವು ಅವನಿಗೆ ವಿರುದ್ಧವಾಗಿ ಅಭಿಪ್ರಾಯ ಹೊಂದುವವನಿಗೆ ತೆರೆದುಕೊಳ್ಳಬೇಕು ಎಂಬುದಾಗಿದೆ. ಪ್ರತ್ಯೇಕವಾಗಿ ವಿರುದ್ಧಾಭಿಪ್ರಾಯ ಹೊಂದುವವನ ನಿಯ್ಯತ್ ಉತ್ತಮವಾಗಿರುವಾಗ ಮತ್ತು ಅವನು ವಿರುದ್ಧಾಭಿಪ್ರಾಯ ಹೊಂದಿರುವುದು ಅವನ ಬಳಿಯಿರುವ ಪುರಾವೆಯು ಆವಶ್ಯಪಡುವುದರ ಆಧಾರದಲ್ಲಾಗಿರುವಾಗ. ಈ ವಿಷಯಗಳಲ್ಲಿ ಮನುಷ್ಯನು ಮೃದು ನಿಲುವನ್ನು ಹೊಂದಿರುವುದು ಅತ್ಯಾವಶ್ಯಕವಾಗಿದೆ. ಈ ವಿರುದ್ಧಾಭಿಪ್ರಾಯವನ್ನು ಶತ್ರುತ್ವ ಹಾಗೂ ದ್ವೇಷವನ್ನು ಹಬ್ಬಿಸುವುದಕ್ಕೆ ಒಂದು ಕಾರಣವನ್ನಾಗಿ ಮಾಡಬಾರದು. ಆದರೆ ಹಠಹಿಡಿದು ವಿರುದ್ಧಾಭಿಪ್ರಾಯ ತಾಳುವವನ ಹೊರತು. ಅಂದರೆ ಅವನಿಗೆ ಸತ್ಯವನ್ನು ಸ್ಪಷ್ಟಪಡಿಸಿದ ಬಳಿಕವೂ ಅವನು ತನ್ನ ಅಸತ್ಯದಲ್ಲೇ ಹಠ ಬಿಡದೆ ನಿಂತರೆ ಅವನ ಬಗ್ಗೆ ಜನರಿಗೆ ಎಚ್ಚರಿಕೆ ನೀಡುವುದರ ಮೂಲಕ ಅವನೊಂದಿಗೆ ವರ್ತಿಸಬೇಕಾದ ರೀತಿಯಲ್ಲಿ ವರ್ತಿಸುವುದು ಕಡ್ಡಾಯವಾಗಿದೆ. ಯಾಕೆಂದರೆ ಅವನಿಗೆ ಸತ್ಯವನ್ನು ವಿವರಿಸಿಕೊಟ್ಟಾಗ ಅದನ್ನು ಅನುಸರಿಸದೆ ಅವನು ಅವನ ಶತ್ರುತ್ವವನ್ನು ಬಹಿರಂಗಪಡಿಸಿದವನಾಗಿದ್ದಾನೆ.

ಜನರು ಭಿನ್ನಾಭಿಪ್ರಾಯ ತಾಳುವ ಕೆಲವು ಶಾಖಾಪರವಾದ (ಫರ್‌ಇಯ್ಯಃ) ವಿಷಯಗಳಿವೆ. ವಾಸ್ತವಿಕವಾಗಿ ಅವು ಅಲ್ಲಾಹು ಅವನ ದಾಸರಿಗೆ ವೈಶಾಲ್ಯತೆಯನ್ನು ಕರುಣಿಸಿರುವ ವಿಷಯಗಳಾಗಿವೆ. –ಆದರೆ ನಾನಿಲ್ಲಿ ಉದ್ದೇಶಿಸುವುದು ವಿರುದ್ಧಾಭಿಪ್ರಾಯ ಹೊಂದುವವನು ಕಾಫಿರ್ ಆಗುವ ಸ್ಥಿತಿಗೆ ತಲುಪುವಂತಹ ಮೂಲಭೂತ ವಿಷಯಗಳನ್ನಲ್ಲ– ಅವು ಅಲ್ಲಾಹು ಅವನ ದಾಸರಿಗೆ ವೈಶಾಲ್ಯತೆಯನ್ನು ಕರುಣಿಸಿರುವ ಮತ್ತು ಅದರಲ್ಲುಂಟಾಗುವ ಪ್ರಮಾದಗಳ ಬಗ್ಗೆ ವಿಶಾಲ ಮನೋಭಾವ ತಾಳುವಂತಹ ವಿಷಯಗಳಾಗಿವೆ. ಪ್ರವಾದಿ(ﷺ)ರವರು ಹೇಳಿದರು:

«إِذَا حَكَمَ الْحَاكِمُ فَاجْتَهَدَ فَأَصَابَ فَلَهُ أَجْرَانِ وَإِنْ أَخْطَأَ فَلَهُ أَجْرٌ وَاحِدٌ»

**“ಒಬ್ಬ ತೀರ್ಪುಗಾರನು ತೀರ್ಪು ನೀಡುವಾಗ ಇಜ್ತಿಹಾದ್ ಮಾಡಿ ಅವನ ತೀರ್ಪು ಕರಾರುವಾಕ್ಕಾದರೆ ಅವನಿಗೆ ಎರಡು ಪುಣ್ಯಗಳಿವೆ. ಅವನಿಗೆ ಪ್ರಮಾದ ಸಂಭವಿಸಿದರೆ ಅವನಿಗೆ ಒಂದು ಪುಣ್ಯವಿದೆ.”** (57)

ಆದ್ದರಿಂದ ಮುಜ್ತಹಿದ್ ಪುಣ್ಯದ ವೃತ್ತದಿಂದ ಎಂದೂ ಹೊರಹೋಗುವುದಿಲ್ಲ. ಅವನು ಹೇಳಿದ್ದು ಸರಿಯಾದರೆ ಅವನಿಗೆ ಎರಡು ಪುಣ್ಯಗಳಿವೆ. ಅವನು ಹೇಳಿದ್ದು ತಪ್ಪಾದರೆ ಅವನಿಗೆ ಒಂದು ಪುಣ್ಯವಿದೆ. ಜನರಲ್ಲಿ ಯಾರೂ ನಿನಗೆ ವಿರುದ್ಧವಾಗಿ ಅಭಿಪ್ರಾಯ ಹೊಂದಬಾರದೆಂದು ನೀನು ಇಚ್ಛಿಸುವಂತೆಯೇ ನೀನು ಕೂಡ ಅವರಿಗೆ ವಿರುದ್ಧವಾಗಿ ಅಭಿಪ್ರಾಯ ಹೊಂದಬಾರದೆಂದು ಅವರೂ ಇಚ್ಛಿಸುತ್ತಾರೆ. ಜನರು ನಿನ್ನ ಅಭಿಪ್ರಾಯವನ್ನು ಸ್ವೀಕರಿಸಬೇಕೆಂದು ನೀನು ಇಚ್ಛಿಸುವಂತೆ ಜನರು ಅವರ ಮಾತನ್ನು ಸ್ವೀಕರಿಸಬೇಕೆಂದು ನಿನಗೆ ವಿರುದ್ಧವಾಗಿ ಅಭಿಪ್ರಾಯ ಹೊಂದುವವರೂ ಇಚ್ಛಿಸುತ್ತಾರೆ. ಆದ್ದರಿಂದ ಭಿನ್ನಾಭಿಪ್ರಾಯವುಂಟಾದಾಗ ನಾವು ಮರಳಬೇಕಾದುದು ಅಲ್ಲಾಹು [ಅಝ್ಝ ವಜಲ್ಲ್] ಹೇಳಿದ ವಿಷಯದೆಡೆಗಾಗಿದೆ.

﴿ وَمَا ٱخْتَلَفْتُمْ فِيهِ مِن شَىْءٍ فَحُكْمُهُۥٓ إِلَى ٱللَّهِ ۚ ذَٰلِكُمُ ٱللَّهُ رَبِّى عَلَيْهِ تَوَكَّلْتُ وَإِلَيْهِ أُنِيبُ ﴿١٠﴾ ﴾

**“ನೀವು ಯಾವುದೇ ವಿಷಯದಲ್ಲಿ ಭಿನ್ನಾಭಿಪ್ರಾಯ ಹೊಂದಿದರೂ ಅದರ ಬಗ್ಗೆ ತೀರ್ಪು ನೀಡುವ ಹಕ್ಕಿರುವುದು ಅಲ್ಲಾಹುವಿಗಾಗಿದೆ. ಅವನೇ ನನ್ನ ರಬ್ಬ್ ಆಗಿರುವ ಅಲ್ಲಾಹು! ಅವನ ಮೇಲೆ ನಾನು ಭರವಸೆಯನ್ನಿಟ್ಟಿರುವೆನು. ಅವನೆಡೆಗೆ ನಾನು ವಿನಮ್ರತೆಯೊಂದಿಗೆ ಮರಳುವೆನು.”** (58)

ಅಲ್ಲಾಹು [ಅಝ್ಝ ವಜಲ್ಲ್] ಹೇಳುತ್ತಾನೆ:

﴿ يَٰٓأَيُّهَا ٱلَّذِينَ ءَامَنُوٓا۟ أَطِيعُوا۟ ٱللَّهَ وَأَطِيعُوا۟ ٱلرَّسُولَ وَأُو۟لِى ٱلْأَمْرِ مِنكُمْ ۖ فَإِن تَنَٰزَعْتُمْ

---

**57** ಅಮ್ರ್ ಇಬ್ನುಲ್ ಆಸ್(ರ)ರಿಂದ ವರದಿ: ಪ್ರವಾದಿ(ﷺ)ರವರು ಹೇಳಿದರು: **ಒಬ್ಬ ತೀರ್ಪುಗಾರನು ತೀರ್ಪು ನೀಡುವಾಗ ಇಜ್ತಿಹಾದ್ ಮಾಡಿ ತರುವಾಯ (ಅವನ ತೀರ್ಪು) ಕರಾರುವಾಕ್ಕಾದರೆ ಅವನಿಗೆ ಎರಡು ಪುಣ್ಯಗಳಿವೆ. ಅವನು ತೀರ್ಪು ನೀಡುವಾಗ ಇಜ್ತಿಹಾದ್ ಮಾಡಿ ತರುವಾಯ ಅವನಿಗೆ ಪ್ರಮಾದ ಸಂಭವಿಸಿದರೆ ಅವನಿಗೆ ಒಂದು ಪುಣ್ಯವಿದೆ.** [ಸಹೀಹುಲ್ ಬುಖಾರಿ 4/372; ಹದೀಸ್ ನಂ. 7352. ಸಹೀಹ್ ಮುಸ್ಲಿಮ್ 3/1342; ಹದೀಸ್ ನಂ. 1716]

**58** **ಕುರ್‌ಆನ್** 42:10

فِي شَيْءٍ فَرُدُّوهُ إِلَى ٱللَّهِ وَٱلرَّسُولِ إِن كُنتُمْ تُؤْمِنُونَ بِٱللَّهِ وَٱلْيَوْمِ ٱلْآخِرِ ذَٰلِكَ خَيْرٌ
وَأَحْسَنُ تَأْوِيلًا ﴿٥٩﴾

**“ಓ ಸತ್ಯವಿಶ್ವಾಸಿಗಳೇ! ನೀವು ಅಲ್ಲಾಹುವನ್ನು ಅನುಸರಿಸಿರಿ. (ಅವನ) ಸಂದೇಶವಾಹಕರನ್ನೂ ಅನುಸರಿಸಿರಿ. ನಿಮ್ಮಿಂದಲೇ ಇರುವ ಕಾರ್ಯ ನಿರ್ವಾಹಕರನ್ನೂ (ಅನುಸರಿಸಿರಿ). ನೀವು ಅಲ್ಲಾಹುವಿನಲ್ಲಿ ಮತ್ತು ಅಂತ್ಯದಿನದಲ್ಲಿ ವಿಶ್ವಾಸವಿಡುವವರಾಗಿದ್ದರೆ ನಿಮ್ಮ ಮಧ್ಯೆ ಯಾವುದೇ ವಿಷಯದಲ್ಲಾದರೂ ಭಿನ್ನಾಭಿಪ್ರಾಯ ತಲೆದೋರಿದರೆ ನೀವದನ್ನು ಅಲ್ಲಾಹುವಿನೆಡೆಗೂ ಸಂದೇಶವಾಹಕರೆಡೆಗೂ ಮರಳಿಸಿರಿ. ಅದು ಅತ್ಯುತ್ತಮವಾದುದೂ ಅತಿಸೂಕ್ತ ಪರ್ಯಾವಸಾನವುಳ್ಳದ್ದೂ ಆಗಿದೆ.”** [59]

ಆದ್ದರಿಂದ ಭಿನ್ನಾಭಿಪ್ರಾಯ ಹೊಂದುವ ಎಲ್ಲರೂ ಈ ಎರಡು ಆಧಾರ ಪ್ರಮಾಣಗಳೆಡೆಗೆ, ಅಂದರೆ ಅಲ್ಲಾಹನ ಗ್ರಂಥ ಮತ್ತು ಅವನ ರಸೂಲ್(ﷺ) ರವರ ಸುನ್ನತ್ತಿನೆಡೆಗೆ ಮರಳಬೇಕಾದುದು ಕಡ್ಡಾಯವಾಗಿದೆ. ಮನುಷ್ಯರಲ್ಲಿ ಸೇರಿದ ಯಾವುದಾದರೂ ವ್ಯಕ್ತಿಯ –ಅವನು ಯಾರೇ ಆಗಿದ್ದರೂ ಸರಿ– ಅಭಿಪ್ರಾಯವನ್ನು ಹಿಡಿದು ಅಲ್ಲಾಹನ ಮಾತು ಮತ್ತು ಅವನ ರಸೂಲ್(ﷺ)ರವರ ಮಾತಿಗೆ ವಿರೋಧವಾಗಿ ಸಾಗಲು ಯಾರಿಗೂ ಅನುಮತಿಯಿಲ್ಲ. ಆದ್ದರಿಂದ ನಿನಗೆ ಸತ್ಯವು ಮನದಟ್ಟಾದರೆ ಆ ವಿರುದ್ಧಾಭಿಪ್ರಾಯ ಹೊಂದಿದವನ (ಅಂದರೆ ಕುರ್‌ಆನ್ ಮತ್ತು ಸುನ್ನತ್ತಿಗೆ ವಿರುದ್ಧವಾಗಿ ಅಭಿಪ್ರಾಯ ಹೊಂದುವವನ) ಅಭಿಪ್ರಾಯವನ್ನು ಗೋಡೆಯಾಚೆಗೆ ಎಸೆಯಬೇಕಾಗಿದೆ. ಅವನು ಇಲ್ಮ್ ಮತ್ತು ದೀನ್‌ನಲ್ಲಿ ಎಷ್ಟು ದೊಡ್ಡ ಪದವಿಯನ್ನು ಹೊಂದಿದ್ದರೂ ಅವನ ಅಭಿಪ್ರಾಯದೆಡೆಗೆ ತಿರುಗಿ ಕೂಡ ನೋಡಬಾರದು. ಯಾಕೆಂದರೆ ಮನುಷ್ಯನಿಗೆ ಪ್ರಮಾದ ಸಂಭವಿಸುತ್ತದೆ. ಆದರೆ ಅಲ್ಲಾಹನ ಮಾತು ಮತ್ತು ಅವನ ರಸೂಲ್(ﷺ) ರವರ ಮಾತಿನಲ್ಲಿ ಯಾವುದೇ ಪ್ರಮಾದವೂ ಇಲ್ಲ.

ಸತ್ಯವನ್ನು ಅರಸುವುದರಲ್ಲಿ ಮತ್ತು ಅದರೆಡೆಗೆ ತಲುಪುವುದರಲ್ಲಿ ಅತ್ಯಾಸಕ್ತಿಯನ್ನು ಹೊಂದಿರುವ ಜನರು ವಿವಿಧ ಪಂಗಡಗಳಾಗಿ ಹೋಗುತ್ತಿದ್ದಾರೆಂಬುದನ್ನು ಆಲಿಸುವಾಗ ನನಗೆ ತುಂಬಾ ದುಃಖವುಂಟಾಗುತ್ತದೆ. ಅವರ ಪೈಕಿ ಪ್ರತಿಯೊಬ್ಬರಿಗೂ ನಿರ್ದಿಷ್ಟ ಹೆಸರು ಅಥವಾ ನಿರ್ದಿಷ್ಟ ಗುರುತುಗಳಿರುತ್ತವೆ. ವಾಸ್ತವವಾಗಿ ಇದೊಂದು ಪ್ರಮಾದವಾಗಿದೆ. ಅಲ್ಲಾಹು [ಅರ್ಝ್ಝ ವಜಲ್ಲ್] ನ ಧರ್ಮವು ಒಂದೇ ಆಗಿದೆ. ಇಸ್ಲಾಮಿನ ಸಮುದಾಯವು ಕೂಡ ಒಂದೇ ಆಗಿದೆ.

ಅಲ್ಲಾಹು [ಅರ್ಝ್ಝ ವಜಲ್ಲ್] ಹೇಳುತ್ತಾನೆ:

**59 ಕುರ್‌ಆನ್** 4:59

﴿ وَإِنَّ هَٰذِهِۦٓ أُمَّتُكُمۡ أُمَّةٗ وَٰحِدَةٗ وَأَنَا۠ رَبُّكُمۡ فَٱتَّقُونِ ٥٢ ﴾

**"ಖಂಡಿತವಾಗಿಯೂ ಇದು ನಿಮ್ಮ ಸಮುದಾಯವಾಗಿದೆ. ಏಕೈಕ ಸಮುದಾಯ. ನಾನು ನಿಮ್ಮ ರಬ್ಬ್ ಆಗಿರುವೆನು. ಆದ್ದರಿಂದ ನನ್ನನ್ನು ಭಯಪಟ್ಟು ಜೀವಿಸಿರಿ."** (60)

ಅಲ್ಲಾಹು [ತಆಲಾ] ಅವನ ಪ್ರವಾದಿ ಮುಹಮ್ಮದ್(ﷺ)ರವರೊಂದಿಗೆ ಹೇಳುತ್ತಾನೆ:

﴿ إِنَّ ٱلَّذِينَ فَرَّقُواْ دِينَهُمۡ وَكَانُواْ شِيَعٗا لَّسۡتَ مِنۡهُمۡ فِي شَيۡءٍۚ إِنَّمَآ أَمۡرُهُمۡ إِلَى ٱللَّهِ
ثُمَّ يُنَبِّئُهُم بِمَا كَانُواْ يَفۡعَلُونَ ١٥٩ ﴾

**"ತಮ್ಮ ಧರ್ಮವನ್ನು ವಿಭಜನೆ ಮಾಡಿದವರು ಮತ್ತು ವಿವಿಧ ಬಣಗಳಾಗಿ ಮಾರ್ಪಟ್ಟವರು ಯಾರೋ ಅವರೊಂದಿಗೆ ತಮಗೆ ಯಾವುದೇ ಸಂಬಂಧವೂ ಇಲ್ಲ. ಅವರ ವಿಷಯವು ಅಲ್ಲಾಹುವಿನೆಡೆಗೇ ಆಗಿದೆ. ಅವರು ಮಾಡುತ್ತಿದ್ದುದರ ಬಗ್ಗೆ ತರುವಾಯ ಅವನು ಅವರಿಗೆ ತಿಳಿಸಿಕೊಡುವನು."** (61)

ಅಲ್ಲಾಹು [ಅರ್ಝ್ಝ ವಜಲ್ಲ್] ಹೇಳುತ್ತಾನೆ:

﴿ ۞ شَرَعَ لَكُم مِّنَ ٱلدِّينِ مَا وَصَّىٰ بِهِۦ نُوحٗا وَٱلَّذِيٓ أَوۡحَيۡنَآ إِلَيۡكَ وَمَا
وَصَّيۡنَا بِهِۦٓ إِبۡرَٰهِيمَ وَمُوسَىٰ وَعِيسَىٰٓۖ أَنۡ أَقِيمُواْ ٱلدِّينَ وَلَا تَتَفَرَّقُواْ فِيهِۚ كَبُرَ عَلَى
ٱلۡمُشۡرِكِينَ مَا تَدۡعُوهُمۡ إِلَيۡهِۚ ٱللَّهُ يَجۡتَبِيٓ إِلَيۡهِ مَن يَشَآءُ وَيَهۡدِيٓ إِلَيۡهِ مَن
يُنِيبُ ١٣ ﴾

**"ನೂಹ್‌ರಿಗೆ ಆದೇಶಿಸಿರುವುದನ್ನು, ತಮಗೆ ದಿವ್ಯ ಸಂದೇಶವಾಗಿ ನೀಡಿರುವುದನ್ನು, ಇಬ್ರಾಹೀಮ್, ಮೂಸಾ, ಈಸಾ ಮುಂತಾದವರಿಗೆ ನಾವು ಆದೇಶಿಸಿರುವುದನ್ನು –ಅಂದರೆ ನೀವು ಧರ್ಮವನ್ನು ಸಂಸ್ಥಾಪಿಸಿರಿ ಮತ್ತು ಅದರಲ್ಲಿ ಭಿನ್ನರಾಗದಿರಿ ಎಂಬ ವಿಷಯವನ್ನು– ಅವನು ನಿಮಗೆ ಶರೀಅತ್ತನ್ನಾಗಿ ಮಾಡಿರುವನು. ನೀವು ಆ ಬಹುದೇವವಿಶ್ವಾಸಿಗಳನ್ನು ಯಾವುದರೆಡೆಗೆ ಆಹ್ವಾನಿಸುತ್ತಿರುವಿರೋ ಅದು ಅವರಿಗೆ**

**60** ಕುರ್‌ಆನ್ 23:52

**61** ಕುರ್‌ಆನ್ 6:159

**ಅತಿಭಾರವಾಗಿ ಕಾಣುತ್ತಿದೆ. ಅಲ್ಲಾಹು ಅವನಿಚ್ಛಿಸುವವರನ್ನು ಅವನ ಬಳಿಗೆ ಆರಿಸಿಕೊಳ್ಳುವನು. ವಿನಮ್ರತೆಯೊಂದಿಗೆ ಮರಳುವವರನ್ನು ಅವನು ತನ್ನೆಡೆಗಿರುವ ಮಾರ್ಗದಲ್ಲಿ ಮುನ್ನಡೆಸುವನು.”** (62)

ಇವು ಅಲ್ಲಾಹು ನಮಗೆ ನೀಡುವ ನಿರ್ದೇಶನಗಳಾಗಿದ್ದರೆ ಈ ನಿರ್ದೇಶನಗಳನ್ನು ಸ್ವೀಕರಿಸುವುದು ನಮ್ಮ ಮೇಲೆ ಕಡ್ಡಾಯವಾಗಿದೆ. ನಾವು ಒಂದೇ ಚಾಪೆಯಲ್ಲಿ ಕುಳಿತು ಸಂಶೋಧನೆ ಮಾಡಬೇಕಾದುದು ಕಡ್ಡಾಯವಾಗಿದೆ. ಸುಧಾರಣೆ ಮಾಡುವ ಮಾರ್ಗದಲ್ಲಿ ನಾವು ಪರಸ್ಪರ ತರ್ಕಿಸಬೇಕಾದುದು ಕಡ್ಡಾಯವಾಗಿದೆ. ವಿಮರ್ಶೆ ಮಾಡುವ ಮತ್ತು ಸೇಡು ತೀರಿಸುವ ಮಾರ್ಗದಲ್ಲಲ್ಲ. ಆದ್ದರಿಂದ ಯಾವ ಮನುಷ್ಯನು ತನ್ನ ಅಭಿಪ್ರಾಯವನ್ನು ಗೆಲ್ಲಿಸುವ ಉದ್ದೇಶದಿಂದ ಮತ್ತು ಇತರರ ಅಭಿಪ್ರಾಯವನ್ನು ಕೀಳಾಗಿಸುವ ಉದ್ದೇಶದಿಂದ ತರ್ಕಿಸುತ್ತಾನೋ, ಅಥವಾ ಸುಧಾರಣೆ ಮಾಡುವುದನ್ನು ಬಿಟ್ಟು ವಿಮರ್ಶೆ ಮಾಡುವುದನ್ನು ಉದ್ದೇಶಿಸುತ್ತಾನೋ, ಹೆಚ್ಚಿನ ಸಂದರ್ಭಗಳಲ್ಲೂ ಅದರ ಫಲಿತಾಂಶವು ಅಲ್ಲಾಹು ಮತ್ತು ಅವನ ರಸೂಲ್(ﷺ)ರವರಿಗೆ ತೃಪ್ತಿ ನೀಡದ ರೀತಿಯಲ್ಲೇ ಆಗಿರುತ್ತದೆ. ಆದ್ದರಿಂದ ಇಂತಹ ವಿಷಯಗಳಲ್ಲಿ ನಾವು ಏಕೈಕ ಸಮುದಾಯವಾಗಿರಬೇಕಾದುದು ನಮ್ಮ ಮೇಲೆ ಕಡ್ಡಾಯವಾಗಿದೆ. ಜನರಲ್ಲಿ ಯಾರೂ ಪ್ರಮಾದವೆಸಗುವುದಿಲ್ಲವೆಂದು ನಾನು ಹೇಳುವುದಿಲ್ಲ. ಎಲ್ಲರೂ ಪ್ರಮಾದವೆಸಗುತ್ತಾರೆ ಮತ್ತು ಸರಿಯಾದುದನ್ನೂ ಹೇಳುತ್ತಾರೆ. ಆದರೆ ಇಲ್ಲಿ ತರ್ಕವಿರುವುದು ಆ ಪ್ರಮಾದವನ್ನು ಸರಿಪಡಿಸುವ ವಿಧಾನದಲ್ಲಾಗಿದೆ. ನಾನು ಅವನ ಬಗ್ಗೆ ಪರದೂಷಣೆ ಮಾಡುವುದು ಮತ್ತು ಅವನ ಚಾರಿತ್ರ್ಯವನ್ನು ಕಳಂಕಗೊಳಿಸುವುದು ಅವನ ಪ್ರಮಾದವನ್ನು ಸರಿಪಡಿಸುವ ವಿಧಾನವಲ್ಲ. ಬದಲಾಗಿ ಪ್ರಮಾದವನ್ನು ಸರಿಪಡಿಸುವ ವಿಧಾನವು ಅವನನ್ನು ಸುಧಾರಣೆ ಮಾಡುವುದಾಗಿದೆ. ಅಂದರೆ ಅವನ ಜೊತೆಗೆ ಕುಳಿತು ಅವನೊಂದಿಗೆ ಸಂವಾದ ಮಾಡುವುದಾಗಿದೆ. ಆದರೆ ಆ ಬಳಿಕವೂ ಆ ವ್ಯಕ್ತಿ ಅವನ ಹಟದಲ್ಲಿ ಮತ್ತು ಅವನು ಯಾವ ಪ್ರಮಾದದಲ್ಲಿರುವನೋ ಆ ಪ್ರಮಾದದಲ್ಲಿ ಅಚಲವಾಗಿ ನಿಂತರೆ, ಆಗ ನನಗೆ ವಿನಾಯಿತಿಯಿದೆ. ನನಗೆ ಹಕ್ಕೂ ಇದೆ. ಮಾತ್ರವಲ್ಲ, ಅವನ ಪ್ರಮಾದವನ್ನು ಬಹಿರಂಗಪಡಿಸುವುದು ಮತ್ತು ಅವನ ಪ್ರಮಾದದ ಬಗ್ಗೆ ಜನರಿಗೆ ಎಚ್ಚರಿಕೆ ನೀಡುವುದು ನನ್ನ ಮೇಲೆ ಕಡ್ಡಾಯವಾಗಿದೆ. ಈ ವಿಧಾನವನ್ನು ಅನುಸರಿಸುವುದರಿಂದ ಸಮಸ್ಯೆಗಳು ಬಗೆಹರಿಯುತ್ತವೆ. ಆದರೆ ವಿವಿಧ ಪಂಗಡಗಳಾಗುವುದು, ವಿವಿಧ ಪಕ್ಷಗಳಾಗುವುದರ ಬಗ್ಗೆ ಹೇಳುವುದಾದರೆ ಅದರಿಂದ ಯಾರಿಗೂ ಸಂತೋಷವಾಗುವುದಿಲ್ಲ. ಇಸ್ಲಾಮ್ ಮತ್ತು ಮುಸ್ಲಿಮರ ಶತ್ರುಗಳಿಗೆ ಹೊರತು.

ಅಲ್ಲಾಹು ನಮ್ಮ ಹೃದಯಗಳನ್ನು ಅವನ ಆಜ್ಞಾಪಾಲನೆಯ ಮೇಲೆ ಒಗ್ಗೂಡಿಸಲು, ಅಲ್ಲಾಹು ಮತ್ತು ಅವನ ರಸೂಲ್(ﷺ)ರೆಡೆಗೆ ನಮ್ಮ ಭಿನ್ನಾಭಿಪ್ರಾಯಗಳನ್ನು

---

**62 ಕುರ್‌ಆನ್** 42:13

ಒಯ್ಯುದ್ದ ತೀರ್ಪು ಅರಸಲು, ನಮ್ಮ ನಿಯ್ಯತ್ತನ್ನು ನಿಷ್ಕಳಂಕಗೊಳಿಸಲು ಮತ್ತು ಅವನ ಶರೀಅತ್ತಿನ ಬಗ್ಗೆ ನಮಗೆ ಅಜ್ಞಾತವಾಗಿರುವುದನ್ನು ನಮಗೆ ವಿವರಿಸಿಕೊಡಲು ನಾನು ಅಲ್ಲಾಹನೊಂದಿಗೆ ಪ್ರಾರ್ಥಿಸುತ್ತೇನೆ. ಖಂಡಿತವಾಗಿಯೂ ಅವನು ಪರಮ ಉದಾರಿಯೂ ಆದರಣೀಯನೂ ಆಗಿದ್ದಾನೆ.

ಸರ್ವಸ್ತುತಿ ಸರ್ವಲೋಕಗಳ ರಬ್ಬ್ ಆಗಿರುವ ಅಲ್ಲಾಹನಿಗೆ. ಅವನ ಸಲಾತ್ ಮತ್ತು ಸಲಾಮ್ ನಮ್ಮ ಪ್ರವಾದಿಯಾದ ಮುಹಮ್ಮದ್(ﷺ)ರವರ ಮೇಲೆ ಅವರ ಕುಟುಂಬದ ಮೇಲೆ ಮತ್ತು ಅವರ ಸಹಾಬಾಗಳೆಲ್ಲರ ಮೇಲೆ ಇರಲಿ.

## ನಮ್ಮ ಇತರ ಪ್ರಕಟಣೆಗಳು

1. ಪ್ರವಾದಿ(ﷺ)ರವರ ಸುನ್ನತ್ ಅನುಸರಿಸುವ ಹೊಣೆಗಾರಿಕೆ ಮತ್ತು ಅದನ್ನು ನಿಷೇಧಿಸುವವರ ಸತ್ಯ ನಿಷೇಧತನ
2. ಮಾನವಕುಲದಲ್ಲಿ ಶಿರ್ಕ್ ಸಾಗಿ ಬಂದ ದಾರಿ
3. ತವಸ್ಸುಲ್ –ಅದರ ವಿಧಗಳು ಮತ್ತು ವಿಧಿಗಳು
4. ದಿಕ್ರ್‌ಗಳು ಪ್ರವಾದಿ(ﷺ)ರವರ ವಚನಗಳಿಂದ
5. ತೌಹೀದ್‌ನ ನೈಜ ವಿಶ್ವಾಸ
6. ಪ್ರವಾದಿ ನಮಾರ್ಝ್ ಕ್ರಮ (ಸಂಕ್ಷಿಪ್ತವಾಗಿ)
7. ಅಹ್ಲು ಸುನ್ನ ವಲ್ ಜಮಾಅತಿನ ವಿಶ್ವಾಸ
8. ಹಜ್ ಮತ್ತು ಉಮ್ರಾ
9. ಪ್ರವಾದಿ(ﷺ)ರವರ ಮರಣ –ದುರಂತ ಮತ್ತು ಪರಿಣಾಮ
10. ದುಲ್‌ಹಜ್ ಹತ್ತರ ಶ್ರೇಷ್ಟತೆಗಳು
11. ಇಸ್ಲಾಮನ್ನು ಅರಿಯಲು ಒಂದು ಸಂಕ್ಷಿಪ್ತ, ಸಚಿತ್ರ ಮಾರ್ಗದರ್ಶಿ
12. ಆಧುನಿಕವಾದಿಗಳು ಮತ್ತು ಹದೀಸ್ ನಿಷೇಧಿಗಳು

ಪ್ರತಿಗಳಿಗಾಗಿ ಸಂಪರ್ಕಿಸಿರಿ:

# Manhaj-Al-Ambiya

## CD/DVD & Book Store

Basement, Pioneer Complex, Near Masjid Ibrahim Al-Khaleel
Nellikai Road, Mangalore – 575001

**Telephone: (91) 824 244 3484**
**Mobile : 96110 71403**

*Email : iicmanglore@gmail.com*

# Manhaj-Al-Ambiya

Call & Guidance Centre ®

Mangalore

*Email : al.ambiya@gmail.com*

**ಪವಿತ್ರ ಕುರ್‌ಆನ್ ಮತ್ತು ಪ್ರವಾದಿ ಸುನ್ನತ್ ಆಧಾರಿತ ಪುಸ್ತಕಗಳಿಗೆ**

**ಮತ್ತು**

**ಇಸ್ಲಾಮಿಕ್ ಸಿಡಿ/ಡಿವಿಡಿಗಳಿಗೆ**

**ನಮ್ಮ ಈ ಕೆಳಗಿನ ಶಾಖೆಗೆ ಭೇಟಿ ನೀಡಿರಿ**

# CD/DVD & Book Store

Basement, Pioneer Complex, Near Masjid Ibrahim Al-Khaleel
Nellikai Road, Mangalore – 575001

**Telephone: (91) 824 244 3484**
**Mobile : 96110 71403**

*Email : iicmanglore@gmail.com*

ಇಸ್ಲಾಮಿನ ಕುರಿತು ಮುಸ್ಲಿಮ್ ಮತ್ತು ಮುಸ್ಲಿಮೇತರರಲ್ಲಿರುವ
ತಪ್ಪುಕಲ್ಪನೆಗಳ ನಿವಾರಣೆಗಾಗಿ

# ಸತ್ಯ ಸಾರಥಿ

ಮಾಸಿಕ




**ಓದಿರಿ... ಪ್ರೋತ್ಸಾಹಿಸಿರಿ... ಚಂದಾದಾರರಾಗಿರಿ...**

**ಚಂದಾದರ ವಾರ್ಷಿಕ : ₹ 120.00**
**ಅರ್ಧವಾರ್ಷಿಕ : ₹ 60.00**

ಹೆಚ್ಚಿನ ಮಾಹಿತಿಗಳಿಗಾಗಿ ಸಂಪರ್ಕಿಸಿರಿ:

**ಸತ್ಯಸಾರಥಿ ಕನ್ನಡ ಮಾಸಿಕ,**
**14–37 ಜಿ(1), ವಿನಾಯಕ ಕಾಂಪ್ಲೆಕ್ಸ್,**
**ಕೈಕಂಬ, ಬಿ. ಸಿ. ರೋಡ್, ಬಂಟ್ವಾಳ ದ.ಕ.**
**ಮೊಬೈಲ್: 9632897299**
*email: satyasarathi2011@gmail.com*